ಸಂಪುಟ: 05 ಸಂಚಿಕೆ: 330 ಪುಟಗಳು: 08 ಗುರುವಾರ 12 ಫೆಬ್ರವರಿ 2026

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ

RNI No. KARKAN/2021/80833

9448225696 +91 8035841833 ₹5

**ಮುಂಜಾನೆ ಮಾತು**

ಅನುಭವವು ಜಗತ್ತಿನ ಸರ್ವಶ್ರೇಷ್ಠ ಶಿಕ್ಷಕ, ಉಸಿರಾಡುವವರೆಗೂ ಕಲಿಕೆ, ಜ್ಞಾನಾರ್ಜನೆಯೇ ಜೀವನದ ಗುರಿಯಾಗಿರಲಿ.

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ


## ವಿನ್ಯಾಸಗಾರರು ಬೇಕಾಗಿದ್ದಾರೆ



ಪೇಜ್ ಮೇಕರ್, ಇನ್ ಡಿಸೈನರ್, ಕನ್ನಡ ಟೈಪ್ ಮಾಡಬಲ್ಲವರು. ಬೆಂಗಳೂರಿನಲ್ಲಿ ವಾಸವಿರುವ ಬೆಂಗಳೂರು ಕಚೇರಿಯಲ್ಲಿ ಕೆಲಸ ಮಾಡಲು ಇಚ್ಚಿಸುವ (4 ಮಂದಿ) ಪತ್ರಿಕೋದ್ಯಮದಲ್ಲಿ ತೀವ್ರ, ಆಸಕ್ತಿ, ಕನ್ನಡ ಭಾಷೆಯ ಮೇಲೆ ಹಿಡಿತ, ಸಾಮಾನ್ಯ ಜ್ಞಾನ, ಓದುವ ಹವ್ಯಾಸ ಹಾಗೂ ಉತ್ಸಾಹ ಕಾತುರವಿರುವ ಆಸಕ್ತರಿಗೆ ನಿರ್ದಿಷ್ಟ ಪದವಿಯ ಅಗತ್ಯವಿಲ್ಲ. ವಯೋಮಿತಿ ಗರಿಷ್ಠ 25 ವರ್ಷ.

ಆಸಕ್ತರು ಕೂಡಲೇ ಈ ಕೆಳಗಿನ ವಿಳಾಸಕ್ಕೆ ತಮ್ಮ ಪೂರ್ಣ ವಿವರಗಳುಳ್ಳ ಅರ್ಜಿ ಸಲ್ಲಿಸಿ ಅಥವಾ ಮುಖತಃ ಭೇಟಿ ನೀಡಿ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ

**9448225696**

ಉದಯ ವಾಹಿನಿ

#: 1230 'JAYAMAHAL 13th cross, 2nd phase, Girinagar, Bangalore-560085. (Near to bangalore one park, opposite mandya medical)
udayavahininews@gmail.com


## ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತು ತಪ್ಪಲ್ಲ: ಡಿ.ಕೆ. ಸುರೇಶ್

• ಉದಯವಾಹಿನಿ, ಬೆಂಗಳೂರು

'ಕೊಟ್ಟ ಮಾತಿನಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ನಡೆಯುತ್ತಾರೆ ಎಂಬ ಭರವಸೆ ನನಗಿದೆ' ಎಂದು ಬಮೂಲ್ ಅಧ್ಯಕ್ಷ ಡಿ.ಕೆ. ಸುರೇಶ್ ವಿಶ್ವಾಸ ವ್ಯಕ್ತಪಡಿಸಿದರು. 'ಯತೀಂದ್ರ ಸಿದ್ದರಾಮಯ್ಯ ಏನು ಹೇಳಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ಅವರಷ್ಟು ತಿಳಿವಳಿಕೆ ಇಲ್ಲ. ಅವರಷ್ಟು ದೊಡ್ಡವರೂ ನಾವಲ್ಲ. ಅವರು ಏನು ಹೇಳುತ್ತಾರೊ ಅದೇ ವೇದವಾಕ್ಯ' ಎಂದರು. 'ನಮಗೆ ಸಿಗುವ ನೋಟಿಸ್ ಯತೀಂದ್ರ ಅವರಿಗೆ ಏಕಿಲ್ಲ' ಎಂಬ ಶಾಸಕ ಇಕ್ಬಾಲ್ ಹುಸೇನ್ ಅವರ ಹೇಳಿಕೆಯ ಬಗ್ಗೆ ಕೇಳಿದಾಗ, 'ಇಕ್ಬಾಲ್ ಹುಸೇನ್ ಹೇಳಿರುವುದರಲ್ಲಿ ತಪ್ಪೇನೂ ಇಲ್ಲ. ಎಲ್ಲರಿಗೂ ಒಂದೇ ನೀತಿ ಇರಬೇಕು' ಎಂದರು. 'ಕಾಂಗ್ರೆಸ್ ಪಕ್ಷ ಸರ್ವ ಧರ್ಮ, ಸರ್ವ ಪಕ್ಷಗಳ ನಾಯಕರನ್ನು ಒಳಗೊಂಡಿದೆ. ಇಲ್ಲಿ ಬಿಜೆಪಿ, ಜೆಡಿಎಸ್, ಬಿಎಸ್‌ಪಿಗೆ ಸೇರಿದವರಿದ್ದಾರೆ. ನಮ್ಮಲ್ಲಿ ಹೊರಗಿನಿಂದ ಬಂದವರಿಗೆ ಮೊದಲ ಆದ್ಯತೆ. ಆ ನಂತರ ಕಾಂಗ್ರೆಸಿಗರಿಗೆ ಆದ್ಯತೆ. ಅತಿಥಿಗಳನ್ನು ಗೌರವಿಸುವುದೇ ಕಾಂಗ್ರೆಸ್ ಪಕ್ಷದ ಗುರಿ' ಎಂದರು. ನೀವು ಮತ್ತು ಡಿ.ಕೆ ಶಿವಕುಮಾರ್ ತಾಳ್ಮೆ ಬಗ್ಗೆ ಮಾತನಾಡುತ್ತಿದ್ದೀರಿ' ಎಂದಾಗ, 'ಎಲ್ಲದಕ್ಕೂ ಕಾಲವೇ ಉತ್ತರ ನೀಡಲಿದೆ' ಎಂದರು. 'ಆ ಕಾಲ ಹತ್ತಿರಕ್ಕೆ ಬರುತ್ತಿದೆಯೇ' ಎಂಬ ಪ್ರಶ್ನೆಗೆ, 'ನಾನು ಹಾಗೆ ಭಾವಿಸಿದ್ದೇನೆ' ಎಂದಷ್ಟೇ ಹೇಳಿದರು. ನಾನು ಆಕಾಂಕ್ಷಿಯಲ್ಲ: 'ನಾನು ಕೆಎಂಎಫ್ ಅಧ್ಯಕ್ಷ ಸ್ಥಾನದ ಆಕಾಂಕ್ಷಿ ಅಲ್ಲ. ಪಕ್ಷ ಹಾಗೂ ಸರ್ಕಾರದ ತೀರ್ಮಾನದಂತೆ ಆಗುತ್ತದೆ. ಲಾಬಿ ಮಾಡಿ ಗಿಟ್ಟಿಸಿಕೊಳ್ಳುವಂಥದ್ದು ಏನೂ ಇಲ್ಲ' ಎಂದರು.

## ಮುಖ್ಯಮಂತ್ರಿ ಸಿದ್ದರಾಮಯ್ಯ ಆಪ್ತರ ವಿದೇಶ ಪ್ರವಾಸ

• ಉದಯವಾಹಿನಿ, ಬೆಂಗಳೂರು

ಪಶು ಸಂಗೋಪನಾ ಸಚಿವ ಕೆ. ವೆಂಕಟೇಶ್ ನೇತೃತ್ವದಲ್ಲಿ 20ಕ್ಕೂ ಹೆಚ್ಚು ಶಾಸಕರು ಮತ್ತು ವಿಧಾನ ಪರಿಷತ್ ಸದಸ್ಯರು ಇದೇ 16ರಿಂದ ಮಾರ್ಚ್ 3 ರವರೆಗೆ ಆಸ್ಟ್ರೇಲಿಯಾ ಮತ್ತು ನ್ಯೂಜಿಲೆಂಡ್ ಪ್ರವಾಸ ಕೈಗೊಂಡಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಪ್ತ ವಲಯದಲ್ಲಿರುವ ಸಚಿವರು ಮತ್ತು ಶಾಸಕರ ಈ ಪ್ರವಾಸವು ರಾಜ್ಯ ರಾಜಕೀಯ ವಲಯದಲ್ಲಿ ನಾನಾ ಚರ್ಚೆಗೆ ಗ್ರಾಸವಾಗಿದೆ.

ಪ್ರವಾಸ ಹೋಗುವವರ ಪಟ್ಟಿಯಲ್ಲಿ ಹಂಪನಗೌಡ ಬಾದರ್ಲಿ, ಬಿ.ದೇವೇಂದ್ರಪ್ಪ, ಯಶವಂತರಾಯ ಗೌಡ ವಿ ಪಾಟೀಲ, ಬಿ.ಎಂ.ನಾಗರಾಜ, ಜೆ.ಟಿ. ಪಾಟೀಲ, ಅಲ್ಲಮಪ್ರಭು ಪಾಟೀಲ, ಸಿ. ಪುಟ್ಟರಂಗಶೆಟ್ಟಿ, ಬಸನಗೌಡ ದದ್ದಲ್, ಎ.ಆರ್. ಕೃಷ್ಣಮೂರ್ತಿ, ಬಸನಗೌಡ ತುರ್ವಿಹಾಳ, ಎಚ್.ಡಿ. ತಮ್ಮಯ್ಯ ಮುಂತಾದವರ ಹೆಸರಿದೆ. ಪ್ರವಾಸ ಬಗ್ಗೆ ಖಚಿತಪಡಿಸಿದ ಚಾಮರಾಜನಗರ ಕ್ಷೇತ್ರದ ಶಾಸಕ ಪುಟ್ಟರಂಗ ಶೆಟ್ಟಿ, 'ಯಾವುದೇ ಸಮಿತಿಯಿಂದ ವಿದೇಶ ಪ್ರವಾಸ ಹೋಗುತ್ತಿಲ್ಲ. ಶಾಸಕರ ವಿದೇಶ ಪ್ರವಾಸದ ನೇತೃತ್ವವನ್ನು ಸಚಿವ ವೆಂಕಟೇಶ್ ವಹಿಸಿದ್ದಾರೆ. ತಂಡದಲ್ಲಿ ಯಾರೆಲ್ಲ ಇದ್ದಾರೆಂದು ಗೊತ್ತಿಲ್ಲ' ಎಂದರು. ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದ ಅವರು, 'ಬಜೆಟ್ ಒಳಗೆ ವಾಪಸ್ ಬರುತ್ತೇವೆ. ಪ್ರವಾಸದ ಬಗ್ಗೆ ಮುಖ್ಯಮಂತ್ರಿಯವರ ಗಮನಕ್ಕೆ ಇದ್ದೇ ಇರುತ್ತದೆ' ಎಂದೂ ಹೇಳಿದರು. 'ಈ ಪ್ರವಾಸವನ್ನು ಶಾಸಕರೇ ಯೋಜಿಸಿರಬಹುದು ಯಾರಾದರೂ ಪ್ರಾಯೋಜಕತ್ವ ವಹಿಸಿರಬಹುದು. ಇದಕ್ಕೂ ಶಿವಕುಮಾರ್ ಅವರಿಗೂ ಯಾವುದೇ ಸಂಬಂಧ ಇಲ್ಲ' ಎಂದರು.

ರಾಷ್ಟ್ರಗೀತೆ 'ಜನಗಣಮನ'ದಂತೆಯೇ ಎಲ್ಲಾ ಸರ್ಕಾರಿ ಕಾರ್ಯಕ್ರಮಗಳು ಸೇರಿದಂತೆ ಶಾಲೆಗಳಲ್ಲಿ ಇನ್ನಮುಂದೆ 'ವಂದೇ ಮಾತರಂ' ಗೀತೆ ಹಾಡುವುದು ಕಡ್ಡಾಯಗೊಳಿಸಿ ಕೇಂದ್ರ ಗೃಹ ಸಚಿವಾಲಯ ಆದೇಶ ಹೊರಡಿಸಿದೆ. ರಾಷ್ಟ್ರಗೀತೆಗೂ ಮುನ್ನ 3 ನಿಮಿಷ 10 ಸೆಂಕೆಂಡ್‌ನ 'ವಂದೇ ಮಾತರಂ'ನ 6 ಚರಣಗಳನ್ನು ಹಾಡಬೇಕು. ಹಾಗೆಯೇ ಗೀತೆಯನ್ನು ನುಡಿಸುವಾಗ ಅಥವಾ ಹಾಡುವಾಗ ಎಲ್ಲರೂ ಕಡ್ಡಾಯವಾಗಿ ಎದ್ದು ನಿಲ್ಲಬೇಕು ಎಂದು ಗೃಹ ಸಚಿವಾಲಯ ಪ್ರಕಟಣೆಯಲ್ಲಿ ಉಲ್ಲೇಖಿಸಿದೆ.

# ಇನ್ಮುಂದೆ ವಂದೇ ಮಾತರಂ

ವಂದೇ ಮಾತರಂ ಕಡ್ಡಾಯ!



## ಕೇಂದ್ರ ಸರ್ಕಾರದಿಂದ ವಂದೇ ಮಾತರಂಗೆ ಹೊಸ ಗೈಡ್‌ಲೈನ್ಸ್!

### ಎಲ್ಲೆಲ್ಲಿ ಗೈಡ್‌ಲೈನ್ಸ್

**ಕಡ್ಡಾಯ**

- ಪ್ರಶಸ್ತಿ ಪ್ರದಾನ ಸಮಾರಂಭಗಳಲ್ಲಿ
- ರಾಷ್ಟ್ರಪತಿಗಳು ಹಾಡೋ ಕಾರ್ಯಕ್ರಮಗಳಲ್ಲಿ
- ಸರ್ಕಾರಿ ಕಚೇರಿಗಳು, ಸರ್ಕಾರಿ ಸಮಾರಂಭ

**ಕಡ್ಡಾಯವಲ್ಲ**

- ಸಿನಿಮಾ ಮಂದಿರಗಳಲ್ಲಿ
- ಯಾವುದೇ ಖಾಸಗಿ ಸಮಾರಂಭದಲ್ಲಿ
- ಧಾರ್ಮಿಕ ಅಥವಾ ಸಾಮಾಜಿಕ ಸಭೆಯಲ್ಲಿ

### ಸಿನಿಮಾ ಹಾಲ್‌ಗಳಿಗಿಲ್ಲ ನಿಯಮ

ಸಿನಿಮಾ ಮಂದಿರಗಳಿಗೆ ಹೊಸ ನಿಯಮಗಳಿಂದ ವಿನಾಯಿತಿ ನೀಡಲಾಗಿದೆ. ಇದರರ್ಥ ವಂದೇ ಮಾತರಂ ನುಡಿಸುವುದು ಮತ್ತು ಚಿತ್ರದ ಮೊದಲು ನಿಲ್ಲುವುದು ಇನ್ನು ಮುಂದೆ ಕಡ್ಡಾಯವಲ್ಲ. ಇನ್ನು ಮುಂದೆ ರಾಷ್ಟ್ರೀಯ ಗೀತೆಯ ಅಧಿಕೃತ ಆವೃತ್ತಿಯನ್ನು ಮಾತ್ರ ಹಾಡಲಾಗುವುದು ಅಥವಾ ನುಡಿಸಲಾಗುವುದು ಮತ್ತು ಅದನ್ನು ಸಾಮೂಹಿಕ ಗಾಯನದೊಂದಿಗೆ ಪ್ರಸ್ತುತಪಡಿಸಲಾಗುವುದು ಎಂದು ಸಚಿವಾಲಯ ಹೇಳಿದೆ.



ಕೇಂದ್ರದ ಮಹತ್ವದ ಹೆಜ್ಜೆ

• ಉದಯವಾಹಿನಿ, ನವದೆಹಲಿ

ರಾಷ್ಟ್ರೀಯ ಗೀತೆಯನ್ನು ಪದ್ಮ ಪ್ರಶಸ್ತಿ ಸೇರಿದಂತೆ ನಾಗರಿಕ ಪ್ರಶಸ್ತಿ ಪ್ರದಾನ ಸಮಾರಂಭಗಳಲ್ಲಿ ಮತ್ತು ರಾಷ್ಟ್ರಪತಿಯವರು ಭಾಗವಹಿಸುವ ಎಲ್ಲಾ ಇತರ ಕಾರ್ಯಕ್ರಮಗಳಲ್ಲಿ ನುಡಿಸಬೇಕು. ಈ ಸಂದರ್ಭದಲ್ಲಿ ಎದ್ದು ನಿಲ್ಲುವುದು ಕಡ್ಡಾಯವಲ್ಲದಿದ್ದರೂ, ಸಿನಿಮಾ ಮಂದಿರಗಳಂತಹ ಸಾರ್ವಜನಿಕ ಸ್ಥಳಗಳಲ್ಲಿಯೂ ಇದನ್ನು ನುಡಿಸಲಾಗುತ್ತಿದೆ.

ತ್ರಿವರ್ಣ ಧ್ವಜ ಹಾರಿಸುವುದು ಮತ್ತು ಔಪಚಾರಿಕ ಕಾರ್ಯಕ್ರಮಗಳಲ್ಲಿ ರಾಷ್ಟ್ರಪತಿಗಳ ಆಗಮನ ಸೇರಿದಂತೆ ಮಹತ್ವದ ಸಂದರ್ಭಗಳಲ್ಲಿ ವಂದೇ ಮಾತರಂನ 6 ಚರಣಗಳ ಪಠಣವು ಕಡ್ಡಾಯವಾಗಿರುತ್ತದೆ. ರಾಷ್ಟ್ರಗೀತೆಗೆ ಅಡ್ಡಿಪಡಿಸುವ ಅಥವಾ ಇತರರು ಗೌರವಿಸುವುದನ್ನು ತಡೆಯುವ ಯಾವುದೇ ವ್ಯಕ್ತಿಗೆ ಗರಿಷ್ಠ ಮೂರು ವರ್ಷಗಳ ಜೈಲು ಶಿಕ್ಷೆ ವಿಧಿಸಲಾಗುತ್ತದೆ.

ಸರ್ಕಾರಿ ಸಂಸ್ಥೆಗಳಲ್ಲಿ ಏಕರೂಪತೆ ಮತ್ತು ಶಿಷ್ಟಾಚಾರವನ್ನು ಖಚಿತಪಡಿಸಿಕೊಳ್ಳುವ ಗುರಿಯನ್ನು ಈ ಕ್ರಮ ಹೊಂದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. 2025ರ ಡಿಸೆಂಬರ್‌ನಲ್ಲಿ 'ವಂದೇ ಮಾತರಂ ಗೀತೆಗೆ 150 ವರ್ಷ ತುಂಬಿದ ಪ್ರಯುಕ್ತ ಪ್ರಧಾನಿ ನರೇಂದ್ರ ಮೋದಿ ಅವರು ಸಂಸತ್‌ನ ಎರಡೂ ಸದನಗಳನ್ನು ಉದ್ದೇಶಿಸಿ ಮಾತನಾಡಿದ್ದರು.

'ವಂದೇ ಮಾತರಂ' ಗೀತೆಯ ಕೆಲ ಪ್ರಮುಖ ಸಾಲುಗಳನ್ನು 1937ರಲ್ಲಿ ಕಾಂಗ್ರೆಸ್ ಕೈಬಿಟ್ಟಿದೆ. ಇದು ದೇಶ ವಿಭಜನೆಯ ಬೀಜ ಬಿತ್ತಲು ಕಾರಣವಾಯಿತು' ಎಂದು ಮೋದಿ ಆರೋಪಿಸಿದ್ದರು.

(ಜನಗಣಮನಕ್ಕಿರುವ ಗೌರವ ವಂದೇ ಮಾತರಂಗೂ ನೀಡಬೇಕು. ರಾಷ್ಟ್ರ ಗೀತೆಗೂ ಮೊದಲು ಇನ್ಮುಂದೆ ವಂದೇ ಮಾತರಂ ಕೂಡ ಕಡ್ಡಾಯವಾಗಿರುತ್ತೆ. ಶಾಲೆ, ಸರ್ಕಾರಿ ಕಾರ್ಯಕ್ರಮಗಳಲ್ಲಿ 'ವಂದೇ ಮಾತರಂ' ಗೀತೆ ಹಾಡಬೇಕು. ಸರ್ಕಾರಿ ಕಚೇರಿಗಳು, ಸರ್ಕಾರಿ ಸಮಾರಂಭಗಳಿಗೂ ಅನ್ವಯಿಸುತ್ತದೆ. ಸರ್ಕಾರಿ ಕಾರ್ಯಕ್ರಮದಲ್ಲಿ ಹಾಡುವಾಗ ಎದ್ದು ನಿಲ್ಲುವುದು ಕಡ್ಡಾಯ ಎಂದಿದೆ. ಚಿತ್ರಮಂದಿರಗಳಲ್ಲಿ ವಂದೇ ಮಾತರಂ ಗೀತೆ ನುಡಿಸುವುದು ಕಡ್ಡಾಯವಲ್ಲ ಅಂತ ಕೂಡ ಹೇಳಿದೆ. ರಾಷ್ಟ್ರಗೀತೆಗೆ ಇರುವ ಶಿಷ್ಟಾಚಾರಗಳನ್ನ ವಂದೇ ಮಾತರಂ ಗೀತೆಗೆ ವಿಸ್ತಾರಿಸಲಾಗಿದೆ. ರಾಷ್ಟ್ರಗೀತೆಗೆ ಅಡ್ಡಿಪಡಿಸಿ, ಗೌರವಿಸುವುದನ್ನ ತಡೆದ ವ್ಯಕ್ತಿಗೆ 3 ವರ್ಷ ಜೈಲು ಎಂಬ ಕಾನೂನು ಘೋಷಣೆಯಾಗಿದೆ . (ವಂದೇ ಮಾತರಂ ಗೀತೆಯನ್ನ ನಾಗರಿಕ ಪ್ರಶಸ್ತಿ ಪ್ರದಾನ ಸಮಾರಂಭಗಳಲ್ಲಿ ಮತ್ತು ರಾಷ್ಟ್ರಪತಿಗಳು ಭಾಗವಹಿಸುವ ಕಾರ್ಯಕ್ರಮಗಳಲ್ಲಿ, ಸರ್ಕಾರಿ ಕಚೇರಿಗಳು, ಸರ್ಕಾರಿ ಸಮಾರಂಭಗಳಲ್ಲಿ ಹಾಡಲೇ ಬೇಕು ಅಂತ ಕೇಂದ್ರ ಹೇಳಿದೆ. ಸಿನಿಮಾ ಮಂದಿರಗಳಲ್ಲಿ.. ಯಾವುದೇ ಖಾಸಗಿ ಸಮಾರಂಭದಲ್ಲಿ, ಧಾರ್ಮಿಕ ಅಥವಾ ಸಾಮಾಜಿಕ ಸಭೆಯಲ್ಲಿ ಕಡ್ಡಾಯವಲ್ಲ ಅಂತ ಸೂಚಿಸಲಾಗಿದೆ.)

ವಂದೇ ಮಾತರಂ ಗೀತೆಯ 150ನೇ ವರ್ಷಾಚರಣೆ ಅಂಗವಾಗಿ ಸಂಸತ್ತಿನಲ್ಲಿ ಸುದೀರ್ಘ ಚರ್ಚೆ ನಡೆಸಲಾಗಿತ್ತು. ಈ ಚರ್ಚೆಗಳಲ್ಲಿ ಆಡಳಿತಾರೂಢ ಬಿಜೆಪಿ ಮತ್ತು ಕಾಂಗ್ರೆಸ್ ನೇತೃತ್ವದ ವಿಪಕ್ಷಗಳ ನಡುವೆ ಭಾರೀ ವಾದ-ವಿವಾದಗಳು ಏರ್ಪಟ್ಟಿದ್ದವು.

ಈ ಬಗ್ಗೆ ದೆಹಲಿಯಲ್ಲಿ ಪ್ರತಿಕ್ರಯೆ ನೀಡಿದ ಡಿಸಿಎಂ ಡಿ.ಕೆ ಶಿವಕುಮಾರ್, ವಂದೇ ಮಾತರಂಗೆ.. ದೇಶಕ್ಕೆ ಬುನಾದಿ ಹಾಕಿದ್ದೇ ಕಾಂಗ್ರೆಸ್. ಸ್ವಾತಂತ್ರ್ಯ, ಸಂವಿಧಾನ ತಂದುಕೊಟ್ಟ ಪಕ್ಷ ನಮ್ಮದು... ನಮ್ಮ ಹಾದಿಯನ್ನ ಬಿಜೆಪಿ ಹಿಡಿದಿದೆ ಅಂತ ಕ್ರೆಡಿಟ್ ತಗೊಂಡಿದ್ದಾರೆ.ಡಿಕೆಶಿ ಹೇಳಿಕೆ ನೋಡ್ತಿದ್ರೆ, ಪರೋಕ್ಷವಾಗಿ ಸ್ವಾಗತ ಮಾಡಿದಂತೆ ಕಾಣ್ತಿದೆ. ಅದೇನೆ ಇರಲಿ, ಒಂದು ಕಾರ್ಯಕ್ರಮದಲ್ಲಿ ಎರಡೂ ಹಾಡುಗಳನ್ನ ಒಟ್ಟಿಗೆ ನುಡಿಸಿದಾಗ, ವಂದೇ ಮಾತರಂ ಮೊದಲು ಬರುತ್ತದೆ.. ನಂತರ ಜನ ಗಣ ಮನ ಬರುತ್ತದೆ ಎಂದು ಆದೇಶವು ಸ್ಪಷ್ಟವಾಗಿ ಹೇಳ್ತಿದೆ. ಎರಡ್ರಲ್ಲೂ ನಿಲ್ಲುವುದು ಕಡ್ಡಾಯವಾಗಿದೆ.

### ಮೊದಲು ಒಂದು ಬೀಟ್‌ನ ವಿರಾಮ

ವಂದೇ ಮಾತರಂ ಹಾಡುವ ಮೊದಲು ಡ್ರಮ್ ರೋಲ್ ರಾಷ್ಟ್ರಗೀತೆ ನುಡಿಸಲಾಗುವುದು ಎಂದು ಪ್ರೇಕ್ಷಕರಿಗೆ ಸೂಚಿಸಲು ಡ್ರಮ್ ರೋಲ್ ಅದರ ಮೊದಲು ಇರುತ್ತದೆ. ರೋಲ್ ನಿಧಾನಗತಿಯಲ್ಲಿ ಪ್ರಾರಂಭವಾಗುತ್ತದೆ, ನಂತರ ಗರಿಷ್ಠ ಸಂಭವನೀಯ ಧ್ವನಿ ಮಟ್ಟವನ್ನು ತಲುಪುತ್ತದೆ, ಮತ್ತು ನಂತರ ಕ್ರಮೇಣ ಅದರ ಮೂಲ ಕಡಿಮೆ ಪಿಚ್‌ಗೆ ಮರಳುತ್ತದೆ, ಆದರೆ 7 ನೇ ಬೀಟ್‌ನವರೆಗೆ ಕೇಳಿಸುತ್ತದೆ. ನಂತರ ರಾಷ್ಟ್ರಗೀತೆ ಪ್ರಾರಂಭವಾಗುವ ಮೊದಲು ಒಂದು ಬೀಟ್‌ನ ವಿರಾಮ ಇರುತ್ತದೆ.

### ಮಾರ್ಗಸೂಚಿಯಲ್ಲಿ ಏನಿದೆ

- 'ಜನಗಣಮನ'ಕ್ಕಿರುವ ಗೌರವ 'ವಂದೇ ಮಾತರಂ'ಗೂ ನೀಡಬೇಕು
- ರಾಷ್ಟ್ರ ಗೀತೆಗೂ ಮೊದಲು ಇನ್ಮುಂದೆ 'ವಂದೇ ಮಾತರಂ' ಕಡ್ಡಾಯ
- ಶಾಲೆ, ಸರ್ಕಾರಿ ಕಾರ್ಯಕ್ರಮಗಳಲ್ಲಿ 'ವಂದೇ ಮಾತರಂ' ಹಾಡಬೇಕು
- ಸರ್ಕಾರಿ ಕಚೇರಿಗಳು, ಸರ್ಕಾರಿ ಸಮಾರಂಭಗಳಿಗೂ ಅನ್ವಯಿಸುತ್ತದೆ
- ಸರ್ಕಾರಿ ಕಾರ್ಯಕ್ರಮದಲ್ಲಿ ಹಾಡುವಾಗ ಎದ್ದು ನಿಲ್ಲುವುದು ಕಡ್ಡಾಯ
- ಚಿತ್ರಮಂದಿರಗಳಲ್ಲಿ ವಂದೇ ಮಾತರಂ ಗೀತೆ ನುಡಿಸೊದು ಕಡ್ಡಾಯವಲ್ಲ
- ರಾಷ್ಟ್ರಗೀತೆಗೆ ಇರುವ ಶಿಷ್ಟಾಚಾರಗಳನ್ನ ವಂದೇ ಮಾತರಂ ಗೀತೆಗೆ ವಿಸ್ತಾರ
- ರಾಷ್ಟ್ರಗೀತೆಗೆ ಅಡ್ಡಿಪಡಿಸಿ, ಗೌರವಿಸುವುದನ್ನ ತಡೆದ ವ್ಯಕ್ತಿಗೆ 3 ವರ್ಷ ಜೈಲು

### 6 ಚರಣಗಳಿರುವ 'ವಂದೇ ಮಾತರಂ' ಗೀತೆಯನ್ನು ಹಾಡುವುದು ಕಡ್ಡಾಯ

ಈ ನಿರ್ದೇಶನವನ್ನು ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು, ಸಚಿವಾಲಯಗಳು ಮತ್ತು ಸಾಂವಿಧಾನಿಕ ಸಂಸ್ಥೆಗಳಿಗೆ ಇಂಗ್ಲಿಷ್ ಮತ್ತು ಹಿಂದಿಯಲ್ಲಿ ನೀಡಲಾಗಿದೆ. ಇಲ್ಲಿಯವರೆಗೆ, ವಂದೇ ಮಾತರಂ ಹಾಡಲು ಯಾವುದೇ ಅಧಿಕೃತ ಶಿಷ್ಟಾಚಾರವಿರಲಿಲ್ಲ. ಆದರೆ ಜನ ಗಣ ಮನ ಗೀತೆಯು ರಾಗ, ಸಮಯ ಮತ್ತು ಗಾಯನದ ಬಗ್ಗೆ ಸ್ಪಷ್ಟ ನಿಯಮಗಳನ್ನು ಹೊಂದಿತ್ತು. ಹಾಡಿನ ವಿಸ್ತೃತ, ಆರು-ಚರಣಗಳ ಆವೃತ್ತಿಯನ್ನು ಇಲ್ಲಿಯವರೆಗೆ ಅಧಿಕೃತ ಕಾರ್ಯಕ್ರಮಗಳಲ್ಲಿ ಹಾಡಿರಲಿಲ್ಲ, ಆದರೆ ಈಗ ಅದನ್ನು ಕಡ್ಡಾಯಗೊಳಿಸಲಾಗಿದೆ.

## ಬಿಡುಗಡೆಯಾಗದ 15ನೇ ಹಣಕಾಸು ಸಂಕಷ್ಟದಲ್ಲಿ ಗ್ರಾಮ ಪಂಚಾಯಿತಿಗಳು



• ಉಮೇಶ್ ಬಾಣಾವರ

ಕಳೆದ 25-26ನೇ ಸಾಲಿನ ಹಣಕಾಸು ವರ್ಷದಲ್ಲಿ ಗ್ರಾಮೀಣ ಅಭಿವೃದ್ಧಿ ಪಂಚಾಯತ್ ರಾಜ್ ಇಲಾಖೆಯ ಅಡಿಯಲ್ಲಿ ಬರುವ ರಾಜ್ಯದ ಕೆಲವಾರು ಜಿಲ್ಲೆಗಳ ಹಲವಾರು ಗ್ರಾಮ ಪಂಚಾಯಿತಿಗಳಿಗೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ವತಿಯಿಂದ ಬರುವ 15ನೇ ಹಣಕಾಸು ಯೋಜನೆಯ ಹಣ ಬರದೇ ಇರುವುದರಿಂದ ರಾಜ್ಯದಲ್ಲಿ ಸುಮಾರು ಗ್ರಾಮ ಪಂಚಾಯಿತಿಗಳು ಸಂಕಷ್ಟದಲ್ಲಿವೆ.



ಕುಡಿಯುವ ನೀರು ಸ್ವಚ್ಛತೆ ಬೀದಿ ದೀಪಗಳ ನಿರ್ಮಾಣ ಇವುಗಳ ವೆಚ್ಚಕ್ಕಾಗಿ ಆರ್ಥಿಕ ವ್ಯವಸ್ಥೆ ಇಲ್ಲದೆ ಗ್ರಾಮ ಪಂಚಾಯಿತಿಗಳ ಅಭಿವೃದ್ಧಿ ಅಧಿಕಾರಿಗಳು ನಿರ್ವಹಣೆ ಮಾಡಲು ಆಗದೆ ಗ್ರಾಮ ಪಂಚಾಯಿತಿಗಳ ಅಡಿಯಲ್ಲಿ ಬರುವ ನಾಗರೀಕರಿಗೆ ಉತ್ತರಿಸಲು ಆಗದೆ ಸಂಕಷ್ಟದಲ್ಲಿ ಕಾಲದೊಡುತ್ತಿದ್ದಾರೆ

ಮುಖ್ಯಮಂತ್ರಿ ಸಿದ್ದರಾಮಯ್ಯನವರು ಗ್ರಾಮೀಣ ಪಂಚಾಯತ್ ರಾಜ್ ಇಲಾಖೆ ಸಚಿವರಾದ ಪ್ರಿಯಾಂಕಾ ಖರ್ಗೆ ಸೇರಿದಂತೆ ಹಣಕಾಸು ಇಲಾಖೆಯ ಅಧಿಕಾರಿಗಳು ಕೂಡಲೇ ಗಮನ ಹರಿಸಿ ರಾಜ್ಯದಲ್ಲಿ ಸಂಕಷ್ಟದಲ್ಲಿರುವ ಗ್ರಾಮ ಪಂಚಾಯಿತಿಗಳಿಗೆ 15ನೇ ಹಣಕಾಸಿನ ಅಡಿಯಲ್ಲಿ ಹಣ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಬೇಕಿದೆ

**ಹಣ ಬಿಡುಗಡೆಗೆ ಕ್ರಮ**



ಇತ್ತೀಚಿಗೆ ಗ್ರಾಮ ಪಂಚಾಯಿತಿಯಲ್ಲಿ ಚುನಾಯಿತರಾಗಿದ್ದ ಅಧ್ಯಕ್ಷರು ಉಪಾಧ್ಯಕ್ಷರು ಸದಸ್ಯರುಗಳ ಅವಧಿ ಮುಕ್ತಾಯವಾಗುತ್ತಿರುವ ಹಿನ್ನೆಲೆಯಲ್ಲಿ ಗ್ರಾಮಗಳಲ್ಲಿರುವ ನಾಗರಿಕರು ನೇರವಾಗಿ ಗ್ರಾಮ ಪಂಚಾಯಿತಿಯ ಅಭಿವೃದ್ಧಿ ಅಧಿಕಾರಿಗಳ ಬಳಿಬಂದು ಗ್ರಾಮಗಳಲ್ಲಿನ ಕುಡಿಯುವ ನೀರು ಸ್ವಚ್ಛತೆ ಮತ್ತು ಬೀದಿ ದೀಪ ಸೇರಿದಂತೆ ಹಲವಾರು ಕಾರ್ಯಗಳಿಗಾಗಿ ಗ್ರಾಮ ಪಂಚಾಯಿತಿಯ ಅಭಿವೃದ್ಧಿಗೆ ಅಧಿಕಾರಿಗಳೊಂದಿಗೆ ಸಂಘರ್ಷ ಉಂಟಾಗುವ ಸಾಧ್ಯತೆ ಇದ್ದು ಸರ್ಕಾರ ಈ ಸಮಸ್ಯೆ ಯನ್ನು ಕೂಡಲೇ ಬಗೆಹರಿಸಬೇಕಿದೆ

## ಪೂರ್ವ - ಪಶ್ಚಿಮ ಕರಾವಳಿ ಸಂಪರ್ಕಿಸುವ ಕೈಗಾರಿಕಾ ಕಾರಿಡಾರ್‌ಗೆ ಒತ್ತಾಯಿಸಿದ ಎಚ್‌ಡಿ ದೇವೇಗೌಡ

• ಹಲಸು, ಹುಣಸೆ, ನೇರಳೆ ಮಂಡಳಿ ರಚನೆಗೆ ಸಲಹೆ • ಬಜೆಟ್ ಮೇಲಿನ ಚರ್ಚೆಯಲ್ಲಿ ಮಾಜಿ ಪ್ರಧಾನಿಗಳು

• ಉದಯವಾಹಿನಿ, ಹೊಸದಿಲ್ಲಿ

ಚೆನ್ನೈ-ಬೆಂಗಳೂರು, ಹೈದರಾಬಾದ್-ಬೆಂಗಳೂರು ಕೈಗಾರಿಕಾ ಕಾರಿಡಾರ್ ಅನ್ನು ಮಂಗಳೂರಿನವರೆಗೆ ವಿಸ್ತರಿಸಿದರೆ ಕೈಗಾರಿಕಾ ಅಭಿವೃದ್ಧಿಗೆ ಬಹಳಷ್ಟು ಅನುಕೂಲ ಆಗುತ್ತದೆ ಎಂದು ಮಾಜಿ ಪ್ರಧಾನಿಗಳಾದ ಎಚ್‌ಡಿ ದೇವೇಗೌಡ ಸಲಹೆ ನೀಡಿದ್ದಾರೆ.

**ಕೈಗಾರಿಕಾ ಅಭಿವೃದ್ಧಿಗೆ ಎಚ್‌ಡಿಡಿ ಒತ್ತು**

ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಮಂಡಿಸಿರುವ 2026-2027ನೇ ಸಾಲಿನ ಕೇಂದ್ರದ ಆಯವ್ಯಯವು ರಾಷ್ಟ್ರದ ಸರ್ವತೋಮುಖ ಅಭಿವೃದ್ಧಿಗೆ ಪೂರಕವಾಗಿದೆ ಎಂದು ಪ್ರತಿಪಾದಿಸಿರುವ ದೇವೇಗೌಡ ಅವರು ಪ್ರಮುಖ ಸಲಹೆಗಳನ್ನು ನೀಡಿದ್ದಾರೆ.

ರಾಜ್ಯಸಭೆಯಲ್ಲಿ ಬಜೆಟ್ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಮಾಜಿ ಪ್ರಧಾನಿಗಳು ರಾಷ್ಟ್ರದ ಮೂರು ಪ್ರಮುಖ ಬಂದರುಗಳನ್ನು ಜೋಡಿಸುವ ಬೆಂಗಳೂರಿನಿಂದ - ಮಂಗಳೂರಿನವರೆಗೆ ಕೈಗಾರಿಕಾ ಕಾರಿಡಾರ್ ವಿಸ್ತರಣೆ ಹಾಗೂ ಹಲಸು, ಹುಣಸೆ, ನೇರಳೆ ಮಂಡಳಿ ರಚನೆ ಮಾಡಬೇಕು ಎಂದು ಕೋರಿದರು.

**ಹಲಸು, ಹುಣಸೆ, ನೇರಳೆ ಮಂಡಳಿ ರಚನೆಗೆ ಸಲಹೆ:** ಕರ್ನಾಟಕವೂ ಸೇರಿ ತಮಿಳುನಾಡು, ಕೇರಳ ಮುಂತಾದ ರಾಜ್ಯಗಳಲ್ಲಿ ಬೆಳೆಯಲಾಗುವ ಹಲಸು, ಹುಣಸೆ, ನೇರಳೆಗೆ ಉತ್ತೇಜನ ನೀಡಲು ಮಕಾನ ಮಂಡಳಿಯಂತೆ ಪ್ರತ್ಯೇಕ ಮಂಡಳಿಯನ್ನು ರಚನೆ ಮಾಡಬೇಕು. ಈ ಮೂರು ಬೆಳೆಗಳು ಔಷಧೀಯ ಗುಣಗಳನ್ನು ಹೊಂದಿದ್ದು, ದಕ್ಷಿಣದ ಭಾಗದಲ್ಲಿ ವ್ಯಾಪಕವಾಗಿ ಬೆಳೆಯಲಾಗುತ್ತಿದೆ. ಕಡಿಮೆ ಮಳೆ ಅಗತ್ಯವಿರುವ ಬೆಳೆಗಳು ಎಂದು ಮಾಜಿ ಪ್ರಧಾನಿ ದೇವೇಗೌಡರು ಮನವಿ ಹೇಳಿದರು.



### ಮಂಗಳೂರಿಗೆ ವಿಶಾಖಪಟ್ಟಣ, ಚೆನ್ನೈ ಜೋಡಿಸಿ

ಈಗಾಗಲೇ ಚೆನ್ನೈನಿಂದ ಬೆಂಗಳೂರು ಮತ್ತು ಹೈದರಾಬಾದ್‌ನಿಂದ ಬೆಂಗಳೂರು ನಡುವಿನ ಪ್ರಮುಖ ಬಂದರುಗಳನ್ನು ಹೊಂದಿರುವ ಕೈಗಾರಿಕಾ ಕಾರಿಡಾರ್ ಯೋಜನೆಗಳಿಗೆ ಅನುಮೋದನೆ ನೀಡುವ ಸರ್ಕಾರದ ನಿರ್ಧಾರವನ್ನು ಸ್ವಾಗತಿಸುತ್ತೇನೆ. ಅದೇ ರೀತಿ, ಬೆಂಗಳೂರಿನಿಂದ ಮಂಗಳೂರಿನವರೆಗೆ ಈ ಕೈಗಾರಿಕಾ ಕಾರಿಡಾರ್ ವಿಸ್ತರಿಸಿದರೆ ಕೈಗಾರಿಕಾ ಅಭಿವೃದ್ಧಿಗೆ ಬಹಳಷ್ಟು ಅನುಕೂಲ ಆಗುತ್ತದೆ. ಮಂಗಳೂರು ಕೂಡ ಪ್ರಮುಖ ಬಂದರು ಆಗಿದ್ದು; ಪೂರ್ವ ಕರಾವಳಿಯ ವಿಶಾಖಪಟ್ಟಣ, ಚೆನ್ನೈ ಹಾಗೂ ಪಶ್ಚಿಮ ಕರಾವಳಿಯ ಮಂಗಳೂರು ಬಂದರುಗಳನ್ನು ಜೋಡಿಸಿದರೆ ರಾಷ್ಟ್ರದ ಕೈಗಾರಿಕಾಭಿವೃದಿಗೆ ಪರಿವರ್ತನಾತ್ಮಕ ವೇಗ ಬರುತ್ತದೆ ಎಂದು ಮಾಜಿ ಪ್ರಧಾನಿಗಳು ಪ್ರತಿಪಾದಿಸಿದರು.

**ಶೇಕಡಾ 5 ರಷ್ಟು ಕೃಷಿ ಹೆಚ್ಚಿಸುವುದು ಅಗತ್ಯ:** ಜನತೆಗೆ ಅನುಕೂಲ ಆಗುವಂತೆ ತೆರಿಗೆ ವ್ಯವಸ್ಥೆಯಲ್ಲಿ ಸರಳೀಕರಣ ಮಾಡಿರುವುದು ಸ್ವಾಗತಾರ್ಹ. ತೆರಿಗೆದಾರರ ವಿಶ್ವಾಸವು ಅಷ್ಟೇ ಮುಖ್ಯವಾಗಿದೆ ಎಂದ ಅವರು; ಸರ್ಕಾರವು ಕರ್ನಾಟಕದ ಕರಾವಳಿ ಸೇರಿ ಇತರ ಪ್ರದೇಶಗಳಲ್ಲಿ ಯಥೇಚ್ಛವಾಗಿ ಬೆಳೆಯಲಾಗುವ ತೆಂಗಿನಕಾಯಿ, ಶ್ರೀಗಂಧ, ಕೋಕೋ ಮತ್ತು ಗೋಡಂಬಿಯಂತಹ ವಾಣಿಜ್ಯ ಬೆಳೆಗಳಿಗೆ ದೊಡ್ಡ ಪ್ರಮಾಣದಲ್ಲಿ ಉತ್ತೇಜನ ನೀಡಿರುವುದು ಉತ್ತಮವಾದ ಹೆಜ್ಜೆ. ತೆಂಗು 'ಕಲ್ಪವೃಕ್ಷ' ಎಂದು ಜನಪ್ರಿಯವಾಗಿದೆ. ಇದು ಎಲ್ಲಾ ವಯಸ್ಸಿನ ಜನರಿಗೆ ಬಹುವಿಧದಲ್ಲಿ ಆರೋಗ್ಯ ಪ್ರಯೋಜನಗಳೊಂದಿಗೆ ಪೋಷಣೆ ಒದಗಿಸುತ್ತದೆ.

ಹೆಚ್ಚಿನ ಪ್ರದೇಶಗಳಲ್ಲಿ ತೆಂಗು ಜೀವನಾಡಿಯಾಗಿದೆ. ಕೃಷಿಗೆ ಉತ್ತಮ ಬೆಂಬಲ ಕೊಡಲಾಗಿದೆ. ಒಟ್ಟು ಬಜೆಟ್ ನಲ್ಲಿ ಒಟ್ಟು ಬಜೆಟ್‌ನ 3% ರಷ್ಟು ಹಂಚಿಕೆ ನೀಡಲಾಗಿದ್ದು, ಈ ಪ್ರಮಾಣವನ್ನು 5% ಗೆ ಕೃಷಿ ಹೆಚ್ಚಿಸುವುದು ಅಗತ್ಯವಾಗಿದೆ ಎಂದು ಮಾಜಿ ಪ್ರಧಾನಿಗಳು ಸಲಹೆ ನೀಡಿದರು.

**ಈ ದಿನದ ದರ** ಪೆಟ್ರೋಲ್: 102.92 ₹/L | ಡೀಸೆಲ್ : 90.99 ₹/L | ಬಂಗಾರ: ₹15,960/Gram24ct ₹14,630/Gram22ct | ಬೆಳ್ಳಿ: ₹290.00/Gram

## ರಾಜ್ಯ ಮಹಾನಗರ ಪಾಲಿಕೆ ನೌಕರರಿಗೆ ಆರೋಗ್ಯ ಸಂಜೀವಿನಿ ಯೋಜನೆ ಜಾರಿಗೆ ಎನ್.ಎಸ್‌ಭೋಸರಾಜುರವರು ಮುಖ್ಯಕಾರ್ಯದರ್ಶಿ, ಸಚಿವರಿಗೆ ನಿರ್ದೇಶನ

• ಉದಯವಾಹಿನಿ ,ಬೆಂಗಳೂರು



ಸಣ್ಣ ನೀರಾವರಿ ಮತ್ತು ವಿಜ್ಞಾನ ತಂತ್ರಜ್ಞಾನ ಸಚಿವರಾದ ಎನ್.ಎಸ್.ಭೋಸರಾಜು ರವರು ಎ.ಅಮೃತ್‌ರಾಜ್, ರಾಜ್ಯಾಧ್ಯಕ್ಷರು, ಕರ್ನಾಟಕ ರಾಜ್ಯ ಮಹಾನಗರ ಪಾಲಿಕೆ ನೌಕರರ ಸಂಘ, ಬೆಂಗಳೂರು, ಇವರು ಸಲ್ಲಿಸಿರುವ ಮನವಿ ಪತ್ರವನ್ನು ಕರ್ನಾಟಕ ರಾಜ್ಯ ಸರ್ಕಾರಿ ಜಾರಿಗೊಳಿಸಿರುವ ಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆಯನ್ನು ನಗರಾಭಿವೃದ್ಧಿ ಇಲಾಖೆಯಡಿ ಬರುವ ಮಹಾನಗರ ಪಾಲಿಕೆ ಹಾಗೂ ಇತರೆ ನಗರ ಸ್ಥಳೀಯ ಸಂಸ್ಥೆಗಳ ಸಿಬ್ಬಂದಿಗಳು ಹಾಗೂ ಅವರ ಕುಟುಂಬದ ಅವಲಂಭಿತ ಸದಸ್ಯರಿಗೆ ಯಥಾವತ್ತಾಗಿ ವಿಸ್ತರಿಸಿ ಅನುಷ್ಠಾನಗೊಳಿಸುವಂತೆ ಕೋರಿರುತ್ತಾರೆ.

ಸದರಿಯವರ ಮನವಿಯನ್ನು ಪರಿಗಣಿಸಿ, ಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆಯನ್ನು ನಗರಾಭಿವೃದ್ಧಿ ಇಲಾಖೆಯಡಿ ಬರುವ ಮಹಾನಗರ ಪಾಲಿಕೆ ಹಾಗೂ ಇತರೆ ನಗರ ಸ್ಥಳೀಯ ಸಂಸ್ಥೆಗಳ ಸಿಬ್ಬಂದಿಗಳು ಹಾಗೂ ಅವರ ಕುಟುಂಬದ ಅವಲಂಭಿತ ಸದಸ್ಯರಿಗೆ ಯಥಾವತ್ತಾಗಿ ವಿಸ್ತರಿಸಿ ಅನುಷ್ಟಾನಗೊಳಿಸುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ಮುಖ್ಯ ಕಾರ್ಯದರ್ಶಿಗಳಿಗೆ ಮತ್ತು ನಗರಾಭಿವೃದ್ಧಿ ಸಚಿವರಾದ ಭೈರತಿ ಸುರೇಶ್ ರವರಿಗೆ ಸೂಕ್ತ ನಿರ್ದೇಶನ ನೀಡಲು ಪತ್ರ ಮುಖೇನ ಕೋರಿದ್ದಾರೆ.

## ಸ್ಕೂಟರ್‌ಗೆ ಶಾಲಾ ಬಸ್ ಡಿಕ್ಕಿಯಾಗಿ ಇಬ್ಬರು ಮಕ್ಕಳ ದಾರುಣ ಸಾವು

• ಉದಯವಾಹಿನಿ ,ಬೆಂಗಳೂರು

ದ್ವಿಚಕ್ರವಾಹನಕ್ಕೆ ಡಿಕ್ಕಿ ಹೊಡೆದ ಶಾಲಾ ಬಸ್, ಬಳಿಕ ಅದರ ಮೇಲೆ ಹರಿದ ಪರಿಣಾಮ ಇಬ್ಬರು ಮಕ್ಕಳು ದಾರುಣವಾಗಿ ಮೃತಪಟ್ಟಿರುವ ಘಟನೆ ಹೆಣ್ಣೂರು ಸಂಚಾರ ಪೊಲೀಸ್ ಠಾಣೆಯಲ್ಲಿ ನಡೆದಿದೆ. ಥಣಿಸಂದ್ರದ ಪೊಲೀಸ್ ಕ್ವಾಟರ್ಸ್ ಬಳಿ ಸಂಭವಿಸಿದ ದುರ್ಘಟನೆಯಲ್ಲಿ ವರ್ಷಾ (2) ಹಾಗೂ ಭಾನು (4) ಇಬ್ಬರು ಹೆಣ್ಣಮಕ್ಕಳು ಮೃತಪಟ್ಟಿದ್ದಾರೆ.

ಅಪಘಾತ ಎಸಗಿದ ಖಾಸಗಿ ಶಾಲಾ ಬಸ್ ಚಾಲಕ ಮಾರೆಪ್ಪನನ್ನ ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಸಶಸ್ತ್ರ ಮೀಸಲು ಪಡೆ (ಸಿಎಆರ್) ಕಾನ್ಸ್‌ಟೇಬಲ್ ಆಗಿರುವ ನಾಗನಗೌಡ ಎಂಬುವರು ಹಾಲು ತರಲು ದ್ವಿಚಕ್ರವಾಹನದಲ್ಲಿ ತೆರಳಿದ್ದರು.

ತನ್ನ ಮಗಳು ವರ್ಷಾ ಹಾಗೂ ಅಣ್ಣನ ಮಗಳು ಭಾನು ಅವರನ್ನ ವಾಹನದ ಮುಂಬದಿಯಲ್ಲಿ ಕೂರಿಸಿಕೊಂಡು ಹೋಗುವಾಗ ಮುಂಬದಿಯಿಂದ ಶಾಲಾ ಬಸ್ ಟರ್ನ್ ಹೊಡೆಯಲು ಮುಂದಾಗಿತ್ತು.

## ಸಮ್ಮರ್ ಸೆಕೆಗೆ ಟಕ್ಕರ್ ಕೊಡೋಕೆ ಬೆಂಗಳೂರು ರೆಡಿ

• ಉದಯವಾಹಿನಿ ,ಬೆಂಗಳೂರು



ಉದಯವಾಹಿನಿ ಚಿತ್ರ

ಬೇಸಿಗೆಯಲ್ಲಿ ಉಂಟಾಗುವ ನೀರಿನ ಕೊರತೆಯನ್ನು ಮನಗಂಡು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಂಡಿದೆ.

ನಗರದ ಕೆಲವು ಪ್ರಮುಖ ಪ್ರದೇಶಗಳಲ್ಲಿ ಮಿನಿ ವಾಟರ್ ಟ್ಯಾಂಕ್‌ಗಳನ್ನು ಸ್ಥಾಪಿಸುವ ಮೂಲಕ ಜನರಿಗೆ ಕುಡಿಯುವ ನೀರಿನ ಲಭ್ಯತೆ ಸುಗಮಗೊಳಿಸಲು ಮಂಡಳಿ ಮುಂದಾಗಿದೆ.

ಹಿರಿಯ ಅಧಿಕಾರಿಗಳೊಂದಿಗೆ ನಡೆದ ಪರಿಶೀಲನಾ ಸಭೆಯ ನಂತರ ಮಾತನಾಡಿದ ಅಧ್ಯಕ್ಷ ವಿ. ರಾಮ್ ಪ್ರಸಾತ್ ಮನೋಹರ್, ಹೆಚ್ಚು ಜನಸಾಂದ್ರತೆ ಇರುವ ಮತ್ತು ನೀರಿನ ಅಭಾವ ಕಾಣಿಸಬಹುದಾದ ಪ್ರದೇಶಗಳನ್ನು ಈಗಾಗಲೇ ಗುರುತಿಸಲಾಗಿದೆ ಎಂದು ಹೇಳಿದರು. ಈ ಪ್ರದೇಶಗಳಲ್ಲಿ ಟ್ಯಾಂಕ್‌ಗಳನ್ನು ಸ್ಥಾಪಿಸಿ ಉಚಿತವಾಗಿ ನೀರು ಪೂರೈಸುವ ವ್ಯವಸ್ಥೆ ಮಾಡುವ ಯೋಜನೆ ಇದೆ ಎಂದು ತಿಳಿಸಿದರು.

ಟ್ಯಾಂಕ್‌ಗಳನ್ನು ತುಂಬಲು ಹಾಗೂ ಸಂಚಾರಿ ಕಾವೇರಿ ವಾಹನಗಳಿಗೆ ಆದ್ಯತೆ ನೀಡಲಾಗುತ್ತದೆ. ಅಗತ್ಯವಿದ್ದರೆ ಮಾತ್ರ ಖಾಸಗಿ ಟ್ಯಾಂಕರ್‌ಗಳನ್ನು ಬಳಸಲಾಗುತ್ತದೆ. ಉಚಿತವಾಗಿ ನೀರು ಪೂರೈಸುವ ಅಧಿಕಾರಿಗಳು ಪ್ರತಿದಿನ ಸ್ಥಳಗಳಿಗೆ ಭೇಟಿ ನೀಡಿ ನೀರಿನ ಸರಬರಾಜು ಸರಿಯಾಗಿ ನಡೆಯುತ್ತಿದೆಯೇ ಎಂದು ಪರಿಶೀಲಿಸಲು ಸೂಚನೆ ನೀಡಲಾಗಿದೆ.

## ಶಿಕ್ಷಣದ ಹೆಸರಿನಲ್ಲಿ ಕನ್ನಡ ಶಾಲೆಗಳಿಗೆ ಕುತ್ತು?



ಉದಯವಾಹಿನಿ ಚಿತ್ರ

• ಉದಯವಾಹಿನಿ ,ಬೆಂಗಳೂರು

ಕರ್ನಾಟಕ ಸರ್ಕಾರದ ಪಬ್ಲಿಕ್ ಸ್ಕೂಲ್ ಮ್ಯಾಗ್ನೆಟ್ ಯೋಜನೆಯ ಹೆಸರಿನಲ್ಲಿ ಕನ್ನಡ ಶಾಲೆಗಳನ್ನು ಮುಚ್ಚಲಾಗುತ್ತಿದೆ ಎಂದು ಆರೋಪಿಸಿರುವ ಮಾಜಿ ಮುಖ್ಯಮಂತ್ರಿ ಬೊಮ್ಮಾಯಿ, ಕಾಂಗ್ರೆಸ್ ಸರ್ಕಾರದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ್ದಾರೆ.

ರಾಜ್ಯ ಸರ್ಕಾರ ಈಗಾಗಲೇ 638 ಕನ್ನಡ ಶಾಲೆಗಳನ್ನು ಮುಚ್ಚಿದ್ದು, ಕನ್ನಡ ವಿರೋಧಿ ಧೋರಣೆಯಾಗಿದೆ ಎಂದು ಬೊಮ್ಮಾಯಿ ಕಿಡಿಕಾರಿದ್ದಾರೆ. ರಾಜ್ಯದ ಆರ್ಥಿಕ ಪರಿಸ್ಥಿತಿ ಹದಗೆಟ್ಟಿದೆ, ಸರ್ಕಾರ ದಿವಾಳಿಯಾಗಿದೆ. ಕನಿಷ್ಠ ಸಂಬಳ ನೀಡಲೂ ಹಣವಿಲ್ಲದ ಕಾರಣ ಶಾಲೆಗಳನ್ನು ಮುಚ್ಚುವ ತೀರ್ಮಾನಕ್ಕೆ ಬಂದಿದ್ದಾರೆ. ಈ ಕೂಡಲೇ ಮುಚ್ಚಿರುವ ಶಾಲೆಗಳನ್ನು ಪುನರಾರಂಭಿಸಬೇಕು'' ಎಂದು ಅವರು ಒತ್ತಾಯಿಸಿದರು.

ಸಂಸತ್ತಿನಲ್ಲಿ ವಿರೋಧ ಪಕ್ಷಗಳ ವರ್ತನೆಯನ್ನು ಟೀಕಿಸಿದ ಅವರು, ಕಾಂಗ್ರೆಸ್ ನಾಯಕರು ''ನಗರ ನಕ್ಸಲರಂತೆ'' ವರ್ತಿಸುತ್ತಿದ್ದಾರೆ ಎಂದು ಆರೋಪಿಸಿದರು.

# ಜೈಭೀಮ್ ಕರ್ನಾಟಕ ಸಂಘದ ರಾಜ್ಯಾಧ್ಯಕ್ಷ ಎಂ.ಅಣ್ಣಯ್ಯ ತಹಶೀಲ್ದಾರ್‌ಗೆ ದೂರು

• ಉದಯವಾಹಿನಿ ಕೆ.ಆರ್.ಪುರ

ಚಿಕ್ಕಬನಹಳ್ಳಿ ಗ್ರಾಮದ ಹಲವು ಸರ್ಕಾರಿ ಸರ್ವೆ ನಂಬರ್ ಗಳ ಜಮೀನುಗಳಲ್ಲಿ ಹಾದುಹೋಗುವ ಪಥ ಬದಲಾವಣೆಗೆ ಅವಕಾಶ ನೀಡ ಬಾರದೆಂದು ಜೈಭೀಮ್ ಕರ್ನಾಟಕ ಸಂಘದ ರಾಜ್ಯಾಧ್ಯಕ್ಷ ಎಂ.ಅಣ್ಣಯ್ಯ ತಹಶಿಲ್ದಾರರಿಗೆ ದೂರು ನೀಡಿದ್ದಾರೆ. ಬೆಂಗಳೂರು ಪೂರ್ವ ತಾಲ್ಲೂಕು ಬಿದರಹಳ್ಳಿ ಹೋಬಳಿ ಚಿಕ್ಕಬನಹಳ್ಳಿ ಹಲವು ಸರ್ವೆ ನಂಬಗಳಿಗೆ ಸೇರಿದ ಜಮೀನುಗಳಲ್ಲಿರುವ ರಾಜಕಾಲುವೆ, ಬಂಡಿದಾರಿಯನ್ನು ಮೇ. ಸ್ಟರ್ಲಿಂಗ್ ಅರ್ಬನ್ ಇನ್-ಫ್ರಾ ಪ್ರಾಜೆಕ್ಟ್ ಪೈಲಿ ಮತ್ತು ಗೋಪಾಲನ್ ರವರು ಪ್ರಸ್ಟೀಜ್ ಪ್ರಾಜೆಕ್ಟ್ ಲಿಮಿಟೆಡ್ ರವರು ಪಥ ಬದಲಾವಣೆಗೆ ಕಛೇರಿಗೆ ಮಾಡಿರುವ ಮನವಿಯನ್ನು ತಿರಸ್ಕರಿಸಬೇಕು ಎಂದರು.



ಉದಯವಾಹಿನಿ ಚಿತ್ರ

ಪಥ ಬದಲಾವಣೆ ಹಲವಾರು ಸರ್ವೆ ನಂಬರುಗಳಲ್ಲಿ ಹಾದು ಹೋಗಿರುವುದರಿಂದ ಯಾವುದೇ ಕಾರಣಕ್ಕೂ ಪಥ ಬದಲಾವಣೆ ಮಾಡಬಾರದೆ ರಾಜಕಾಲುಗೆ, ಬಂಡಿದಾರಿ ತೆರವುಗೊಳಿಸಲು ಮತ್ತು ನಡೆಯುತ್ತಿರುವ ಕಾಮಗಾರಿಯನ್ನು ಈ ಕೂಡಲೇ ನಿಲ್ಲಿಸಬೇಕೆಂದು ದೂರು ನೀಡುವ ಮೂಲಕ ಮನವಿ ಮಾಡಿದರು.

ಪ್ರಸ್ಟೀಜ್ ಪ್ರಾಜೆಕ್ಟ್ ಲಿಮಿಟೆಡ್‌ರವರು ಹಗದೂರು ಗ್ರಾಮದಲ್ಲಿ ಮತ್ತು ಸೋರಹುಣಸಿ ಗ್ರಾಮದಲ್ಲಿ ಮತ್ತು ಶೀಗೇಹಳ್ಳಿ, ಗುಂಜೂರು, ವೈಟ್‌ಫೀಲ್ಡ್ ಮತ್ತು ಪಟ್ಟಂದೂರು ಅಗ್ರಹಾರ ಗ್ರಾಮಗಳಲ್ಲಿ ಹಲವಾರು ರಸ್ತೆಗಳು, ರಾಜಕಾಲುವೆಗಳು, ಗೋಮಾಳ, ಗುಂಡುತೋಪುಗಳನ್ನು ಈ ಹಿಂದೆಯೇ ಒತ್ತುವರಿ ಮಾಡಿಕೊಂಡಿದಿದ್ದಾರೆ.

ರಾಜಕಾಲುವೆ, ಬಂಡಿದಾರಿ, ಸರ್ಕಾರಿ ಬ-ಖರಾಬು ಜಾಗಗಳನ್ನು ಗುರುತಿಸಿ, ಸರ್ಕಾರದ ವಶಕ್ಕೆ ಪಡೆಯುವವರೆಗೂ ಯಾವುದೇ ಕಾರಣಕ್ಕೂ ಪಥ ಬದಲಾವಣೆಯಾಗಲೀ, ಪೋಡಿ, ಖಾತೆ ಮತ್ತು ಯಾವುದೇ ಉಪ ನೋಂದಣಾಧಿಕಾರಿ ಕಛೇರಿಗಳಲ್ಲಿ ನೋಂದಣಿಗೆ ಅವಕಾಶ ಮಾಡದಂತೆ ತಡೆಹಿಡಿಯಬೇಕು. ಯಾವುದೇ ಕಾರಣಕ್ಕೂ ಬೆಸ್ಕಾಂನಿಂದ ವಿದ್ಯುತ್, ನೀರಿನ ಸಂಪರ್ಕವನ್ನು ಸಹ ಕಲ್ಪಿಸದಂತೆ ತಡೆಹಿಡಿಯಬೇಕೆಂದು ದೂರಿನಲ್ಲಿ ತಿಳಿಸಿದ್ದಾರೆ.

ದೂರಿನನ್ವಯ ಕ್ರಮ ಜರುಗಿಸದ ಸಂದರ್ಭದಲ್ಲಿ ಜೈ ಭೀಮ್ ಕರ್ನಾಟಕ ರಾಜ್ಯದ ಹಲವು ಸಂಘಟನೆಗಳ ನೇತೃತ್ವದಲ್ಲಿ ಕಂದಾಯ ಸಚಿವರ ಕಛೇರಿ ಹಾಗೂ ಮನೆ, ಆಯುಕ್ತರ ಕಛೇರಿಯ ಮುಂಭಾಗ ಅರೆಬೆತ್ತಲೆ ತಮಟೆ ಚಳುವಳಿಯನ್ನು ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದರು.

## ಮಹಾಶಿವರಾತ್ರಿ ಹಬ್ಬದ ಬಳಿಕ ರಾಜ್ಯ ಬಜೆಟ್ ದಿನಾಂಕವನ್ನು ನಿಗದಿಪಡಿಸಲಾಗುವುದು ಎಂದು ಸಿಎಂ ಸಿದ್ದರಾಮಯ್ಯ ತಿಳಿಸಿದ್ದಾರೆ.

### 'ಉದ್ಯೋಗ ಖಾತರಿ' ಬಜೆಟ್ ಸಂಕಟ; ಸರ್ಕಾರದಿಂದ ಬಾರದ ಆದೇಶ, ಮಿಷನ್ ಖಾತರಿ ರಾಮ್ ಜಿ ಕಾಯ್ದೆ ಜಾರಿಗೊಳಿಸುವ ಪ್ರಕ್ರಿಯೆ

# ಶಿವರಾತ್ರಿ ಹಬ್ಬದ ಬಳಿಕ ಬಜೆಟ್



### ಅಡಕತ್ತರಿಯಲ್ಲಿ ಉದ್ಯೋಗ ಖಾತರಿ

ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆ ರದ್ದುಗೊಳಿಸಿ, ವಿಕಸಿತ ಭಾರತ ಉದ್ಯೋಗ ಮತ್ತು ಅಜೀವಿಕಾ ಮಿಷನ್ (ಗ್ರಾಮೀಣ) ಖಾತರಿ (ವಿಬಿ - ಜಿ ರಾಮ್ ಜಿ) ಕಾಯ್ದೆ ಜಾರಿಗೊಳಿಸುವ ಪ್ರಕ್ರಿಯೆಯ ಗೊಂದಲದಿಂದಾಗಿ ಗ್ರಾಮೀಣ ಜನರಿಗೆ ಉದ್ಯೋಗ ಖಾತರಿ ನೀಡುವ ಯೋಜನೆಯ ಬಜೆಟ್ ರೂಪಿಸುವ ಪ್ರಕ್ರಿಯೆ ಇನ್ನೂ ನಡೆದಿಲ್ಲ. ವಿಬಿ ಜಿ ರಾಮ್ ಜಿ ಯೋಜನೆಗೂ ಹಿಂದಿನ ಪ್ರಕಾರವೇ ಬಜೆಟ್ ರೂಪಿಸಲಾಗುತ್ತದೋ ಇಲ್ಲವೋ ಎಂಬ ಗೊಂದಲ ಅಧಿಕಾರಿಗಳನ್ನು ಕಾಡುತ್ತಿದೆ.ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಂಎನ್‌ಆರ್‌ಇಜಿ ಯೋಜನೆಯಡಿ 2025-26ರಲ್ಲಿ 65.36 ಕೋಟಿ ಬಜೆಟ್ ಅನಮೋದನೆಗೊಂಡಿತ್ತು. ಅದರಲ್ಲಿ 64.69 ಕೋಟಿ ಇದುವರೆಗೆ ವೆಚ್ಚವಾಗಿದೆ. ಒಟ್ಟು 13 ಲಕ್ಷ ಮಾನವ ದಿನಗಳ ಕೆಲಸಗಳು ನಡೆದಿವೆ.

ಸಾಮಾನ್ಯವಾಗಿ ಮುಂದಿನ ಆರ್ಥಿಕ ವರ್ಷದ ಬಜೆಟ್ ರೂಪಿಸುವ ಪ್ರಕ್ರಿಯೆಗೆ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಅ.2ರಂದೇ ಆರಂಭಿಸಲಾಗುತ್ತದೆ. ಈ ಹಿಂದಿನ ಮೂರು ವರ್ಷಗಳ ವೆಚ್ಚದ ಸರಾಸರಿಯನ್ನು ನೋಡಿಕೊಂಡು ಮುಂದಿನ ವರ್ಷದ ಬಜೆಟ್ ನಿಗದಿಗೊಳಿಸಲಾಗುತ್ತದೆ.

### ಪ್ರತಾಪ್ ಬಿಜೆಪಿಯೇ ಟಿಕೆಟ್ ನೀಡಲಿಲ್ಲ



ಯತೀಂದ್ರ ಸಿದ್ದರಾಮಯ್ಯನವರು ಅಧಿಕಾರದಲ್ಲಿ ಹಸ್ತಕ್ಷೇಪ ಮಾಡುತ್ತಿರುವ ಬಗ್ಗೆ ಮಾಜಿ ಸಂಸದ ಪ್ರತಾಪ್ ಸಿಂಹ ಟೀಕೆ ಮಾಡಿರುವ ಬಗ್ಗೆ ಪ್ರತಿಕ್ರಿಯಿಸಿ, ಬಿಜೆಪಿ ಪಕ್ಷದವರೇ ತಮ್ಮ ಪಕ್ಷದ ಪ್ರತಾಪ್ ಸಿಂಹರಿಗೆ ಟಿಕೆಟ್ ನೀಡಲಿಲ್ಲ ಎಂದು ತಿರುಗೇಟು ನೀಡಿದರು.

### ಅಂತಿಮ ನಮನ ಸಲ್ಲಿಸಿದ ಸಿಎಂ

ಮಂಗಳವಾರ ನಿಧನರಾದ ಹಿರಿಯ ಪತ್ರಕರ್ತ, ಮಾಜಿ ವಿಧಾನ ಪರಿಷತ್ ಸದಸ್ಯರೂ ಆಗಿದ್ದ ರಾಮಯ್ಯ ಅವರ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದ ಸಿಎಂ ಸಿದ್ದರಾಮಯ್ಯ, ಕುಟುಂಬದವರಿಗೆ ಸಾಂತ್ವನ ಹೇಳಿದರು. ಮೃತರ ಅಂತ್ಯಕ್ರಿಯೆ ನಗರದ ಹರಿಶ್ಚಂದ್ರ ಘಾಟ್‌ನಲ್ಲಿ ಸರ್ಕಾರಿ ಗೌರವದೊಂದಿಗೆ ನೆರವೇರಿತು.

### ಕಾಮಗಾರಿಗೆ ಪೂರ್ಣ ಹೇಗೆ?

ಎಂಎನ್‌ಆರ್‌ಇಜಿ ಯೋಜನೆಯಡಿ ಕೈಗೆತ್ತಿಕೊಂಡ ಕೆಲ ಕಾಮಗಾರಿಗಳು ಇನ್ನೂ ಪೂರ್ಣಗೊಂಡಿಲ್ಲ. ಅವುಗಳನ್ನು ಪೂರ್ಣಗೊಳಿಸಲು ಅನುದಾನ ಹೊಂದಿಸುವುದು ಹೇಗೆ ಎಂಬ ಗೊಂದಲವೂ ಕೆಲವು ಗ್ರಾಮ ಪಂಚಾಯಿತಿಗಳನ್ನು ಕಾಡುತ್ತಿದೆ.

'ಹಿಂದೆಲ್ಲ ನಾವು ಎಂಎನ್‌ಆರ್‌ಇಜಿ ಯೋಜನೆಯಡಿ ಮುಂದುವರಿದ ಕಾಮಗಾರಿಗಳಿಗಾಗಿ ಬಜೆಟ್‌ನಲ್ಲಿ ಅನುದಾನ ಮೀಸಲಿಡುತ್ತಿದ್ದೆವು. ಕೇಂದ್ರ ಸರ್ಕಾರ 2026-27ನೇ ಸಾಲಿನಲ್ಲಿ ವಿಬಿ - ಜಿ ರಾಮ್ ಜಿ ಯೋಜನೆಗೆ ಬಜೆಟ್‌ನಲ್ಲಿ 95 ಸಾವಿರ ಕೋಟಿ ಮೀಸಲಿಟ್ಟಿದೆ. ಅದರ ಜೊತೆಗೆ ಎಂಎನ್‌ಆರ್‌ಇಜಿ ಯೋಜನೆಗೂ 30 ಸಾವಿರ ಕೋಟಿ ಮೀಸಲಿಟ್ಟಿದೆ. ಅದನ್ನು ಮುಂದುವರಿದ ಕಾಮಗಾರಿಗಳಿಗೆ ಒದಗಿಸುವ ಸಾಧ್ಯತೆ ಇದೆ. ಆದರೆ, ಈ ಬಗ್ಗೆ ಸ್ಪಷ್ಟ ಮಾಹಿತಿ ನಮಗೆ ಇನ್ನೂ ತಲುಪಿಲ್ಲ.

• ಉದಯವಾಹಿನಿ ,ಬೆಂಗಳೂರು

ಮಹಾಶಿವರಾತ್ರಿ ಹಬ್ಬದ ಬಳಿಕ ರಾಜ್ಯ ಬಜೆಟ್ ದಿನಾಂಕವನ್ನು ನಿಗದಿಪಡಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ. ಇಂದು ಬೆಳಗ್ಗೆ ನಗರದ ಶಕ್ತಿ ಭವನದಲ್ಲಿ ವಿವಿಧ ಇಲಾಖೆಗಳೊಂದಿಗೆ ಅವರು ಸಭೆ ನಡೆಸಿದರು. ಇದಕ್ಕೂ ಮುನ್ನ ಮಾಧ್ಯಮಗಳ ಪ್ರಶ್ನೆಗೆ ಉತ್ತರಿಸಿದ ಸಿಎಂ, ಹಬ್ಬದ ಬಳಿಕ ಬಜೆಟ್ ದಿನಾಂಕ ತಿಳಿಸಲಾಗುವುದು ಎಂದರು.

ಕೆಲ ಶಾಸಕರು ವಿದೇಶ ಪ್ರವಾಸ ಕೈಗೊಂಡಿರುವ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಸ್ವಂತ ಖರ್ಚಿನಲ್ಲಿ ಶಾಸಕರು ವಿದೇಶ ಪ್ರವಾಸ ಕೈಗೊಂಡಿದ್ದಾರೆ. ಇದರಲ್ಲಿ ತಪ್ಪೇನಿದೆ ಎಂದು ಪ್ರಶ್ನಿಸಿದರು. ನಾಯಕತ್ವ ಬದಲಾವಣೆ ಕುರಿತ ಪ್ರಶ್ನೆಗೆ ಅಸಮಾಧಾನಗೊಂಡ ಸಿದ್ದರಾಮಯ್ಯ ಅವರು ಪದೇ ಪದೆ ಇದೇ ವಿಷಯದ ಬಗ್ಗೆ ಕೇಳಬಾರದು.

ಈ ವಿಚಾರದಲ್ಲಿ ಹಲವು ಬಾರಿ ಸ್ಪಷ್ಟನೆ ನೀಡಿದ್ದೇನೆ. ನಾಯಕತ್ವ ಬದಲಾವಣೆ ಬಗ್ಗೆ ಪಕ್ಷದ ವರಿಷ್ಠರು ತೀರ್ಮಾನಿಸಿದರೆ ಅದರಂತೆ ನಾನು ಮತ್ತು ಉಪಮುಖ್ಯಮಂತ್ರಿಗಳಿಬ್ಬರೂ ನಡೆದುಕೊಳ್ಳುತ್ತೇವೆ ಎಂದರು.

**ಹೈಕಮಾಂಡ್ ಏನು ಹೇಳುತ್ತದೆ ಅದರಂತೆ ನಡೆದುಕೊಳ್ಳುತ್ತೇನೆ - ಸಿಎಂ ಸಿದ್ದರಾಮಯ್ಯ:** ಮಂಗಳವಾರ ವಿಧಾನಸೌಧದಲ್ಲಿ ಮಾತನಾಡಿದ್ದ ಸಿಎಂ ಸಿದ್ದರಾಮಯ್ಯ ಅವರು, ನಾನು ಸಿದ್ದರಾಮಯ್ಯ ಕದ್ದು ಮುಚ್ಚಿ ಮಾತನಾಡಿಲ್ಲ, ಹೈಕಮಾಂಡ್ ಮುಂದೆ ಮಾತಾಡಿದ್ದೇವೆ ಎಂಬ ವಿಚಾರವಾಗಿ ಪ್ರತಿಕ್ರಿಯಿಸಿ, ನಾನು ಅದರ ಬಗ್ಗೆ ಮಾತನಾಡುವುದಿಲ್ಲ. ಹೈಕಮಾಂಡ್ ಏನು ಹೇಳುತ್ತದೆ ಅದರಂತೆ ನಡೆದುಕೊಳ್ಳುತ್ತೇನೆ. ಅವರು ಏನು ಹೇಳುತ್ತಾರೋ ಅವರನ್ನೇ ಕೇಳಿ ಎಂದಿದ್ದರು. ದೆಹಲಿಗೆ ಹೋಗುತ್ತೀರಾ ಎಂಬ ವಿಚಾರವಾಗಿ ಪ್ರತಿಕ್ರಿಯಿಸಿ, ಕರೆಯದಿದ್ರೆ ನಾನು ಯಾಕೆ ಹೋಗಲಿ. ಬಜೆಟ್ ಸಭೆ ಇವೆ. ಹೈಕಮಾಂಡ್ ಕರೆದರೆ ಹೋಗುತ್ತೇನೆ ಎಂದು ತಿಳಿಸಿದರು. ಬಜೆಟ್ ಪೂರ್ವ ಸಿದ್ಧತೆಗೆ ಡಿ.ಕೆ. ಶಿವಕುಮಾರ್ ಗೈರು, ಅನುಮತಿ ಪಡೆದಿದ್ದಾರಾ ಎಂಬ ಪ್ರಶ್ನೆಗೆ, ಹೌದು ಲೆಟರ್ ಬರೆದಿದ್ದಾರೆ. ಅಸ್ಸಾಂ ಚುನಾವಣೆ ಹಿನ್ನೆಲೆಯಲ್ಲಿ ದೆಹಲಿಗೆ ಹೋಗುತ್ತೇನೆ ಅಂತ ಬರೆದಿದ್ದಾರೆ. ಅವರ ಅನುಪಸ್ಥಿತಿಯಲ್ಲಿ ಸಭೆ ನಡೆಯುತ್ತದೆ ಎಂದಿದ್ದರು.

## ಮಾ.6ಕ್ಕೆ ಕರ್ನಾಟಕ ಹಾಲು ಮಹಾಮಂಡಳದ ಚುನಾವಣೆ

• ಉದಯವಾಹಿನಿ ,ಬೆಂಗಳೂರು

20 ತಿಂಗಳ ಹಿಂದೆಯೇ ಅಧಿಕಾರ ಅವಧಿ ಮುಗಿದಿದ್ದರೂ ಕಾನೂನು ತೊಡಕುಗಳ ಕಾರಣದಿಂದ ಮುಂದೆ ಹೋಗುತ್ತಲೇ ಇದ್ದ ಕರ್ನಾಟಕ ಹಾಲು ಮಹಾಮಂಡಳದ (ಕೆಎಂಎಫ್) ಅಧ್ಯಕ್ಷರ ಚುನಾವಣೆ ಮಾ.6ರಂದು ನಡೆಯುವ ಸಾಧ್ಯತೆ ಇದೆ. ಚಿಕ್ಕಬಳ್ಳಾಪುರ ಹಾಲು ಒಕ್ಕೂಟದ ಚುನಾವಣೆಯು ಮುಗಿದಿರುವುದರಿಂದ ಮತದಾನದ ದಿನಾಂಕ ಅಂತಿಮಗೊಳಿಸುವಂತೆ ಕರ್ನಾಟಕ ರಾಜ್ಯ ಸಹಕಾರ ಚುನಾವಣಾ ಆಯೋಗಕ್ಕೆ ಪ್ರಸ್ತಾವವನ್ನು ಸಲ್ಲಿಸಲಾಗಿದೆ. ಬಹುತೇಕ ಅದೇ ದಿನ ಅಧ್ಯಕ್ಷರ ಆಯ್ಕೆ ಪ್ರಕ್ರಿಯೆ ನಡೆಯಬಹುದು.

## ಸಿದ್ಧಾರೂಢ ಮಿಷನ್ ಆಶ್ರಮದಲ್ಲಿ ಶಿವರಾತ್ರಿ ಮಹೋತ್ಸವ

• ಉದಯವಾಹಿನಿ ,ಬೆಂಗಳೂರು



ಉದಯವಾಹಿನಿ ಚಿತ್ರ

ಮಹಾ ಶಿವರಾತ್ರಿ ಪ್ರಯುಕ್ತ ಬೆಂಗಳೂರು ದಕ್ಷಿಣ ತಾಲ್ಲೂಕಿನ ರಾಮೋಹಳ್ಳಿಯ ಶ್ರೀ ಸಿದ್ಧಾರೂಢ ಮಿಷನ್ ಆಶ್ರಮದಲ್ಲಿ ಇದೇ 15.2.2026 ರಂದು ಸಂಜೆ 6.00ರಿಂದ ಶಿವ ಪಾರ್ವತಿ ಗಣೇಶ ಷಣ್ಮುಖ ನಾಗ ನಂದಿ ಪ್ರತಿಷ್ಠೆ, ಶಿವಾವತಾರಿ ಶ್ರೀ ಸಿದ್ಧಾರೂಢ ಸಾಯಿಬಾಬಾ ಅವರಿಗೆ ವಿಶೇಷ ಪೂಜೆ ಪಂಚಾಮೃತಾಭಿಷೇಕ ಅಷ್ಟೋತ್ತರ ಶತನಾಮಾವಳಿ ಶ್ರೀರುದ್ರ ಚಮಕ ಪಾರಾಯಣ ಉಪನ್ಯಾಸ ಭಕ್ತಿ ಸಂಗೀತ ಭಜನೆ ಮುಂತಾದವುಗಳನ್ನು ಏರ್ಪಡಿಸಲಾಗಿದೆ.

ಸಿದ್ಧಾರೂಢ ಮಿಷನ್ ಅಧ್ಯಕ್ಷ ಡಾ. ಆರೂಢಭಾರತೀ ಸ್ವಾಮೀಜಿ, ಸರ್ವ ಧರ್ಮ ಪೀಠದ ಶ್ರೀ ಸಂಗಮಾನಂದ ಸ್ವಾಮೀಜಿ ಸಾನ್ನಿಧ್ಯವಹಿಸುವರು. ಕಳವಾರ ಓಂಕಾರ ಜ್ಯೋತಿ ಮಠದ ಕಾಳೀತನಯ ಶ್ರೀ ಉಮಾಮಹೇಶ್ವರ ಸ್ವಾಮೀಜಿ, ಶ್ರೀಮತಿ ಪ್ರಭಾ ಸುಬ್ರಹ್ಮಣ್ಯ ಜೋಯಿಸ್ ಭಕ್ತಿ ಸಂಗೀತ ನಡೆಸಿ ಕೊಡುವರು.

ರಾಜಸ್ಥಾನದ ಪುಷ್ಕರ ಆಶ್ರಮದ ಸಂತ ರಾಮಕಿಷನ್ ಮಹಾರಾಜ್, ಗೋವತ್ಸ ಶ್ರೀ ಓಂಪ್ರಕಾಶ ಬ್ರಹ್ಮಚಾರಿ ಭಾಗವಹಿಸುವರು ಎಂದು ಸಿದ್ಧಾರೂಢ ಮಿಷನ್ ಕಾರ್ಯದರ್ಶಿ ಜಿ. ಎಲ್. ಸಂತೋಷ್ ತಿಳಿಸಿದ್ದಾರೆ.

# ಶಯನೋತ್ಸವ ಸುಸಂಪನ್ನ



ಉದಯವಾಹಿನಿ ಚಿತ್ರ

• ಉದಯವಾಹಿನಿ ,ಬೆಂಗಳೂರು

ವಸಂತಪುರದಲ್ಲಿ ಅನಾದಿಕಾಲದಿಂದ ನೆಲಸಿರುವ ಸ್ವಯಂವ್ಯಕ್ತ ಶ್ರೀವಸಂತವಲ್ಲಭರಾಯ ಸ್ವಾಮಿಯ ಶಯನೋತ್ಸವ ಕಾರ್ಯವು ಸುಸಂಪನ್ನವಾಯಿತು.

ಕಳೆದ ಒಂಬತ್ತು ದಿನಗಳಿಂದ ನಡೆದ ಶ್ರೀ ಸ್ವಾಮಿಯ ಬ್ರಹ್ಮ ರಥೋತ್ಸವವು ವೈಭವಯುತವಾಗಿ ನಡೆದು ಅಂತಿಮ ಉತ್ಸವವಾಗಿ ಸ್ವಾಮಿಗೆ ವಿಶ್ರಾಂತಿ ನೀಡುವ ಶಯನೋತ್ಸವವು ಸುಗಂಧ ಪರಿಮಳಯುಕ್ತ ಮಂಟಪದಲ್ಲಿ ಅದ್ದೂರಿಯಾಗಿ ನೆರವೇರಿತು.

ಉತ್ಸವವನ್ನು ತಲಘಟ್ಟಪುರ ಮಾಜಿ ಶ್ಯಾನಭೋಗ ಟಿವಿ ನಾರಾಯಣಮೂರ್ತಿ ಯವರ ಕುಟುಂಬದವರು ನೆಡಸಿಕೊಂಡು ಬಂದಿದ್ದಾರೆ ಪ್ರಸ್ತುತ ತ. ನಾ. ಶಾಂತಕುಮಾರ್ ಅವರ ನೇತೃತ್ವದಲ್ಲಿ ಅವರ ಕುಟುಂಬದವರೊಂದಿಗೆ ನೆಡೆಯಿತು, ಪ್ರಧಾನ ಅರ್ಚಕ ರಘುರಾಮ್ ಭಟ್ ಅವರು ಸಕಲ ವಿಧಿವಿಧಾನಗಳೊಂದಿಗೆ ಪೂಜಾ ಕಾರ್ಯವನ್ನು ಮಾಡಿದರು.

ಈ ಸಂದರ್ಭದಲ್ಲಿ ಸಾವಿರಾರು ಭಕ್ತರು ದೇವಾಲಯಕ್ಕೆ ಆಗಮಿಸಿ ದೇವರ ದರ್ಶನ ಪಡೆದು ತೀರ್ಥ ಪ್ರಸಾದ ಸ್ವೀಕರಿಸಿದರು.

ಈ ಸಂದರ್ಭದಲ್ಲಿ ಅಕ್ಷಯ ವಿಪ್ರ ಮಹಾಸಭಾದ ಕಾರ್ಯದರ್ಶಿ ಎನ್.ಎಸ್. ಸುಧೀಂದ್ರ ರಾವ್, ಕಿರಣ್ ಕುಮಾರ್,ಎಸ್.ರಾಮರಾವ್, ಸುಧಾಕರ ಸೆರಿದಂತೆ ಮತ್ತಿತರರು ಉಪಸ್ಥಿತರಿದ್ದರು.

## ಯತೀಂದ್ರ ಅವರ ಮಾತೇ ನಮಗೆ ವೇದವಾಕ್ಯ ಎಂದ ಡಿ.ಕೆ. ಸುರೇಶ್!

• ಉದಯವಾಹಿನಿ ,ಬೆಂಗಳೂರು



ಉದಯವಾಹಿನಿ ಚಿತ್ರ

ಕಾಂಗ್ರೆಸ್ ಪಕ್ಷವು ಸರ್ವ ಧರ್ಮ, ಸರ್ವ ಪಕ್ಷಗಳ ನಾಯಕರನ್ನು ಒಳಗೊಂಡಿದೆ. ಇಲ್ಲಿ ಬಿಜೆಪಿ, ಜನತಾ ದಳ, ಬಿಎಸ್‌ಪಿ ಸೇರಿದಂತೆ ಎಲ್ಲರೂ ಇದ್ದಾರೆ. ನಮ್ಮಲ್ಲಿ ಮೊದಲ ಆದ್ಯತೆ ಅವರಿಗೆ. ಹೊರಗಿನಿಂದ ಬಂದವರಿಗೆ ಮೊದಲ ಆದ್ಯತೆ, ಆಮೇಲೆ ಕಾಂಗ್ರೆಸ್ಸಿಗರಿಗೆ ಆದ್ಯತೆ. ಅತಿಥಿಗಳನ್ನು ಗೌರವಿಸುವುದೇ ಕಾಂಗ್ರೆಸ್ ಪಕ್ಷದ ಗುರಿ ಎಂದು ಬಮೂಲ್ ಅಧ್ಯಕ್ಷ ಡಿ.ಕೆ. ಸುರೇಶ್ ತಿಳಿಸಿದರು. ಸದಾಶಿವನಗರ ನಿವಾಸದ ಬಳಿ ಮಾಧ್ಯಮಗಳ ಪ್ರಶ್ನೆಗಳಿಗೆ ಅವರು ಉತ್ತರಿಸಿದರು.

ರಾಜ್ಯ ಸರ್ಕಾರ ಬಿಜೆಪಿ ಮುಖಂಡನಿಗೆ ಸಚಿವ ಸ್ಥಾನಮಾನ ನೀಡಿದೆ ಎಂದು ಕೇಳಿದಾಗ, ಕಾಂಗ್ರೆಸ್ ಎಲ್ಲರನ್ನು ಗೌರವಿಸುತ್ತದೆ. ಎಲ್ಲರನ್ನು ಒಟ್ಟಾಗಿ ತೆಗೆದುಕೊಂಡು ಹೋಗಬೇಕು ಎಂಬ ಭಾವನೆ ಮುಖ್ಯಮಂತ್ರಿಗಳಿಗೆ ಇರುವುದರಿಂದ ಮಾಡಿರಬಹುದು. ಇದರಲ್ಲಿ ತಪ್ಪೇನಿಲ್ಲ? ಎಂದರು. ನಿಮ್ಮ ಸಹೋದರ ಅವರು ದೆಹಲಿಯಲ್ಲಿದ್ದಾರೆ ಎಂದು ಕೇಳಿದಾಗ, ಅವರು ದೆಹಲಿ ಪ್ರವಾಸಕ್ಕೆ ಹೋಗುವಾಗ ಚುನಾವಣೆ ವಿಚಾರವಾಗಿ ಸಭೆ ಮಾಡಲು ಕರೆದಿದ್ದಾರೆ ಎಂದು ನಿಮಗೆ ಮಾಹಿತಿ ನೀಡಿದ್ದಾರೆ. ಡಿ.ಕೆ. ಶಿವಕುಮಾರ್ ಅವರು ಉಪಮುಖ್ಯಮಂತ್ರಿ ಆದಾಗ ಮಾತ್ರ ದೆಹಲಿಗೆ ಹೋಗುತ್ತಿಲ್ಲ.

ಕಳೆದ 40 ವರ್ಷಗಳಿಂದ ನಿರಂತರವಾಗಿ ದೆಹಲಿಗೆ ಹೋಗುತ್ತಿದ್ದಾರೆ. ತಿಂಗಳಿಗೆ ಒಂದು ಅಥವಾ ಎರಡು ಬಾರಿ ಹೋಗುತ್ತಾರೆ. ಈಗ ಅವರು ಪಕ್ಷದ ಅಧ್ಯಕ್ಷರು ಹಾಗೂ ಉಪಮುಖ್ಯಮಂತ್ರಿಗಳು ಸರ್ಕಾರದ ಕೆಲಸಗಳು ಇರುತ್ತವೆ. ಇನ್ನು ದೆಹಲಿಗೆ ಹೋದಾಗ, ರಾಜಕೀಯವಾಗಿ ಅಲ್ಲದಿದ್ದರೂ ಕುಶಲೋಪರಿ ಚರ್ಚೆಗೆ ಭೇಟಿ ಮಾಡುತ್ತಾರೆ.

ಸಂಸತ್ ಅಧಿವೇಶನ ನಡೆಯುತ್ತಿರುವಾಗ ಇಲಾಖೆಗಳಿಗೆ ಸಂಬಂಧಿಸಿದ ಚರ್ಚೆ ಮಾಡಲು ಮಂತ್ರಿಗಳನ್ನು ಭೇಟಿ ಮಾಡಲಾಗುವುದು. ಭದ್ರಾ ಮೇಲ್ದಂಡೆ ಯೋಜನೆ, ಬೆಂಗಳೂರಿನ ವಿಚಾರವಾಗಿ ಚರ್ಚೆ ಮಾಡುತ್ತಾರೆ.

ಹೀಗಾಗಿ ದೆಹಲಿ ಪ್ರವಾಸ ಶಿವಕುಮಾರ್ ಅವರಿಗೆ ಹೊಸತಲ್ಲ ಎಂದು ತಿಳಿಸಿದರು.

**ಯತೀಂದ್ರ ಅವರ ಮಾತೇ ನಮಗೆ ವೇದವಾಕ್ಯ:** ಯತೀಂದ್ರ ಸಿದ್ದರಾಮಯ್ಯ ಅವರ ಹೇಳಿಕೆ ಬಗ್ಗೆ ಕೇಳಿದಾಗ, ಈ ವಿಚಾರವಾಗಿ ಡಿಸಿಎಂ ಅವರು ಈಗಾಗಲೇ ಹೇಳಿದ್ದಾರೆ. ಅವರಷ್ಟು ತಿಳುವಳಿಕೆ ಇಲ್ಲ. ಅವರಷ್ಟು ದೊಡ್ಡವರು ನಾವಲ್ಲ. ಅವರು ಏನು ಹೇಳುತ್ತಾರೋ ಅದೇ ವೇದವಾಕ್ಯ ಎಂದರು. ನಮಗೆ ಸಿಗುವ ನೋಟೀಸ್ ಯತೀಂದ್ರ ಅವರಿಗೆ ಏಕಿಲ್ಲ ಎಂಬ ಶಾಸಕ ಇಕ್ಬಾಲ್ ಹುಸೇನ್ ಅವರ ಹೇಳಿಕೆ ಬಗ್ಗೆ ಕೇಳಿದಾಗ, ಅವರು ಹೇಳಿರುವುದರಲ್ಲಿ ತಪ್ಪೇನಿಲ್ಲ. ಎಲ್ಲರಿಗೂ ಒಂದೇ ನೀತಿ ಇರಬೇಕು. ಅವರೇ ಹೈಕಮಾಂಡ್ ಆಗಿರುವುದರಿಂದ ಏನೂ ಸಮಸ್ಯೆ ಇಲ್ಲ ಎಂದ ಹೇಳಿದರು.

### ಒಳಮೀಸಲಾತಿ ಜಾರಿ, ಖಾಲಿ ಹುದ್ದೆಗಳ ಭರ್ತಿಗೆ ಆಗ್ರಹ; ಒಳಮೀಸಲಾತಿ; ರಾಜಕೀಯ ನಾಟಕ ಬಿಡಿ


# ಸಿಎಂಗೆ ಛಲವಾದಿ ನಾರಾಯಣಸ್ವಾಮಿ ಬಹಿರಂಗ ಪತ್ರ

• ಉದಯವಾಹಿನಿ ,ಬೆಂಗಳೂರು

ಎಸ್‌ಸಿ, ಎಸ್‌ಟಿ ಮೀಸಲಾತಿ ಹೆಚ್ಚಳದ ಕ್ರೆಡಿಟ್ ರಾಜಕಾರಣ, ಒಳಮೀಸಲಾತಿ ಜಾರಿಯಲ್ಲಿನ ವಿಳಂಬ ಹಾಗೂ ಖಾಲಿ ಹುದ್ದೆಗಳ ಭರ್ತಿ ಕುರಿತು ಸಿಎಂ ಸಿದ್ದರಾಮಯ್ಯ ಅವರಿಗೆ ವಿಧಾನ ಪರಿಷತ್ ವಿಪಕ್ಷ ನಾಯಕ ಛಲವಾದಿ ಟಿ. ನಾರಾಯಣಸ್ವಾಮಿ ಅವರು ಬಹಿರಂಗ ಪತ್ರ ಬರೆದಿದ್ದಾರೆ.

ದಾವಣಗೆರೆಯ ರಾಜನಹಳ್ಳಿಯಲ್ಲಿ ನಡೆದ ವಾಲ್ಮೀಕಿ ಜಾತ್ರಾ ಮಹೋತ್ಸವದಲ್ಲಿ ತಾವು ನೀಡಿದ ಭಾಷಣವು ಕೇವಲ ರಾಜಕೀಯ ಪ್ರೇರಿತವಾಗಿದೆಯೇ ಹೊರತು, ಅದರಲ್ಲಿ ದಲಿತ ಮತ್ತು ಹಿಂದುಳಿದ ವರ್ಗಗಳ ಹಿತಾಸಕ್ತಿ ಎಳ್ಳಷ್ಟೂ ಕಾಣುತ್ತಿಲ್ಲ. ಜನರ ಕಣ್ಣಿಗೆ ಮಣ್ಣೆರಚುವ ಭಾಷಣಗಳಿಂದ ಸಮುದಾಯದ ಏಳಿಗೆ ಅಸಾಧ್ಯವೆಂಬ ಕಟು ಸತ್ಯವನ್ನು ಈ ಮೂಲಕ ತಮಗೆ ನೆನಪಿಸಬಯಸುತ್ತೇನೆ.

**ಮೀಸಲಾತಿ ಹೆಚ್ಚಳ ಮತ್ತು ನಿಮ್ಮ ದ್ವಂದ್ವ ನಿಲುವು:** ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೀಸಲಾತಿ ಪ್ರಮಾಣವನ್ನು ಕ್ರಮವಾಗಿ ಶೇ. 15 ರಿಂದ 17ಕ್ಕೆ ಮತ್ತು ಶೇ. 3 ರಿಂದ 7ಕ್ಕೆ ಹೆಚ್ಚಿಸುವ ನಿರ್ಧಾರವನ್ನು ತೆಗೆದುಕೊಂಡಿದ್ದು ಬಿಜೆಪಿ ಸರ್ಕಾರ ಮತ್ತು ಅಂದಿನ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿಯವರು. ಅಂದು ಆ ನಿರ್ಧಾರವನ್ನು ಚುನಾವಣಾ ಗಿಮಿಕ್ ಎಂದು ಲೇವಡಿ



ಉದಯವಾಹಿನಿ ಚಿತ್ರ

ಮಾಡಿದ್ದ ತಾವು, ಇಂದು ಅದೇ ಅಂಕಿ-ಅಂಶಗಳನ್ನು ಬಳಸಿಕೊಂಡು ವೇದಿಕೆಗಳ ಮೇಲೆ ಹಕ್ಕು ಸಾಧಿಸುತ್ತಿರುವುದು ನಿಮ್ಮ ನೈತಿಕ ಅಧಃಪತನಕ್ಕೆ ಸಾಕ್ಷಿಯಾದಂತಿದೆ.

ಬಿಜೆಪಿ ಹಾಕಿಕೊಟ್ಟ ದಾರಿಯಲ್ಲಿ ನಡೆಯುತ್ತಾ, ಕೇಂದ್ರದ ಮೇಲೆ ಗೂಬೆ ಕೂರಿಸುವ ಪ್ರಯತ್ನವನ್ನು ಈಗಲಾದರೂ ನಿಲ್ಲಿಸಿ. ಒಳಮೀಸಲಾತಿ ವಿಷಯದಲ್ಲಿ ಕಾಂಗ್ರೆಸ್ ಸರ್ಕಾರವು ಕಾಲಹರಣ ಮಾಡುತ್ತಿರುವುದು ಸ್ಪಷ್ಟವಾಗಿ ಗೋಚರಿಸುತ್ತಿದೆ.

### ಅನುದಾನದ ದಾರಿ ತಪ್ಪಿಸುವಿಕೆ

ಶೇ. 24.1 ರಷ್ಟು ಹಣವನ್ನು ಮೀಸಲಿಟ್ಟಿದ್ದೇವೆ ಎಂದು ಹೇಳುವ ತಾವು, ಆ ಹಣವು ಸರಿಯಾದ ಉದ್ದೇಶಕ್ಕೆ ಬಳಕೆಯಾಗುತ್ತಿದೆಯೇ ಎಂದು ಆತ್ಮಾವಲೋಕನ ಮಾಡಿಕೊಳ್ಳಿ.

ಎಸ್‌ಸಿ, ಎಸ್,ಟಿ ಸಮುದಾಯದ ಅಭಿವೃದ್ಧಿಗೆ ಬಳಕೆಯಾಗಬೇಕಿದ್ದ ಸಾವಿರಾರು ಕೋಟಿ ರೂಪಾಯಿಗಳನ್ನು ಗ್ಯಾರಂಟಿ ಯೋಜನೆಗಳಿಗೆ ಡೈವರ್ಟ್ ಮಾಡಿರುವುದು ಸಮುದಾಯಕ್ಕೆ ಮಾಡಿದ ದ್ರೋಹವಲ್ಲವೇ

9ನೇ ಶೆಡ್ಯೂಲ್ಗೆ ಸೇರಿಸುವ ಮುನ್ನವೇ ಹಣ ಹಂಚಿಕೆ ಮಾಡಿದ್ದೇವೆ ಎನ್ನುವ ನೀವು, ಕಾನೂನಾತ್ಮಕ ಪ್ರಶ್ನೆಗಳಿಗೆ ಉತ್ತರಿಸಲು ತಯಾರಿದ್ದೀರಾ? ಎಂದು ಪ್ರಶ್ನಿಸಿದ್ದಾರೆ.

## ಕಾಂಗ್ರೆಸ್ ಸರ್ಕಾರಕ್ಕೆ ರಮ್ಯಾ, ರಶ್ಮಿಕಾ, ಶ್ರೀನಿಧಿ, ಪೂಜಾ ಹೆಗ್ಡೆ, ರುಕ್ಮಿಣಿ ವಸಂತ್ ಕಾಣುತ್ತಿಲ್ಲವೇ?: ತಮನ್ನಾ ಆಯ್ಕೆಗೆ ಆಕ್ಷೇಪ

• ಉದಯವಾಹಿನಿ ,ಬೆಂಗಳೂರು

ಮೈಸೂರು ಸ್ಯಾಂಡಲ್ ಸೋಪ್ ಅನ್ನು ಪ್ರತಿನಿಧಿಸಲು ಬಹುಭಾಷಾ ನಟಿ ತಮನ್ನಾ ಭಾಟಿಯಾ ಅವರು ಕೆಎಸ್‌ಡಿಎಲ್‌ನ ಬ್ರ್ಯಾಂಡ್ ರಾಯಭಾರಿಯಾಗಿ ಅಧಿಕೃತವಾಗಿ ಕಾರ್ಯಾರಂಭಿಸಿದ್ದಾರೆ. ಕನ್ನಡ ಮಾತನಾಡದ ನಟಿಯನ್ನು ಆಯ್ಕೆ ಮಾಡಿರುವ ಹಿಂದಿನ ತಾರ್ಕಿಕತೆಯನ್ನು ಬಿಜೆಪಿ ಸಂಸದ ಡಾ.ಕೆ.ಸುಧಾಕರ್ ಸೇರಿದಂತೆ ಕೆಲ ವ್ಯಕ್ತಿಗಳು ಪ್ರಶ್ನಿಸಿ, ತಮ್ಮ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಮತ್ತೊಂದೆಡೆ, ರಾಜ್ಯ ಸರ್ಕಾರ ತನ್ನ ಆಯ್ಕೆಯನ್ನು ಸಮರ್ಥಿಸಿಕೊಂಡಿದೆ. ಅವರನ್ನು ಅರ್ಹತೆ ಮತ್ತು ವ್ಯವಹಾರ ಪರಿಗಣನೆಗಳ ಆಧಾರದ ಮೇಲೆ ಆಯ್ಕೆ ಮಾಡಲಾಗಿದೆ ಎಂದು ಹೇಳಿದೆ.

**ಸಚಿವ ಕೆ.ಸುಧಾಕರ್ ಪ್ರಶ್ನೆ:** ಚಿಕ್ಕಬಳ್ಳಾಪುರದ ಬಿಜೆಪಿ ಸಂಸದ ಮತ್ತು ಮಾಜಿ ರಾಜ್ಯ ಸಚಿವ ಕೆ.ಸುಧಾಕರ್ ಅವರು ತಮ್ಮ ಅಫೀಶಿಯಲ್ ಎಕ್ಸ್ ಪೋಸ್ಟ್ ಮೂಲಕ ತಮ್ಮ ಅಸಮಾಧಾನ ಹೊರಹಾಕಿದ್ದಾರೆ.

''ನಾಡದ್ರೋಹಿ ಕಾಂಗ್ರೆಸ್ ಸರ್ಕಾರಕ್ಕೆ ಕನ್ನಡದ ಸಿನಿತಾರೆಯರು ಕಾಣುತ್ತಿಲ್ಲವೇ? ಕರ್ನಾಟಕದ ಸುಪ್ರಸಿದ್ಧ ಅಂತಾರಾಷ್ಟ್ರೀಯ ಬ್ರ್ಯಾಂಡ್ ಮೈಸೂರು ಸ್ಯಾಂಡಲ್ ಸೋಪ್‌ಗೆ ಬ್ರ್ಯಾಂಡ್ ಅಂಬಾಸಿಡರ್ ನೇಮಿಸಲು ನಮ್ಮದೇ ಕನ್ನಡ ನಾಡಿನ ಅನೇಕ ತಾರೆಗಳು ಇದ್ದರೂ ಪರರಾಜ್ಯದ, ಅನ್ಯಭಾಷೆಯ ಸಿನಿಮಾ ನಟಿಯೊಬ್ಬರನ್ನು ಕೋಟ್ಯಂತರ ರೂಪಾಯಿ ಪೇಮೆಂಟ್ ಕೊಟ್ಟು ಬ್ರ್ಯಾಂಡ್ ಅಂಬಾಸಿಡರ್ ಆಗಿ ನೇಮಿಸಿರುವುದು ಕಾಂಕಾಂಗ್ರೆಸ್



ಪಕ್ಷದ ಕನ್ನಡ ವಿರೋಧಿ ಮನಸ್ಥಿತಿಗೆ ಮತ್ತೊಂದು ಸಾಕ್ಷಿ. ಕನ್ನಡ ಸಿನಿ ತಾರೆ ಯರಾದ ರಮ್ಯಾ, ರಶ್ಮಿಕಾ ಮಂದಣ್ಣ, ಶ್ರೀನಿಧಿ ಶೆಟ್ಟಿ, ಪೂಜಾ ಹೆಗ್ಡೆ, ರುಕ್ಮಿಣಿ ವಸಂತ್ ಸೇರಿದಂತೆ ಅನೇಕ ನಟಿಯರು ಇವತ್ತು ಅನೇಕ ಭಾಷೆಗಳ ಚಿತ್ರರಂಗದಲ್ಲಿ ಬೇಡಿಕೆಯುಳ್ಳ ಜನಪ್ರಿಯ ನಟಿಯರಾಗಿ ಕನ್ನಡದ ಕೀರ್ತಿ ಪತಾಕೆಯನ್ನು ರಾಷ್ಟ್ರ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಹಾರಿಸಿದ್ದಾರೆ.

ನಮ್ಮದೇ ಕನ್ನಡ ನಾಡಿನ ನಟಿಯರನ್ನು ಬಿಟ್ಟು ಬೇರೆಯವರಿಗೆ ಮಣೆ ಹಾಕುವ ಕಾಂಗ್ರೆಸ್ ಪಕ್ಷದ ಧೋರಣೆ ಕನ್ನಡ ನಾಡಿನ ಪ್ರತಿಭೆಗಳಿಗೆ ಮಾಡಿರುವ ಅಮಪಾನ ಮಾತ್ರವಲ್ಲ, ಮೈಸೂರು ಸ್ಯಾಂಡಲ್ ಸೋಪಿನ ಅಸ್ಮಿತೆಗೂ ಮಾಡಿರುವ ಘೋರ ಅಪಮಾನ. ಈ ಕನ್ನಡ ವಿರೋಧಿ, ನಾಡದ್ರೋಹಿ ಕಾಂಗ್ರೆಸ್ ಪಕ್ಷವನ್ನ ಕನ್ನಡಿಗರು ಎಂದಿಗೂ ಕ್ಷಮಿಸುವುದಿಲ್ಲಎಂದಿದ್ದಾರೆ.

**ಎಂ.ಬಿ.ಪಾಟೀಲ ಪ್ರತಿಕ್ರಿಯೆ:** ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಎಕ್ಸ್ ಪೋಸ್ಟ್‌ನಲ್ಲಿ, ''ಮೈಸೂರು **ಸ್ಯಾಂಡಲ್‌ಗೆ ಜಾಗತಿಕ ಮೆರುಗು:** ರಾಯಭಾರಿಯಾಗಿ ತಮನ್ನಾ ಭಾಟಿಯಾ ನೇಮಕ. ಕರ್ನಾಟಕದ ಹೆಮ್ಮೆಯ ಕೆ.ಎಸ್.ಡಿ.ಎಲ್ ಸಂಸ್ಥೆಯು ತನ್ನ ಮಾರುಕಟ್ಟೆಯನ್ನು ಜಾಗತಿಕ ಮಟ್ಟಕ್ಕೆ ವಿಸ್ತರಿಸುವ ನಿಟ್ಟಿನಲ್ಲಿ ಮಹತ್ವದ ಹೆಜ್ಜೆ ಇಟ್ಟಿದೆ.

# ರೈತ ಚೇತನ ಪ್ರೊ.ನಂಜುಂಡಸ್ವಾಮಿ ಜನ್ಮದಿನ ಅರ್ಥಪೂರ್ಣ ಆಚರಣೆ : ಹಂಗಳ ದಿಲೀಪ್

• **ಉದಯವಾಹಿನಿ, ಗುಂಡ್ಲುಪೇಟೆ**

ನಾಳೆ ರೈತ ಚೇತನ ಪ್ರೊ.ಎಂ.ಡಿ.ನಂಜುಂಡಸ್ವಾಮಿ 90 ನೇ ಜನ್ಮ ದಿನಾಚರಣೆ ಅಂಗವಾಗಿ ಬೃಹತ್ ಟ್ರ್ಯಾಕ್ಟರ್ ರ್ಯಾಲಿ, ಭಾವಚಿತ್ರ ಮೆರವಣಿ ಮತ್ತು ರಕ್ತಧಾನ ಶಿಬಿರ ಆಯೋಜನೆ ಮಾಡಲಾಗಿದ್ದು ರೈತ ಚೇತನರ ಜನ್ಮದಿನವನ್ನ ಅರ್ಥಪೂರ್ಣವಾಗಿ ಆಚರಣೆ ಮಾಡಲಾಗುವುದು ಎಂದು ಕರ್ನಾಟಕ ರಾಜ್ಯ ರೈತ ಸಂಘ ತಾಲ್ಲೂಕು ಅಧ್ಯಕ್ಷ ಹಂಗಳ ದಿಲೀಪ್ ತಿಳಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಕರ್ನಾಟಕ ರಾಜ್ಯ ರೈತ ಸಂಘದ ಚಾಮರಾಜನಗರ ಜಿಲ್ಲಾ ಸಮಿತಿ ವತಿಯಿಂದ ಗುಂಡ್ಲುಪೇಟೆ, ಚಾಮರಾಜನಗರ, ಕೊಳ್ಳೇಗಾಲ ,ಹನೂರು ತಾಲ್ಲೂಕು ಘಟಕಗಳನ್ನು ಒಳಗೊಂಡಂತೆ ಪ್ರೊ.ಎಂ.ಡಿ.ನಂಜುಂಡಸ್ವಾಮಿ 90ನೇ ಜನ್ಮ ದಿನಾಚರಣೆ ಹಮ್ಮಿಕೊಳ್ಳಲಾಗಿದೆ.

ಅಧಿಕ ಮಂದಿ ರೈತರು ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದರು. ಫೆ.13ರ ಬೆಳಗ್ಗೆ 10 ಗಂಟೆಗೆ ಡಿ.ದೇವರಾಜ ಅರಸು ಕ್ರೀಡಾಂಗಣದ ಹತ್ತಿರ ಪ್ರೊ. ಎಂ.ಡಿ.ನಂಜುಂಡಸ್ವಾಮಿ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡುವ ಮೂಲಕ ಟ್ರ್ಯಾಕ್ಟರ್ ರ್ಯಾಲಿಗೆ ಚಾಲನೆ ದೊರಕಲಿದೆ. ನಂತರ 11:30ಕ್ಕೆ ಪುರಸಭೆ ಆವರಣದಲ್ಲಿರುವ ಮಹಾತ್ಮ ಗಾಂಧಿ ಪ್ರತಿಮೆಗೆ ಮಾಲಾರ್ಪಣೆ, ಮಧ್ಯಾಹ್ನ 2 ಗಂಟೆಗೆ ತಾಲ್ಲೂಕು ಕಚೇರಿ ಮುಂಭಾಗ ರ್ಯಾಲಿ ಮುಕ್ತಾಯಗೊಳಿಸಿ, ಅನ್ನ ವಿನಿಯೋಗ ನಡೆಲಿದೆ. ತದ ನಂತರ ತಾಲ್ಲೂಕಿನ ವಿವಿಧ ಬೇಡಿಕೆ ಈಡೇರಿಕೆ ಆಗ್ರಹಿಸಿ ಸರ್ಕಾರಕ್ಕೆ ಹಕ್ಕೋತ್ತಾಯ ಸಲ್ಲಿಸಲಾಗುವುದು ಎಂದು ತಿಳಿಸಿದರು. ಶ್ರೀಯುತರ ಜನ್ಮ ದಿನಾಚರಣೆ ಪ್ರಯುಕ್ತ ವಿಶೇಷವಾಗಿ ಏರ್ಪಡಿಸಿರುವ ರಕ್ತಧಾನ ಶಿಬಿರಕ್ಕೆ ತಾಲ್ಲೂಕಿನ ಅಧಿಕ ಮಂದಿ ರೈತರು, ಪ್ರಜ್ಞಾವಂತರು ಆಗಮಿಸಿ, ರಕ್ತದಾನ ಮಾಡುವ ಮೂಲಕ ಇತರರಿಗೆ ನೆರವಾಗಬೇಕೆಂದು ಕೋರಿದರು. ಪತ್ರಿಕಾಗೋಷ್ಠಿಯಲ್ಲಿ ರೈತ ಸಂಘದ ಜಿಲ್ಲಾ ಉಪಾಧ್ಯಕ್ಷ ಹಂಗಳ ಮಾಧು, ಜಿಲ್ಲಾ ಕಾಯಂ ಆಹ್ವಾನಿತರಾದ ಶಿವಮಲ್ಲು, ಜಿಲ್ಲಾ ಕಾರ್ಯದರ್ಶಿ ಬೊಮ್ಮನಹಳ್ಳಿ ಲೋಕೇಶ್, ಜಿಲ್ಲಾ ಸಂಘಟನಾ ಕಾರ್ಯದರ್ಶಿ ಕುಮಾರಸ್ವಾಮಿ, ಹಂಗಳ ಲೋಕೇಶ್, ಮಹದೇವಸ್ವಾಮಿ, ಬಸವೇಶ್, ಹಕ್ಕಲಪುರ ಕುಮಾರ್ ಸೇರಿದಂತೆ ಇತರರು ಹಾಜರಿದ್ದರು.


ಉದಯವಾಹಿನಿ ಚಿತ್ರ

**ಬೆಳ್ಳಿ ಸಾರೋಟಿನಲ್ಲಿದ್ದ ನಿಶ್ಚಲಾನಂದನಾಥ ಸ್ವಾಮೀಜಿಯವರು ಕುಳಿತಿದ್ದ ವಾಹನವನ್ನು ಶಾಸಕ ಎಚ್.ಟಿ. ಮಂಜು ಚಲಾಯಿಸಿಕೊಂಡು ಸಮಾರಂಭದ ವೇದಿಕೆಗೆ ಕರೆತಂದರು. ವೈವಿಧ್ಯಮಯ, ಜಾನಪದ ಕಲಾತಂಡಗಳ ಮೆರವಣಿಗೆ ಮತ್ತು ಸುಮಂಗಲಿಯರು ಪೂರ್ಣಕುಂಬದೊಂದಿಗೆ ಸ್ವಾಮೀಜಿಯವರನ್ನು ಸ್ವಾಗತಿಸಲಾಯಿತು. ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಭಾಗವಹಿಸಿದ್ದರು. ಆಗಮಿಸಿದ್ದವರಿಗೆಲ್ಲಾ ಅನ್ನದಾಸೋಹ ವ್ಯವಸ್ಥೆ ಮಾಡಲಾಗಿತ್ತು. ತಾಲ್ಲೂಕಿನ ಪರವಾಗಿ ವಿವಿಧ ಸಂಘ ಸಂಸ್ಥೆಗಳು, ನಾಗರಿಕರು ಸನ್ಮಾನ ಮಾಡಿ ಗೌರವ ಅರ್ಪಿಸಿದರು.**

# ಆದಿಚುಂಚನಗಿರಿ ನಾಡಿನ ಶ್ರೇಷ್ಠ ಮಠ

### ಭವನ ನಿರ್ಮಿಸಲು ಸಂಕಲ್ಪ

**ಕೆ.ಆರ್.ಪೇಟೆ ಪಟ್ಟಣದವರೇ ಆದ ಭೈರವೈಕ್ಯ ಕುಮಾರ ಚಂದ್ರಶೇಖರನಾಥ ಸ್ವಾಮೀಜಿ ನೆನಪಿಗಾಗಿ ಪಟ್ಟಣದ ಒಂದು ಮುಖ್ಯ ರಸ್ತೆಗೆ ಕುಮಾರ ಚಂದ್ರಶೇಖರನಾಥ ಸ್ವಾಮೀಜಿಯವರ ಹೆಸರಿಡಬೇಕು ಮತ್ತು ಪುರಸಭೆಯು ನಿವೇಶನವನ್ನು ನೀಡಿದರೆ ಗುರುಗಳ ಹೆಸರಿನಲ್ಲಿ ಒಂದು ಯೋಗ ಭವನವನ್ನು ನಿರ್ಮಿಸಲು ಸಂಕಲ್ಪ ಮಾಡಿದ್ದೇವೆ. ಈ ಕಾರ್ಯಕ್ಕೆ ಶಾಸಕರು, ಜನಪ್ರತಿನಿಧಿಗಳು ಅಧಿಕಾರಿಗಳು ಸಹಕರಿಸಬೇಕೆಂದು ಮನವಿ ಮಾಡಿದರು.**


ಉದಯವಾಹಿನಿ ಚಿತ್ರ

• **ಉದಯವಾಹಿನಿ, ಕೆ.ಆರ್.ಪೇಟೆ**

ಧರ್ಮದ ಹಾದಿಯಲ್ಲಿ ಸರ್ವಜನಾಂಗದ ಹಿತವನ್ನು ಬಯಸುವ ಆರೋಗ್ಯವಂತ ಸಮಾಜವನ್ನು ನಿರ್ಮಿಸಲು ಹಿರಿಯ ಶ್ರೀಗಳ ಮಾರ್ಗದರ್ಶನದಂತೆ ಸನ್ಯಾಸತ್ವ ಸ್ವೀಕರಿಸಿರುವೆ ಎಂದು ಕೆಂಗೇರಿ ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಪೀಠಾಧಿಪತಿ ನಿಶ್ಚಲಾನಂದನಾಥ ಸ್ವಾಮೀಜಿ ಹೇಳಿದರು.

ಪಟ್ಟಣದ ಟಿಎಪಿಸಿಎಂಎಸ್ ಆವರಣದಲ್ಲಿ ತಾಲ್ಲೂಕಿನ ಸರ್ವ ಸಮಾಜದ ಸದ್ಭಕ್ತರು ಆಯೋಜಿಸಿದ್ದ ಭೈರವೈಕ್ಯ ಗುರುಗಳಾದ ಕುಮಾರ ಚಂದ್ರಶೇಖರನಾಥ ಸ್ವಾಮೀಜಿಗಳ ಸಂಸ್ಮರಣೆ, ತಾಲ್ಲೂಕಿನ ಸಮಸ್ತ ನಾಗರಿಕರಿಂದ ಗುರುವಂದನೆ ಮತ್ತು ಪೌರಸನ್ಮಾನ ಸ್ವೀಕರಿಸಿ ಮಾತನಾಡಿದರು. ಭೈರವೈಕ್ಯ ಗುರುಗಳಾದ ಬಾಲಗಂಗಾಧರನಾಥ ಸ್ವಾಮೀಜಿ ಈ ಮೊದಲೇ ನನಗೆ ಇಟ್ಟಿದ್ದ ನಿಶ್ಚಲಾನಂದನಾಥ ಸ್ವಾಮೀಜಿ ಎಂಬ ಹೆಸರಿನಲ್ಲಿಯೇ ಧೀಕ್ಷೆ ಪಡೆದುಕೊಂಡು ಕಾರ್ಯ ನಿರ್ವಹಿಸುತ್ತಿರುವೆ. ಆದಿಚುಂಚನಗಿರಿ ಮಹಾಸಂಸ್ಥಾನ ಮಠ ಮತ್ತು ವಿಶ್ವ ಒಕ್ಕಲಿಗರ ಮಹಾ ಸಂಸ್ಥಾನ ಮಠಗಳೆರಡು ಕೇವಲ ಒಕ್ಕಲಿಗ ಜನಾಂಗಕ್ಕೆ ಮಾತ್ರ ಸೀಮಿತವಾಗಿರುವ ಮಠಗಳಲ್ಲ. ಈ ಎರಡು ಮಠಗಳು ವಿಶ್ವಮಾನವ ಪ್ರಜ್ಞೆ ಹೊಂದಿರುವ ನಾಡಿನ ಶ್ರೇಷ್ಠ ಮಠಗಳಾಗಿವೆ. ನಾನು ಸನ್ಯಾಸತ್ವ ದೀಕ್ಷೆ ಸ್ವೀಕರಿಸುವ ಮುನ್ನ ಆದಿಚುಂಚನಗಿರಿ ಮಹಾ ಸಂಸ್ಥಾನ ಮಠದ ಪೀಠಾಧಿಪತಿ ನಿರ್ಮಲಾನಂದನಾಥ ಮಹಾ ಸ್ವಾಮೀಜಿ ಅವರನ್ನು ಭೇಟಿ ಮಾಡಿ ನನ್ನ ಸನ್ಯಾಸತ್ವ ದೀಕ್ಷಾ ಕಾರ್ಯಕ್ರಮಕ್ಕೆ ಬರಬೇಕೆಂದು ಆಹ್ವಾನಿಸಿದೆ. ಕಾರ್ಯಕ್ರಮಕ್ಕೆ ಬರಲು ಸಮ್ಮತಿಸಿದ ನಿರ್ಮಲಾನಂದನಾಥರು ನಮ್ಮ ನಮ್ಮ ನಡುವೆ ಪೈಪೋಟಿ ನಡೆಸುವುದು ಬೇಡ. ಪ್ರೀತಿ ವಿಶ್ವಾಸದಿಂದ ಸಮಾಜವನ್ನು ಕಟ್ಟೋಣ ಎಂದು ಸೂಚಿಸಿದರು.

### ಮಠವು ಚೈತನ್ಯ ಶೀಲ

**ಮಂಡ್ಯದ ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಬಿ. ಜಯಪ್ರಕಾಶ್ ಗೌಡ ಸಮಾರಂಭ ಉದ್ಘಾಟಿಸಿ , ವಿಶ್ವ ಒಕ್ಕಲಿಗರ ಮಹಾ ಸಂಸ್ಥಾನ ಮಠವು ಚೈತನ್ಯ ಶೀಲವಾಗಿದೆ. ಶ್ರಮಿಕ ವರ್ಗದ ಮಠವಾಗಿದ್ದು, ಪರಂಪರೆಯ ಸಾಂಪ್ರದಾಯಗಳನ್ನು ನಾಡಿಗೆ ಸಂದೇಶವಾಗಿ ನೀಡುತ್ತಿದೆ. ನಿಶ್ಚಲಾನಂದನಾಥರು ಪೂರ್ವಾಶ್ರಮದಲ್ಲಿ ತಹಶೀಲ್ದಾರರಾಗಿ, ಉಪ ವಿಭಾಗಾಧಿಕಾರಿಯಾಗಿ, ಹೆಚ್ಚುವರಿ ಜಿಲ್ಲಾಧಿಕಾರಿಯಾಗಿ ದಕ್ಷತೆಯಿಂದ ಕೆಲಸ ಮಾಡಿದ್ದು, ಅದೇ ಕರ್ತವ್ಯ ನಿಷ್ಠೆಯನ್ನು ಮಠದ ಪೀಠಾಧಿಪತಿಯಾದ ನಂತರವೂ ಮುಂದುವರಿಸಿದ್ದು, ಅವರಿಗೆ ಎಲ್ಲಾ ರೀತಿಯ ಬೆಂಬಲವನ್ನು ಜಿಲ್ಲೆಯ ಸಮಸ್ತ ನಾಗರಿಕರು ಕೊಡಬೇಕೆಂದು ಮನವಿ ಮಾಡಿದರು.**

## ಮಕ್ಕಳಿಗೆ ಜಂತುಹುಳು ನಿವಾರಣೆ ಮಾತ್ರೆ ವಿತರಣೆ


ಉದಯವಾಹಿನಿ ಚಿತ್ರ

• **ಉದಯವಾಹಿನಿ, ಚಿಂತಾಮಣಿ**

ತಾಲ್ಲೂಕಿನಲ್ಲಿ 76,388 ಮಕ್ಕಳಿಗೆ ಜಂತುಹುಳು ನಿವಾರಣಾ ಮಾತ್ರೆ ವಿತರಿಸುವ ಗುರಿ ಇದೆ ಎಂದು ಜಿಲ್ಲಾ ಆರ್‌ಸಿಎಚ್ ಅಧಿಕಾರಿ ಡಾ. ಸಂತೋಷಬಾಬು ತಿಳಿಸಿದರು.

ಪ್ರತಿ ವರ್ಷ ಫೆಬ್ರುವರಿ ಮತ್ತು ಸೆಪ್ಟೆಂಬರ್ ತಿಂಗಳಿನಲ್ಲಿ ಒಂದು ವರ್ಷದಿಂದ 19 ವರ್ಷದವರೆಗಿನವರಿಗೆ ಜಂತುಹುಳ ನಿವಾರಣಾ ಮಾತ್ರೆ (ಆಲೊಂಡೊಜೊಲ್ ಮಾತ್ರೆ) ವಿತರಿಸಲಾಗುವುದು. ಎರಡು ಬಾರಿ ಮಕ್ಕಳಿಗೆ ಮಾತ್ರೆ ನುಂಗಿಸಿ ಮಕ್ಕಳಲ್ಲಿ ರಕ್ತಹೀನತೆ ಮತ್ತು ಇದರಿಂದ ಆಗುವ ದುಷ್ಪರಿಣಾಮಗಳನ್ನು ತಡೆಗಟ್ಟುವ ಗುರಿ ಇದೆ ಎಂದು ಜಿಲ್ಲಾ ಆರ್‌ಸಿಎಚ್‌ಒ ಅಧಿಕಾರಿ ತಿಳಿಸಿದರು.

ತಾಲ್ಲೂಕು ಆರೋಗ್ಯಾಧಿಕಾರಿ ಡಾ.ಎಂ.ಎಸ್. ರಾಮಚಂದ್ರಾರೆಡ್ಡಿ ಮಾತನಾಡಿ, ತಾಲ್ಲೂಕಿನಲ್ಲಿ 76,388 ಮಕ್ಕಳಿಗೆ ಜಂತುಹುಳ ನಿವಾರಣೆ ಮಾತ್ರೆ ವಿತರಿಸಲಾಗುತ್ತದೆ. ಬಹಿರ್ದೆಸೆ ಮಾಡುವಾಗ, ಬರೀ ಕಾಲಲ್ಲಿ ನಡೆಯುವುದು, ಸರಿಯಾಗಿ ಕೈ ತೊಳೆಯದ ಸಂದರ್ಭಗಳಲ್ಲಿ ಜಂತುಹುಳ ಮಕ್ಕಳ ಹೊಟ್ಟೆ ಸೇರಿ ಬೆಳವಣಿಗೆ ಕುಂಠಿತಗೊಳ್ಳುವಂತೆ ಮಾಡುತ್ತದೆ. ರಕ್ತಹೀನತೆ ಉಂಟುಮಾಡುತ್ತವೆ ಎಂದು ತಿಳಿಸಿದರು.

ಮಕ್ಕಳು ಚಪ್ಪಲಿ ಹಾಕಿಕೊಂಡು ನಡೆಯುವುದು ಹಾಗೂ ಸ್ವಚ್ಛವಾಗಿ ಕೈ ತೊಳೆಯುವ ಮುಖಾಂತರ ಜಂತುಹುಳ ತಡೆಗಟ್ಟಬಹುದು. ಶಾಲೆ,ಕಾಲೇಜುಗಳಲ್ಲಿ ನೋಡಲ್ ಶಿಕ್ಷಕರು, ಪ್ರಾಧ್ಯಾಪಕರು ಮಕ್ಕಳಿಗೆ ಜಂತುಹುಳ ನಿವಾರಣೆ ಮಾತ್ರೆ ನೀಡುತ್ತಾರೆ. ಗ್ರಾಮಗಳಲ್ಲಿನ ಮಕ್ಕಳಿಗೆ ಆಶಾ ಕಾರ್ಯಕರ್ತೆಯರು, ಅಂಗನವಾಡಿ ಕಾರ್ಯಕರ್ತೆಯರು ಜಂತುಹುಳ ನಿವಾರಣೆ ಮಾತ್ರೆ ನೀಡುತ್ತಾರೆ ಎಂದು ಹೇಳಿದರು. ಡಾಕ್ಟರ್ ಬಸವ ಮಂಜೇಶ್ ನಗರ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ಬಸವಮಂಜೇಶ್ ಮಕ್ಕಳ ವೈಯಕ್ತಿಕ ಸ್ವಚ್ಛತೆ ಬಗ್ಗೆ , ಸೇವಿಸುವ ಪೌಷ್ಟಿಕ ಆಹಾರದ ಕುರಿತು ಮಾಹಿತಿ ನೀಡಿದರು. ಶಾಲೆ ಮುಖ್ಯೋಪಾಧ್ಯಾಯ ದೇವರಾಜು, ತಾಲ್ಲೂಕು ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಶ್ರೀನಿವಾಸ್ ರೆಡ್ಡಿ ಮಾತನಾಡಿದರು.

# ಕೆವೈಸಿ ಮರು ಜೋಡಣೆ ಮಾಡುವುದು ಎಲ್ಲರ ಜವಾಬ್ದಾರಿ

• **ಉದಯವಾಹಿನಿ, ರಾಮನಗರ**

ಬ್ಯಾಂಕಿನ ಗ್ರಾಹಕರು ತಮ್ಮ ಖಾತೆಗಳಿಗೆ ಕೆವೈಸಿ ಮರು ಜೋಡಣೆ ಮಾಡಬೇಕು ಹಾಗೂ 14 ಅಂಕಿಯ ಸಿಕೆವೈಸಿ ಐಡಿಯನ್ನು ಬ್ಯಾಂಕುಗಳ ಮೂಲಕ ಪಡೆದುಕೊಳ್ಳಬೇಕು ಜೊತೆಗೆ ಇತ್ತೀಚೆಗೆ ನಡೆಯುತ್ತಿರುವ ಡಿಜಿಟಲ್ ವಂಚನೆಗಳಿಂದ ಹೆಚ್ಚು ಜಾಗರೂಕರಾಗಿರಬೇಕೆಂದು ಭಾರತೀಯ ರಿಸರ್ವ್ ಬ್ಯಾಂಕ್‌ನ ಸಹಾಯಕ ಮಹಾ ಪ್ರಬಂಧಕರಾದ ಬಬುಲ್ ಬೋರ್ಡೋಲೈ ಅವರು ತಿಳಿಸಿದರು.

ಅವರು ಬುಧವಾರ ಚನ್ನಪಟ್ಟಣ ತಾಲ್ಲೂಕಿನ ನೆಲಮಾಕನಹಳ್ಳಿ ಗ್ರಾಮದಲ್ಲಿ ಬೆಂಗಳೂರಿನ ಭಾರತೀಯ ರಿಸರ್ವ್ ಬ್ಯಾಂಕ್ ಮತ್ತು ಬೆಂಗಳೂರು ದಕ್ಷಿಣ ಜಿಲ್ಲಾ ಮಾರ್ಗದರ್ಶಿ ಬ್ಯಾಂಕ್‌ನ ಸಹಯೋಗದಲ್ಲಿ ಆಯೋಜಿಸಲಾಗಿದ್ದ ಹಣಕಾಸು ಸಾಕ್ಷರತಾ ಸಪ್ತಾಹ 2026ರ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಭಾರತೀಯ ರಿಸರ್ವ್ ಬ್ಯಾಂಕ್ ಪ್ರತಿ ವರ್ಷವು ಫೆಬ್ರವರಿ ತಿಂಗಳ ಎರಡನೇ ವಾರವನ್ನು ಹಣಕಾಸು ಸಾಕ್ಷರತಾ ಸಪ್ತಾಹ ಎಂದು ಆಚರಿಸುತ್ತಾ ಬಂದಿದೆ. ಪ್ರತಿ ವರ್ಷವೂ ಒಂದೊಂದು ಧ್ಯೇಯ ವಾಕ್ಯದಡಿಯಲ್ಲಿ ಈ ಸಪ್ತಾಹ ಕಾರ್ಯಕ್ರಮವನ್ನು ಆಚರಿಸುತ್ತಾ ಬಂದಿದೆ



ಉದಯವಾಹಿನಿ ಚಿತ್ರ

2026 ರಲ್ಲಿ ಕೆವೈಸಿ ಸುರಕ್ಷಿತ ಬ್ಯಾಂಕಿಂಗ್‌ಗೆ ನಿಮ್ಮ ಮೊದಲ ಹೆಜ್ಜೆ ಎಂಬ ಧ್ಯೇಯ ವಾಕ್ಯದಡಿಯಲ್ಲಿ ಈ ವರ್ಷ ಹಣಕಾಸು ಸಾಕ್ಷರತಾ ಸಪ್ತಾಹವನ್ನು ಆಚರಿಸಲಾಗುತ್ತಿದೆ ಎಂದರು.

ಜಿಲ್ಲಾ ಮಾರ್ಗದರ್ಶಿ ಬ್ಯಾಂಕ್‌ನ ಜಿಲ್ಲಾ ವ್ಯವಸ್ಥಾಪಕ ಮೋಹನ್ ಕುಮಾರ್ ವೈ.ಎನ್. ಅವರು ಮಾತನಾಡಿ ಪ್ರತಿಯೊಬ್ಬ ಬ್ಯಾಂಕಿನ ಗ್ರಾಹಕರು ನಿಮ್ಮ ನಿಮ್ಮ ಖಾತೆಗಳಿಗೆ ಕೆವೈಸಿ ಮರುಜೋಡಣೆ ಮಾಡಿಕೊಳ್ಳುವುದರ ಜೊತೆಗೆ ನಿಮ್ಮ ಖಾತೆಯು ಸಹ ಸದಾ ಚಾಲ್ತಿಯಲ್ಲಿರುವಂತೆ ನೋಡಿಕೊಳ್ಳಬೇಕು ಅನಾಮಿಕ ಕರೆಗಳು ಬಂದಲ್ಲಿ ಆ ಕರೆಗಳಿಗೆ ನಿಮ್ಮ ಬ್ಯಾಂಕಿನ ಯಾವುದೇ ವಿವರಗಳನ್ನು ನೀಡಬಾರದೆಂದು ಜನರಿಗೆ ಅರಿವು ಮೂಡಿಸಿದರು.

ಇತ್ತೀಚಿನ ದಿನಗಳಲ್ಲಿ ನಡೆಯುತ್ತಿರುವ ಡಿಜಿಟಲ್ ವಂಚನೆಗಳು ಹೆಚ್ಚಾಗಿದ್ದು ಜನರು ಜಾಗೃತರಾಗಿರಬೇಕು, ಬ್ಯಾಂಕಿನಲ್ಲಿ ಸಿಗುವಂತಹ ಸೌಲಭ್ಯಗಳು ಸಮಾಜದ ಕಟ್ಟ ಕಡೆಯ ವ್ಯಕ್ತಿಗೂ ತಲುಪುವಂತಾಗಬೇಕೆಂದು ತಿಳಿಸಿದರು.

ಸಂಜೀವಿನಿ ಗ್ರಾಮ ಪಂಚಾಯಿತಿ ಒಕ್ಕೂಟದ ಅಧ್ಯಕ್ಷರಾದ ಜಯಮ್ಮ, ತಾಲೂಕು ಪಂಚಾಯತ್‌ನ ಆನಂದ್, ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾದ ಉಮೇಶ್, ಎಫ್‌ಎಲ್‌ಸಿಗಳಾದ ರೂಪಲಕ್ಷ್ಮೀ, ಸುಮಲತಾ, ಸಿಎಫ್‌ಎಲ್ ಮುನಿ ರಾಮಕ್ಕ ಹಾಗೂ ಸಂಜೀವಿನಿ ಒಕ್ಕೂಟದ ಸ್ವಸಹಾಯ ಸಂಘದ ಮಹಿಳೆಯರು ಹಾಗೂ ರೈತರು ಭಾಗವಹಿಸಿದ್ದರು.

## ರಸ್ತೆ ಕಾಮಗಾರಿ ವಿಳಂಬ: ಗ್ರಾಮಸ್ಥರು ಪ್ರತಿಭಟನೆ

• **ಉದಯವಾಹಿನಿ, ಕೋಲಾರ**

ತಾಲ್ಲೂಕಿನ ನರಸಾಪುರ ಗ್ರಾಮದಲ್ಲಿನ ಬೆಂಗಳೂರು–ಕೋಲಾರ ಮುಖ್ಯ ರಸ್ತೆಯ ಕಾಮಗಾರಿ ಪ್ರಾರಂಭವಾಗಿ ಹಲವು ತಿಂಗಳು ಕಳೆದರೂ ಮುಗಿಸಿಲ್ಲ ಆಕ್ರೋಶ ವ್ಯಕ್ತಪಡಿಸಿ ಗ್ರಾಮಸ್ಥರು ಪ್ರತಿಭಟನೆ ನಡೆಸಿದರು. ಕಾಮಗಾರಿ ಪ್ರಾರಂಭಿಸಿ 8 ತಿಂಗಳಾಗಿದ್ದರೂ ಈವರೆಗೆ ಗುತ್ತಿಗೆದಾರರು ಕಾಮಗಾರಿಯನ್ನು ಪೂರ್ಣಗೊಳಿಸಿಲ್ಲ. ಹಲವಾರು ಬಾರಿ ಒತ್ತಾಯ ಮಾಡಿದರೂ ಕಾಲಹರಣ ಮಾಡುತ್ತಾ ಜನರಿಗೆ ದೂಳಿನ ಭಾಗ್ಯ ನೀಡಿದ್ದಾರೆ ಎಂದು ಆರೋಪಿಸಿದರು.

ನರಸಾಪುರ ಕೈಗಾರಿಕಾ ಪ್ರದೇಶ ಪಕ್ಕದಲ್ಲೇ ಇದ್ದು, ಜನಸಂಖ್ಯೆ ಹೆಚ್ಚಾಗಿದೆ. ಕೈಗಾರಿಕಾ ಪ್ರದೇಶಕ್ಕೆ ಓಡಾಡುವ ಭಾರಿ ವಾಹನಗಳು ಹಾಗೂ ಇತರೆ ಎಲ್ಲಾ ರೀತಿಯ ಸಾವಿರಾರು ವಾಹನಗಳು ಇದೇ ರಸ್ತೆಯ ಮೂಲಕ ನಿತ್ಯ ಸಂಚರಿಸುತ್ತವೆ. ರಸ್ತೆಯ ಮೇಲಿರುವ ದೂಳು ಚಿಮಣಿಯಿಂದ ಬರುವ ಹೊಗೆಯ ರೀತಿಯಲ್ಲಿ ಬರುತ್ತದೆ. ಇದರಿಂದ ರಸ್ತೆಯ ಪಕ್ಕದಲ್ಲಿನ ಅಂಗಡಿಗಳ ವ್ಯಾಪಾರಿಗಳಿಗೆ ತೊಂದರೆಯಾಗಿದೆ. ಗುತ್ತಿಗೆದಾರನು ಅನೇಕ ಕಾರಣ ನೀಡಿ ವಿಳಂಬ ಮಾಡುತ್ತಿದ್ದಾರೆ. ದೂಳು ಮೇಲೇಳದಂತೆ ರಸ್ತೆಗೆ ಸರಿಯಾಗಿ ನೀರು ಹಾಕುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ದೂಳು ಮುಕ್ತ ನರಸಾಪುರ ಗ್ರಾಮ ಮಾಡಲು ರಸ್ತೆಗೆ ಕೂಡಲೇ ಡಾಂಬರ್ ಹಾಕಬೇಕೆಂದು ಒತ್ತಾಯಿಸಿದರು.

ಈ ಸಂಬಂಧ ಹಲವು ಬಾರಿ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಗುತ್ತಿಗೆದಾರರ ಬಳಿ ಹೋಗಿ ಮನವಿ ಮಾಡಿದ್ದು, ಏನೂ ಪ್ರಯೋಜನವಾಗಿಲ್ಲ. ಇದೇ ರಸ್ತೆಯಲ್ಲಿ ಸರ್ಕಾರಿ ಶಾಲೆಗೆ ವಿದ್ಯಾರ್ಥಿಗಳು ಹೋಗಬೇಕಾಗಿದ್ದು, ದೂಳಿನಿಂದ ಆರೋಗ್ಯ ಹದಗೆಡುತ್ತಿದೆ. ತಮ್ಮ ಮಕ್ಕಳನ್ನು ಪೋಷಕರು ಶಾಲೆಗೆ ಕಳುಹಿಸಲು ಆತಂಕ ವ್ಯಕ್ತಪಡಿಸುತ್ತಿದ್ದಾರೆ. ಆದಷ್ಟು ಬೇಗನೇ ಕಾಮಗಾರಿಯನ್ನು ಪೂರ್ಣಗೊಳಿಸಿ ಎಂದು ಆಗ್ರಹಿಸಿದರು.

ಗುತ್ತಿಗೆದಾರ ಚಂಬೆ ನಾರಾಯಣಸ್ವಾಮಿ ಪ್ರತಿಭಟನೆ ಸ್ಥಳಕ್ಕೆ ಬಂದು ಮಾತನಾಡಿ, ಕೆಲವೊಂದು ತಾಂತ್ರಿಕ ಕಾರಣಗಳಿಂದ ವಿಳಂಬವಾಗಿದೆ ಎಂದರು.

# ಜೀತಪದ್ದತಿ ಮುಕ್ತ ಸಮಾಜಕ್ಕೆ ಪ್ರತಿಯೊಬ್ಬರೂ ಕೈ ಜೋಡಿಸಿ: ನ್ಯಾ. ಪಿ.ಆರ್. ಸವಿತಾ ಮನವಿ

• **ಉದಯವಾಹಿನಿ ,ರಾಮನಗರ**

ಅನಿಷ್ಟ ಪದ್ದತಿಗಳಲ್ಲಿ ಒಂದಾದ ಜೀತ ಪದ್ಧತಿಯ ನಿರ್ಮೂಲನೆಗೆ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಸೇರಿದಂತೆ ಎಲ್ಲರೂ ಸಾರ್ವಜನಿಕರೊಂದಿಗೆ ನಿರಂತರ ಸಂಪರ್ಕವಿಟ್ಟುಕೊಂಡು ಸಮರ್ಥವಾಗಿ, ಸೇವಾ ಮನೋಭಾವದೊಂದಿಗೆ ಕಾರ್ಯನಿರ್ವಹಿಸಿ ಗ್ರಾಮ ಮಟ್ಟದಲ್ಲಿಯೇ ತಡೆಯುವ ಮೂಲಕ ಉತ್ತಮ ಸಮಾಜ ನಿರ್ಮಿಸಬೇಕು ಎಂದು ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಸವಿತಾ ಪಿ.ಆರ್ ಅವರು ತಿಳಿಸಿದರು.

ಬುಧವಾರ ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಸಹಯೋಗದೊಂದಿಗೆ ಜೀತ


ಉದಯವಾಹಿನಿ ಚಿತ್ರ

ಪದ್ಧತಿ ನಿರ್ಮೂಲನಾ ದಿನಾಚರಣೆ ಮತ್ತು ಜೀತಪದ್ಧತಿ ನಿಷೇದಾಧಿಕಾರಿಗಳಿಗೆ ಆಯೋಜಿಸಲಾಗಿದ್ದ ಅರಿವು ಮೂಡಿಸುವ ಕಾರ್ಯಕ್ರಮದಲ್ಲಿ ಮಾತನಾಡಿದರು. ಗ್ರಾಮ ಮಟ್ಟದ ಅಧಿಕಾರಿಗಳು ಜವಾಬ್ದಾರಿಯುತವಾಗಿ ಹಾಗೂ ಸಂಪೂರ್ಣವಾಗಿ ತಮ್ಮನ್ನು ತೊಡಗಿಸಿಕೊಂಡು ಇಟ್ಟಿಗೆ ಭಟ್ಟಿ ಕೇಂದ್ರಗಳು, ಕೋಳಿ ಸಾಕಾಣಿಕಾ ಕೇಂದ್ರಗಳು, ರೇಷ್ಮೆ ನೂಲು ಬಿಚ್ಚುವ ಕೇಂದ್ರಗಳು, ಹೋಟೆಲಗಳು, ತೋಟದ ಮನೆಗಳು ಮತ್ತು ಗಣಿಗಾರಿಕೆ ನಡೆಯುವ ಪ್ರದೇಶಗಳು, ಕಲ್ಲು ಕ್ವಾರಿಗಳಲ್ಲಿ ಕೆಲಸ ಮಾಡುವವರನ್ನು ಸೂಕ್ಷ್ಮವಾಗಿ ಗಮನಿಸಬೇಕು, ಮಾಹಿತಿ ಕಲೆಹಾಕಬೇಕು. ಅಲ್ಲೇನಾದರೂ ಜೀತ ಪದ್ಧತಿ ಆಚರಣೆಗಳು ಕಂಡು ಬಂದಲ್ಲಿ ಕಾನೂನಿನ ಮೂಲಕ ನಿರ್ದಾಕ್ಷಿಣ್ಯ ಕ್ರಮ ಕೈಗೊಂಡು ಜೀತ ಪದ್ಧತಿಯನ್ನು ಕೊನೆಗೊಳಿಸಬೇಕು ಎಂದರು. ಮನುಷ್ಯನನ್ನು ವಸ್ತುವಂತೆ ಕಂಡು, ಮಾರಾಟ ಮಾಡುವ, ಕೊಳ್ಳುವುದೇ ಜೀತಪದ್ಧತಿಯಾಗಿದೆ. ಮಾನವನು ಗೌರವವಿಲ್ಲದೆ, ಘನತೆಯಿಲ್ಲದೇ ಬದುಕುವುದಾದೆ.

ಸಂವಿಧಾನದ 21ನೇ ವಿಧಿ ಜೀವಿಸುವ ಮತ್ತು ಸ್ವಾತಂತ್ರ್ಯದ ಹಕ್ಕು ,23ನೇ ವಿಧಿಯು ಶೋಷಣೆಯ ವಿರುದ್ಧದ ಹಕ್ಕಿನ ಮೂಲಕ ದೇಶದ ಜನರಿಗೆ ಗೌರವಯುತ ಬದುಕನ್ನು ಕಲ್ಪಿಸಿದೆ. ಜೀತ ಕಾರ್ಮಿಕ ಪದ್ಧತಿ (ರದ್ಧತಿ) ಕಾಯ್ದೆ 1976 ಸೇರಿದಂತೆ ವಿವಿಧ ಕಾನೂನುಗಳನ್ನು ಜಾರಿಗೊಳಿಸಿದೆ. ಜೀವನದ ಉನ್ನತಿಗೆ ಹಾಗೂ ತೊಂದರೆಗಳಿಂದ ತಪ್ಪಿಸಿಕೊಳ್ಳಲು ಪ್ರತಿಯೊಬ್ಬರೂ ಕಾನೂನಗಳನ್ನು ತಿಳಿದುಕೊಳ್ಳಬೇಕು. ಜೀತ ಪದ್ದತಿಗೊಳಗಾದವರನ್ನು ಜೀತದಿಂದ ಮುಕ್ತಗೊಳಿಸಿ, ಪರಿಹಾರ ಹಾಗೂ ಪುನರ್ವಸತಿ ಕಲ್ಪಿಸಬೇಕು. ಸರ್ಕಾರಿ ಸೌಲಭ್ಯಗಳ ಪ್ರಯೋಜನ ಒದಗಿಸಬೇಕು. ಕಾನೂನು ಸೇವಾ ಪ್ರಾಧಿಕಾರದಿಂದ ಉಚಿತ ಕಾನೂನು ನೆರವು ನೀಡಲಾಗುವುದು ಎಂದು ಮಾಹಿತಿ ನೀಡಿದರು.

ಉಪ ವಿಭಾಗಾಧಿಕಾರಿ ಬಿನೋಯ್ ಅವರು ಜೀತ ಕಾರ್ಮಿಕ ಪದ್ಧತಿ ನಿರ್ಮೂಲನಾ ಹೋರಾಟಗಳ ಇತಿಹಾಸ, ಕಾಯ್ದೆ ಅನುಷ್ಠಾನ ಕುರಿತಂತೆ ಹಾಗೂ ಜಿಲ್ಲಾ ಕಾರ್ಮಿಕ ಅಧಿಕಾರಿ ನಾಗೇಂದ್ರ ಅವರು ಜೀತ ಪದ್ಧತಿ ನಿರ್ಮೂಲನಾ ಕಾರ್ಯಾಚರಣೆ, ಕಾಯ್ದೆಗಳಡಿ ಜೀತ ವಿಮುಕ್ತರ ಪುನರ್ವಸತಿ, ಸರ್ಕಾರಿ ಸೌಲಭ್ಯಗಳ ಕುರಿತು ಉಪನ್ಯಾಸ ನೀಡಿದರು.

ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಧನರಾಜ್, ಯೋಜನಾ ನಿರ್ದೇಶಕ ಶಿವಕುಮಾರ್ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

# ಬಿಗ್ ಕ್ಯಾಟ್ ಶೃಂಗಸಭೆ ವಿರುದ್ಧ ರೈತರ ಧರಣಿ

### ವಶಕ್ಕೆ ಪಡೆದ ಪೊಲೀಸರು

### ಸಂಪತ್ತನ್ನ ಪಾಶ್ಚಾತ್ಯರಿಗೆ ಮಾರಾಟ

### ಕೇಂದ್ರ ವಿರುದ್ಧ ದಿಕ್ಕಾರ

• **ಉದಯವಾಹಿನಿ, ಗುಂಡ್ಲುಪೇಟೆ**

ಕೇಂದ್ರ ಸರ್ಕಾರ ಬಿಗ್ ಕ್ಯಾಟ್ ಶೃಂಗಸಭೆ ಹೆಸರಿನಡಿ ವನ್ಯಸಂಪತ್ತನ್ನ ಪಾಶ್ಚಾತ್ಯರಿಗೆ ಮಾರಾಟ ಮಾಡಲು ಸಿದ್ಧತೆ ನಡೆಸುತ್ತಿದೆ ಎಂದು ಆರೋಪಿಸಿದ ಸಾಮೂಹಿಕ ನಾಯಕತ್ವ ರೈತ ಸಂಘದ ಸದಸ್ಯರು ಮುಖಂಡ ಹೊನ್ನೂರು ಪ್ರಕಾಶ್ ಹಾಗೂ ಮಂಜು ಕಿರಣ್ ನೇತೃತ್ವದಲ್ಲಿ ಐಬಿ ವೃತ್ತದಲ್ಲಿ ಪ್ರತಿಭಟನೆ ನಡೆಸಲು ಮುಂದಾದ ವೇಳೆ ಬಂಧಿಸಿ ಕರೆದೊಯ್ದ ಘಟನೆ ಬುಧವಾರ ನಡೆಯಿತು.

ಪ್ರಕೃತಿದತ್ತವಾಗಿ ವಿಸ್ತಾರವಾಗಿರುವ ಅರಣ್ಯ ಸಂಪತ್ತು ಹಾಗೂ ಜೀವಿಗಳ ಕುರಿತು ಇದ್ದಕ್ಕಿದ್ದಾಗೆ ಕೇಂದ್ರ ಸರ್ಕಾರಕ್ಕೆ ಕಾಳಜಿ ಜವಾಬ್ದಾರಿ ಬಂದಿದೆ ಇದರ ಹಿಂದಿನ ಮರ್ಮವನ್ನ ಅರಿಯಲಾರದಷ್ಟು ದಡ್ಡರೂ ನಾವಲ್ಲ ಎಂದು ಮುಖಂಡ


ಉದಯವಾಹಿನಿ ಚಿತ್ರ

ಮಂಜು ಕಿರಣ್ ಕಿಡಿಕಾರಿದರು. ಶತಾಯಗತಾಯ ಶೃಂಗಸಭೆ ಆಯೋಜನೆ ಸ್ಥಳಕ್ಕೆ ರೈತರು ತೆರಳದಂತೆ ಅಂಕುಶ ಹಾಕುವ ನಿಟ್ಟಿನಲ್ಲಿ ಪೊಲೀಸ್ ಸರ್ಪಗಾವಲು ವ್ಯವಸ್ಥೆ ಮಾಡಿದ್ದ ಡಿವೈಎಸ್ಪಿ ಸ್ನೇಹಾ ರಾಜ್ ಅವರ ಬಳಿ ರೈತ ಮುಖಂಡರು ಕೆಲ ಮನವಿಯಿತ್ತರು.

23 ದೇಶಗಳ ಪ್ರತಿನಿಧಿಗಳ ಪೈಕಿ ಪ್ರಮುಖರಿಬ್ಬರನ್ನ ಭೇಟಿಯಾಗಲು ಅವಕಾಶ ಕಲ್ಪಿಸಿಕೊಡಬೇಕೆಂದು ವಿನಂತಿಸಿದರು.

ಕಾರ್ಯಗಾರವು ಕೇಂದ್ರ ಸರ್ಕಾರದ ಆದೇಶದಂತೆ ನಡೆಯುತ್ತಿರುವುದರಿಂದ ಅನುಮತಿ ನಿರಾಕರಿಸಿದರು. ಪೊಲೀಸರ ನಡೆಗೆ ಬೇಸತ್ತ ಪ್ರತಿಭಟನಾನಿರತರು ಅರಣ್ಯ ಇಲಾಖೆ ಅಧಿಕಾರಿಗಳು ಹಾಗೂ ಕೇಂದ್ರ ಸರ್ಕಾರದ ವಿರುದ್ಧ ದಿಕ್ಕಾರದ ಘೋಷಣೆಗಳನ್ನ ಕೂಗುತ್ತ ಶೃಂಗಸಭೆ ಸ್ಥಳಕ್ಕೆ ತೆರಳಲು ಮುಂದಾದ ವೇಳೆ ವಶಕ್ಕೆ ಪಡೆದ ಪೊಲೀಸರು ತೆರಕಣಾಂಬಿ ಪೊಲೀಸ್ ಠಾಣೆಗೆ ಕರೆದೊಯ್ದು ಸುಮಾರು ನಾಲ್ಕು ಗಂಟೆಗಳ ಬಳಿಕ ಬಿಡುಗಡೆಗೊಳಿಸಿದರು.

**ಬಂಡೀಪುರವು ಅದರದೇ ಆದ ವೈಶಿಷ್ಟ್ಯತೆಯನ್ನ ಹೊಂದಿದೆ ನಮ್ಮ ಅರಣ್ಯ ಹಾಗೂ ವನ್ಯಜೀವಿಗಳ ಸಂರಕ್ಷಣೆಯಲ್ಲಿ ಸ್ಥಳೀಯರ ಪಾತ್ರ ಹೆಚ್ಚಿದೆ, ಕೇಂದ್ರ ಸರ್ಕಾರದ ಅಜ್ಞಾನದ ನಡೆಯಂತೆ ಯಾವುದೇ ಒಂದು ವಿದೇಶದಿಂದ ನಮ್ಮ ಸಂಪತ್ತು ರಕ್ಷಣೆಯಾಗಿಲ್ಲ, ಪ್ರಸ್ತುತವಾಗಿ ಅರಣ್ಯದಲ್ಲಿ ಸಮತೋಲನ ಕಾಪಾಡದೆ ಅಸಂಬದ್ಧ ಹೆಸರಿನಡಿ ಪ್ರಾಕೃತಿಕ ಸಂಪತ್ತನ್ನ ಮಾರಾಟ ಮಾಡಲು ಮುಂದಾಗಿರುವುದು ಅಕ್ಷಮ್ಯ, ಕೇಂದ್ರ ಸರ್ಕಾರದ ನೀತಿ ವನ್ಯಸಂಪತ್ತಿನ ಮೇಲಿನ ನಿಷ್ಕಾಳಜಿಯನ್ನ ತೋರಿಸುತ್ತಿದೆ.**

## ಮಿನಿ ನ್ಯೂಸ್

### ಆರ್‌ಡಿಪಿಆರ್ ಕ್ರೀಡಾಕೂಟ ಇಂದಿನಿಂದ

• **ಉದಯವಾಹಿನಿ ,ಮೈಸೂರು**

ಜಿಲ್ಲಾ ಆರ್‌ಡಿಪಿಆರ್ ಕ್ರೀಡಾಕೂಟ ಮತ್ತು ಸಾಂಸ್ಕೃತಿಕ ಕಾರ್ಯಕ್ರಮವನ್ನು ಫೆ. 12 ಮತ್ತು 13ರಂದು ಬೆಳಿಗ್ಗೆ 9ಕ್ಕೆ ನಜರ್‌ಬಾದ್‌ನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಪಂ. ಸಿಇಒ ಎಸ್.ಯುಕೇಶ್‌ಕುಮಾರ್ ತಿಳಿಸಿದರು. ಜಿಲ್ಲಾ ಪಂಚಾಯಿತಿಯಲ್ಲಿ ಕ್ರೀಡಾಕೂಟದ ಲಾಂಛನ ಪ್ರಚಾರ ಸಾಮಗ್ರಿ ಬಿಡುಗಡೆ ಮಾಡಿ ಅವರು ಮಾತನಾಡಿದರು.

ಜಿಲ್ಲಾ ಪಂಚಾಯಿತಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಜಿಲ್ಲಾ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಧಿಕಾರಿಗಳು ಮತ್ತು ನೌಕರರ ವೃಂದ ಸಂಘಗಳ ಸಹಯೋಗದಲ್ಲಿ ಆಯೋಜಿಸಲಾಗಿದೆ ಎಂದರು.

100 ಮೀಟರ್ ಮತ್ತು 400 ಮೀ. ಓಟದ ಸ್ಪರ್ಧೆ, ವಾಲಿಬಾಲ್, ಥ್ರೋಬಾಲ್, ಹಗ್ಗಜಗ್ಗಾಟ, ಪೆನಾಲ್ಟಿ ಶೂಟೌಟ್ (ಹಾಕಿ), ಮ್ಯೂಸಿಕಲ್ ಚೇರ್, ಬಾಲ್ ಇನ್‌ದಿ ಬ್ಯಾಸ್ಕೆಟ್, ಕ್ರಿಕೆಟ್, ಷಟಲ್ ಬ್ಯಾಡ್ಮಿಂಟನ್, ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಜಾನಪದಗೀತೆ, ಜನಪದ ನೃತ್ಯ, ವಾದ್ಯ ಸಂಗೀತ, ಭಾವಗೀತೆ ಸ್ಪರ್ಧೆ ನಡೆಯಲಿದೆ. ಪಂಚಾಯಿತಿ ಉಪ ಕಾರ್ಯದರ್ಶಿಗಳಾದ ಸವಿತಾ ಬಿ.ಎಂ. (ಆಡಳಿತ), ಭೀಮಪ್ಪ ಕೆ. ಲಾಳಿ (ಅಭಿವೃದ್ಧಿ), ಮುಖ್ಯ ಯೋಜನಾಧಿಕಾರಿ ಪ್ರಭುಸ್ವಾಮಿ ಕೆ., ಮುಖ್ಯ ಲೆಕ್ಕಾಧಿಕಾರಿ ಸಿದ್ದಗಂಗಮ್ಮ, ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಭಾಸ್ಕರ್ ನಾಯಕ್, ಇಇ ವೀರೇಶ್, ಸಹಾಯಕ ನಿರ್ದೇಶಕ ವಿಶ್ವನಾಥ್, ಮೈಸೂರು ತಾ.ಪಂ. ಇಒ ಕೃಷ್ಣಸಿ., ಪಿಡಿಒಗಳ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಕಂಚಿನಕೆರೆ ರುಕ್ಮಾಂಗದ, ಪ್ರಕಾಶ್, ಪೂರ್ಣಿಮ, ಹಾಜರಿದ್ದರು.

### ಜೋಡಿಲಿಂಗ ಮಹದೇಶ್ವರ ಜಾತ್ರೆಗೆ ತೆರೆ

• **ಉದಯವಾಹಿನಿ,ಜಯಪುರ:**

ಹೋಬಳಿಯ ಮಂಡನಹಳ್ಳಿ ಜೋಡಿಲಿಂಗ ಮಹದೇಶ್ವರ ಜಾತ್ರಾ ಮಹೋತ್ಸವದಲ್ಲಿ ಕೊಂಡೋತ್ಸವ ನಡೆಯಿತು.ಮಹದೇಶ್ವರ ಸ್ವಾಮಿ, ವೀರಭದ್ರೇಶ್ವರ ಸ್ವಾಮಿ ದೇವರ ಬಿರುದು ಹೊತ್ತ ಅರ್ಚಕರು ಕೊಂಡಹಾಯ್ದರು.

ಭಕ್ತರು ಕೊಂಡೋತ್ಸವ ಕಣ್ತುಂಬಿಕೊಂಡರು. ಭಕ್ತರು ತೆಂಗಿನಕಾಯಿ ಮತ್ತು ದವಸ ಧಾನ್ಯಗಳನ್ನು ಕೊಂಡಕ್ಕೆ ಹಾಕಿ ಪೂಜೆ ಸಲ್ಲಿಸಿದರು. ಹಾಲರವಿ ಉತ್ಸವಕ್ಕೆ ಗಂಗಸ್ಥಾನದಲ್ಲಿ ಪೂಜೆ ನಡೆಯಿತು. ಮಹದೇಶ್ವರ ಸ್ವಾಮಿ ಉತ್ಸವ ಮೂರ್ತಿ, ದೇವರ ಬಿರುದು ಬಾವಲಿಗಳು ಮೆರವಣಿಗೆಯಲ್ಲಿ ಸಾಗಿದವು. ತಮಟೆ, ಮಂಗಳವಾದ್ಯ ಸದ್ದಿಗೆ ವೀರಗಾಸೆ ನೃತ್ಯ ನಡೆಯಿತು.

ಮೆರವಣಿಗೆಯಲ್ಲಿ ಪುರ ಮಠದ ಚಂದ್ರಶೇಖರ ಸ್ವಾಮೀಜಿ ಭಾಗವಹಿಸಿದ್ದರು. ಮುಂಜಾನೆ 3ಗಂಟೆ ವೇಳೆಗೆ ಕರ್ಪೂರದಿಂದ ಕೊಂಡ ಹಚ್ಚಲಾಯಿತು. ಬಳಿಕ ಜೋಡಿಲಿಂಗ ಮಹದೇಶ್ವರ ಸ್ವಾಮಿಗೆ ಮಹಾಮಂಗಳಾರತಿ ನೆರವೇರಿಸಿ, ಭಕ್ತರಿಗೆ ದೇವರ ದರ್ಶನಕ್ಕೆ ಅನುವು ಮಾಡಿಕೊಡಲಾಯಿತು.

### ಗಾಯಕ ಕಿಕ್ಕೇರಿ ಕೃಷ್ಣಮೂರ್ತಿಗೆ ಪರಿಸರ ರತ್ನ ಪ್ರಶಸ್ತಿ

• **ಉದಯವಾಹಿನಿ, ಕಿಕ್ಕೇರಿ**

ಗಾಯಕನಾಗಿ ಮಾಡಿರುವ ಸೇವೆ ಆನಂದಕ್ಕಿಂತ ಇಮ್ಮಡಿಯಾಗಿ ಪರಿಸರ ಪ್ರೇಮದ ಸೇವೆ ಬಲು ತೃಪ್ತಿ ನೀಡಿದೆ ಎಂದು ಅಂತಾರಾಷ್ಟ್ರೀಯ ಖ್ಯಾತಿಯ ಗಾಯಕ ಪರಿಸರ ಪ್ರೇಮಿ ಕಿಕ್ಕೇರಿ ಕೃಷ್ಣಮೂರ್ತಿ ಹೇಳಿದರು. ಹೋಬಳಿಯ ಗಡಿಭಾಗದ ಊಗಿನಹಳ್ಳಿ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲಾವರಣದಲ್ಲಿ ಪರಿಸರ ಸಂರಕ್ಷಣಾ ಸಮಿತಿ ಮಂಗಳವಾರ ನೀಡಿದ ಪರಿಸರ ರತ್ನ ಪ್ರಶಸ್ತಿ ಸ್ವೀಕರಿಸಿ ಅವರು ಮಾತನಾಡಿದರು.

ತಾನಿಂದು ಪರಿಸರಪ್ರೇಮಿಯಾಗಿ ಪರಿಸರ ಜಾಗೃತಿ, ಕನ್ನಡ ಶಾಲೆ, ಸರ್ಕಾರಿ ಶಾಲೆ ಉಳಿಸಲು ಆರಂಭಿಸಿರುವ ಅಭಿಯಾನಕ್ಕೆ ಗ್ರಾಮೀಣ ಪ್ರದೇಶದ ಮುಗ್ಧ ಜನತೆ ನೀಡಿರುವ ಪ್ರೀತಿ, ಆತಿಥ್ಯ ಕಾರಣ. ಮಕ್ಕಳ ಮನಸ್ಸನ್ನು ಸುಗಮ ಸಂಗೀತದಲ್ಲಿ ಕಟ್ಟುತ್ತಿದ್ದೆ. ಸಾಲುಮರದ ತಿಮ್ಮಕ್ಕ, ಊಗಿನಹಳ್ಳಿ ವೆಂಕಟೇಶ್ ಅವರಂತಹ ಪರಿಸರ ಪ್ರೇಮಿಗಳ ಆದರ್ಶಕ್ಕೆ ಮನಸೋತಿರುವೆ. ಮಕ್ಕಳ ಮನಸ್ಸು ಕಟ್ಟಿ ಪರಿಸರ ಜಾಗೃತಿ ಮೂಡಿಸಲು ಮುಂದಾಗಿರುವೆ ಎಂದರು.

### ರಾಜ್ಯ ಮಟ್ಟದ ಭಾಷಣ ಸ್ಪರ್ಧೆ

• **ಉದಯವಾಹಿನಿ, ಸಂತೇಮರಹಳ್ಳಿ**

ರಾಜ್ಯ ಮಟ್ಟದಲ್ಲಿ ನಡೆದ ಪ್ರತಿಭಾ ಕಾರಂಜಿ ,ಕಲೋತ್ಸವದಲ್ಲಿ ಸಂತೇಮರಹಳ್ಳಿಯ ಸರ್ಕಾರಿ ಪ್ರೌಢಶಾಲೆಯ ಇಬ್ಬರು ವಿದ್ಯಾರ್ಥಿನಿಯರು ಭಾಷಣ ಸ್ಪರ್ಧೆಯಲ್ಲಿ ದ್ವಿತೀಯ ಹಾಗೂ ತೃತೀಯ ಬಹುಮಾನ ಪಡೆದಿದ್ದು . ಅಭಿನಂದಿಸಲಾಯಿತು.

ಕೊಪ್ಪಳ ಜಿಲ್ಲೆಯ ಕಾರಟಗಿ ತಾಲ್ಲೂಕಿನ ಕೆಪಿಎಸ್ ಶಾಲೆಯಲ್ಲಿ ಈಚೆಗೆ ನಡೆದ ರಾಜ್ಯ ಮಟ್ಟದ ಭಾಷಣ ಸ್ಪರ್ಧೆಯಲ್ಲಿ ವೈಯಕ್ತಿಕ ವಿಭಾಗದಲ್ಲಿ ರಮ್ಯ ಹಾಗೂ ತನುಶ್ರೀ ತಮಿಳಿನಲ್ಲಿ ದ್ವಿತೀಯ ಹಾಗೂ ತೆಲುಗಿನಲ್ಲಿ ತೃತೀಯ ಸ್ಥಾನ ಗಳಿಸಿದ್ದಾರೆ. ಶಾಲೆಯ ಪ್ರಾಂಶುಪಾಲ ಇವರನ್ನು ಅಭಿನಂದಿಸಿ ಮಾತನಾಡಿ, ಇದೇ ಮೊದಲ ಬಾರಿಗೆ ನಮ್ಮ ಶಾಲೆಯ ವಿದ್ಯಾರ್ಥಿನಿಯರು ರಾಜ್ಯಮಟ್ಟದಲ್ಲಿ ಬಹುಮಾನ ಗಳಿಸಿ ಜಿಲ್ಲೆಯ ಕೀರ್ತಿ ಹೆಚ್ಚಿಸಿದ್ದಾರೆ.

## ಅಂತರ್ಜಲ ಬಳಕೆ, ಕೈಗಾರಿಕೆಗಳಿಗೆ ಕಡಿವಾಣ

• **ಉದಯವಾಹಿನಿ, ಕೋಲಾರ:**

ಜಿಲ್ಲೆಯಲ್ಲಿ ಅಂತರ್ಜಲ ಮಟ್ಟ ಸುಧಾರಣೆಯಾಗುತ್ತಿದ್ದರೂ ಕೈಗಾರಿಕೆಗಳು ಅಂತರ್ಜಲದ ಮೇಲೆ ಅವಲಂಬಿತವಾಗಿರುವುದನ್ನು ಕಡಿಮೆ ಮಾಡಬೇಕು. ಸಾರ್ವಜನಿಕ ಸುರಕ್ಷತೆಯ ದೃಷ್ಟಿಯಿಂದ ವಿಫಲವಾದ ಕೊಳವೆ ಬಾವಿಗಳನ್ನು ಕಡ್ಡಾಯವಾಗಿ ಮುಚ್ಚಬೇಕು ಎಂದು ಜಿಲ್ಲಾಧಿಕಾರಿ ಎಂ.ಆರ್.ರವಿ, ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಜಿಲ್ಲಾಡಳಿತ ಭವನದ ಕೇಸ್ವಾನ್ ಸಭಾಂಗಣದಲ್ಲಿ ನಡೆದ ಜಿಲ್ಲಾ ಅಂತರ್ಜಲ ಪ್ರಾಧಿಕಾರದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕೈಗಾರಿಕೆಗಳು ಸ್ವಂತ ಮರುಪೂರಣ ಘಟಕಗಳನ್ನು ಹೊಂದಿದ್ದರೂ ಅಂತರ್ಜಲದ ಮೇಲಿನ ಅವಲಂಬನೆ ತಗ್ಗಿಸಿಲ್ಲ. ಉತ್ಪಾದನೆ ಮತ್ತು ಕಾರ್ಮಿಕರ ಸಂಖ್ಯೆ ಹೆಚ್ಚಳದ ನೆಪವೊಡ್ಡಿ ಹೆಚ್ಚಿನ ನೀರು ಬಳಸುತ್ತಿದ್ದು, ಅದನ್ನು ನಿಯಂತ್ರಿಸಬೇಕು ಎಂದು ನಿರ್ದೇಶನ ನೀಡಿದರು.

ಕೈಗಾರಿಕಾ ಘಟಕಗಳಲ್ಲಿ ಫ್ಲೋ ಮೀಟರ್ ರೀಡಿಂಗ್ ಮತ್ತು ಟೆಲಿಮೆಟ್ರಿ ದತ್ತಾಂಶವನ್ನು ಪ್ರತಿ ತಿಂಗಳು ಕಟ್ಟುನಿಟ್ಟಾಗಿ ಪರಿಶೀಲಿಸಬೇಕು. ಅಂತರ್ಜಲ ಲಭ್ಯತೆಯನ್ನು ಆಧರಿಸಿ ಇಂಡೋ ನಿಪ್ಪಾನ್ ಮತ್ತು ಎಎಸ್‌ಕೆ ಆಟೋಮೋಟಿವ್ ಅಂತಹ ಸಂಸ್ಥೆಗಳ ಪ್ರಸ್ತಾವನೆಗಳನ್ನು ನಿಯಮಾನುಸಾರ ವಿಲೇವಾರಿ ಮಾಡಬೇಕೆಂದು ಹೇಳಿದರು. ಪಾಪರಾಜನಹಳ್ಳಿಯ ಅಂತರಗಂಗೆ ಬೆಟ್ಟದಲ್ಲಿ ವರ್ಷವಿಡೀ ಹರಿಯುವ ನೈಸರ್ಗಿಕ ಬುಗ್ಗೆಯ ಮೂಲವನ್ನು ವೈಜ್ಞಾನಿಕವಾಗಿ ಪತ್ತೆ ಹಚ್ಚಲು ಸೂಚಿಸಿದರು. ಸಾರ್ವಜನಿಕರು ಈ ಬುಗ್ಗೆಯ ನೀರನ್ನು ಕಲುಷಿತಗೊಳಿಸದಂತೆ ತಡೆಯಲು ಕೂಡಲೇ ರಕ್ಷಣಾತ್ಮಕ ಕ್ರಮಗಳನ್ನು ಕೈಗೊಳ್ಳಬೇಕು ಎಂದು ನಿರ್ದೇಶನ ನೀಡಿದರು.

ಶ್ರೀನಿವಾಸಪುರ ತಾಲ್ಲೂಕು ಅಂತರ್ಜಲ ಅತಿಯಾದ ಬಳಕೆಯ ಪಟ್ಟಿಯಲ್ಲಿರುವುದರಿಂದ ಅಲ್ಲಿ ಹೊಸ ಕೊಳವೆ ಬಾವಿಗಳಿಗೆ ಅನುಮತಿ ನೀಡುತ್ತಿಲ್ಲ. ಸರ್ಕಾರದ ಗಂಗಾ ಕಲ್ಯಾಣಯೋಜನೆಗೆ ಮಾತ್ರ ವಿನಾಯಿತಿ ನೀಡಲಾಗಿದೆ. ರೀ–ಡ್ರಿಲ್ಲಿಂಗ್ ಕಾಮಗಾರಿಗಳಲ್ಲಿ ಕಂಡುಬಂದಿರುವ ತಾಂತ್ರಿಕ ಲೋಪಗಳ ಬಗ್ಗೆ ತನಿಖೆ ನಡೆಸಿ ವರದಿ ಸಲ್ಲಿಸಲು ಆದೇಶಿಸಿದರು.

ಅಂತರಾಳದಿಂದ... EDITORIAL

# ಬಿಕ್ಕಟ್ಟಾಗಿ ಪರಿಣಮಿಸಿದ ಆಡಳಿತಾತ್ಮಕ ಕ್ರಮ

ಬೆಂಗಳೂರು ಮಹಾನಗರದಲ್ಲಿ ಬೀದಿಬದಿ ವ್ಯಾಪಾರಿಗಳನ್ನು ಎತ್ತಂಗಡಿ ಮಾಡಲು ನಡೆಯುತ್ತಿರುವ ಕಾರ್ಯವು ಆಡಳಿತ ವ್ಯವಸ್ಥೆ ಕುಸಿದುಬಿದ್ದಿರುವುದನ್ನು, ಕಾನೂನಿನ ಬಗ್ಗೆ ಗೌರವ ಇಲ್ಲದಿರುವುದನ್ನು ಹಾಗೂ ಮನುಷ್ಯರಾದವರಿಗೆ ಇರಬೇಕಿದ್ದ ಕನಿಷ್ಠ ಸೂಕ್ಷ್ಮಗಳೂ ಇಲ್ಲದಿರುವುದನ್ನು ತೋರಿಸುತ್ತಿದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಆಡಳಿತ ವ್ಯವಸ್ಥೆಯು ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ಎಂಬ ಹೊಸ ಆಡಳಿತ ವ್ಯವಸ್ಥೆಯಾಗಿ ಬದಲಾವಣೆ ಕಂಡ ನಂತರ, ನಗರದ ಆಡಳಿತಕ್ಕೆ ಸಂಬಂಧಿಸಿದ ಸಹಜ ಚಟುವಟಿಕೆ ಎಂಬಂತೆ ಇದನ್ನು ಬಿಂಬಿಸಲಾಗುತ್ತಿದೆ. ಆದರೆ ಇದು ವಾಸ್ತವದಲ್ಲಿ ಕಾನೂನಿನ ಮೂಲಕ ನೀಡಲಾಗಿರುವ ರಕ್ಷಣೆಗಳು ಹಾಗೂ ಮೂಲಭೂತ ಹಕ್ಕುಗಳ ಉಲ್ಲಂಘನೆ. ಇಲ್ಲಿ ಆಡಳಿತಾತ್ಮಕ ಕ್ರಮವೊಂದು ಬಿಕ್ಕಟ್ಟಾಗಿ ಪರಿಣಮಿಸಿದೆ.



ಉದ್ದೇಶಪೂರ್ವಕವಾಗಿ ಸೃಷ್ಟಿಸಲಾದ ಹಾಗೂ ಉಳಿಸಲಾದ ಕಾನೂನಿನ ನಿರ್ವಾತವೊಂದು ಈ ಸಮಸ್ಯೆಯ ಹೃದಯಭಾಗದಲ್ಲಿದೆ. ಆಡಳಿತದ ವ್ಯವಸ್ಥೆಯಲ್ಲಿನ ಬದಲಾವಣೆಯ ಕಾರಣದಿಂದಾಗಿ ಹೊಸ ಗುರುತಿನ ಚೀಟಿ ವಿತರಿಸುವುದನ್ನು ನಿಲ್ಲಿಸಲಾಗಿದೆ. ಹಳೆಯ ಬಿಬಿಎಂಪಿ ವಿತರಣೆ ಮಾಡಿದ್ದ ಗುರುತಿನ ಚೀಟಿಗಳನ್ನು ಅಮಾನ್ಯ ಎಂದು ಘೋಷಿಸಲಾಗಿದೆ. ಇದರಿಂದಾಗಿ ಈ ಜನವರ್ಗದ ಉಳಿವು ಸಂಕಷ್ಟಕ್ಕೆ ಸಿಲುಕಿದೆ. ಬೀದಿಬದಿ ವ್ಯಾಪಾರಿಗಳು ಈಗ ತಮ್ಮ ಬಹುತೇಕ ಸಮಯವು ಪೊಲೀಸರ ಭಯದಲ್ಲಿಯೇ, ಎತ್ತಂಗಡಿಯ ಭೀತಿಯಲ್ಲಿಯೇ ಕಳೆದುಹೋಗುತ್ತಿದೆ ಎಂದು ಹೇಳುತ್ತಿದ್ದಾರೆ.

ಪಾದಚಾರಿ ಮಾರ್ಗಗಳಲ್ಲಿ ನಡೆಸುವ ವ್ಯಾಪಾರ ಚಟುವಟಿಕೆಗಳಿಗೆ ನಿಯಂತ್ರಣ ಇಲ್ಲದಿದ್ದರೆ ಸಂಚಾರ ದಟ್ಟಣೆ ಉಂಟಾಗುತ್ತದೆ, ಜನರಿಗೆ ತೊಂದರೆ ಆಗುತ್ತದೆ ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ, ವ್ಯಾಪಾರಕ್ಕೆಂದೇ ಸ್ಥಳಗಳನ್ನು ಸ್ಪಷ್ಟವಾಗಿ ಗುರುತಿಸುವ ಕೆಲಸವನ್ನು ಸರ್ಕಾರಗಳು ಮಾಡದ ಕಾರಣದಿಂದಾಗಿ ಈ ರೀತಿ ಆಗುತ್ತಿದೆ. ಜಿಬಿಎ ಅಧಿಕಾರಿಗಳ ಅದಕ್ಷತೆಗೆ ಜನರನ್ನು ಶಿಕ್ಷಿಸುವುದು ನ್ಯಾಯಸಮ್ಮತವಲ್ಲ. ಅಧಿಕಾರಿಗಳು ನಡೆಸಿದ ಸಮೀಕ್ಷೆಯೊಂದು 27 ಸಾವಿರ ವ್ಯಾಪಾರಿಗಳನ್ನು ಮಾತ್ರ ಗುರುತಿಸಿದೆ. ವ್ಯಾಪಾರಿಗಳ ಸಂಘಟನೆಗಳು ಇಂತಹ ವ್ಯಾಪಾರಿಗಳ ಸಂಖ್ಯೆ ಒಂದು ಲಕ್ಷಕ್ಕೂ ಹೆಚ್ಚು ಎಂದು ಹೇಳಿವೆ. ಇಲ್ಲಿನ ವ್ಯತ್ಯಾಸವು ಅನ್ಯಾಯದ ಪ್ರಮಾಣವನ್ನು ತೋರಿಸುತ್ತಿದೆ. ಕಡಿಮೆ ಸಂಖ್ಯೆಯನ್ನು ಆಧಾರವಾಗಿ ಇರಿಸಿಕೊಂಡು ಜಿಬಿಎ ಅಧಿಕಾರಿಗಳು ವಲಯಗಳನ್ನು ರೂಪಿಸಿದರೆ, 70 ಸಾವಿರಕ್ಕೂ ಹೆಚ್ಚಿನವರು ಅಕ್ರಮ ವ್ಯಾಪಾರಿಗಳು ಎಂದಾಗುತ್ತದೆ. ಅವರು ಶಾಶ್ವತವಾಗಿ ತಮ್ಮ ನೆಲೆ ಕಳೆದುಕೊಳ್ಳುತ್ತಾರೆ. ಮಹಿಳಾ ವ್ಯಾಪಾರಿಗಳಿಗೆ ಅದೊಂದೇ ಏಕೈಕ ಜೀವನೋಪಾಯ ಆಗಿರುತ್ತದೆಯಾದ ಕಾರಣಕ್ಕೆ, ಅವರು ನೆಲೆ ಕಳೆದುಕೊಂಡಾಗ ಅನುಭವಿಸುವ ಸಂಕಷ್ಟ ತೀವ್ರವಾಗಿರುತ್ತದೆ. ಒಮ್ಮೆ ಅವರನ್ನು ಎತ್ತಂಗಡಿ ಮಾಡಿದರೆ ಹಲವು ದಿನಗಳ ದುಡಿಮೆ ಇಲ್ಲವಾಗುತ್ತದೆ. ಹೀಗಿದ್ದರೂ ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ ಹಾಗೂ ರಾಜ್ಯ ಮಹಿಳಾ ಆಯೋಗ ಮೌನವಾಗಿ ಕುಳಿತಿವೆ. ಮಾನವ ಹಕ್ಕುಗಳ ಉಲ್ಲಂಘನೆಯ ಬಗ್ಗೆ ಸ್ವಯಂಪ್ರೇರಿತವಾಗಿ ಪ್ರಕರಣ ದಾಖಲು ಮಾಡಿಕೊಳ್ಳಲು ಸಂಬಂಧಪಟ್ಟವರು ವಿಫಲರಾಗಿದ್ದಾರೆ.

ಸಮಗ್ರವಾದ ಸಮೀಕ್ಷೆಯೊಂದು ಪೂರ್ಣಗೊಳ್ಳುವವರೆಗೆ ಬೀದಿಬದಿ ವ್ಯಾಪಾರಿಗಳನ್ನು ಎತ್ತಂಗಡಿ ಮಾಡುವಂತೆ ಇಲ್ಲ ಎಂದು 'ಬೀದಿಬದಿ ವ್ಯಾಪಾರಿಗಳ (ಜೀವನೋಪಾಯದ ರಕ್ಷಣೆ ಮತ್ತು ಬೀದಿಬದಿ ವ್ಯಾಪಾರದ ನಿಯಂತ್ರಣ) ಕಾಯ್ದೆ -2014' ಹೇಳುತ್ತದೆ. ಸಂವಿಧಾನದ ವಿಧಿ 19(1) (ಜಿ) ಅಡಿಯಲ್ಲಿ ಬೀದಿಬದಿ ವ್ಯಾಪಾರವು ಮೂಲಭೂತ ಹಕ್ಕು ಎಂದು ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಿದೆ. ಬೀದಿಬದಿ ವ್ಯಾಪಾರಿಗಳು ಒತ್ತುವರಿದಾರರಲ್ಲ. ಅವರು ನಗರದ ಆಸ್ತಿ ಎಂದು ಹೇಳಿದೆ. ಹೀಗಾಗಿ, ಕಾನೂನಿನ ಪ್ರಕ್ರಿಯೆ ಪಾಲನೆ ಮಾಡದೆ ಅಥವಾ ಸರಿಯಾದ ರೀತಿಯಲ್ಲಿ ಪುನರ್ವಸತಿ ಕಲ್ಪಿಸದೆ ಅವರನ್ನು ಎತ್ತಂಗಡಿ ಮಾಡುವುದು ಮೂಲಭೂತ ಹಕ್ಕಿನ ಉಲ್ಲಂಘನೆ. ರಸ್ತೆಗಳ ಎರಡೂ ಕಡೆಗಳಲ್ಲಿ ಕಾನೂನು ಪಾರಮ್ಯ ಸಾಧಿಸಬೇಕು: ಅಲ್ಲಿ ಅಕ್ರಮ ಹಾಗೂ ಸಂಕಷ್ಟಕ್ಕೆ ಆಸ್ಪದ ನೀಡಬಾರದು. ಜಿಬಿಎ ಅಧಿಕಾರಿಗಳು ಈ ವ್ಯಾಪಾರಿಗಳ ತೆರವು ಕಾರ್ಯವನ್ನು ತಕ್ಷಣವೇ ನಿಲ್ಲಿಸಬೇಕು. ಹೊಸ ಗುರುತಿನ ಚೀಟಿ ವಿತರಣೆ ಮಾಡುವವರೆಗೆ ಈಗಾಗಲೇ ನೀಡಿರುವ ಗುರುತಿನ ಚೀಟಿಗಳನ್ನು ಮಾನ್ಯ ಮಾಡಬೇಕು. ಸರಿಯಾದ ರೀತಿಯಲ್ಲಿ ಸಮೀಕ್ಷೆ ನಡೆಸಬೇಕು. ಕಾನೂನುಬದ್ಧವಾದ ವ್ಯಾಪಾರ ವಲಯಗಳನ್ನು ಗುರುತಿಸಿ ಅಧಿಸೂಚನೆಯಲ್ಲಿ ಪ್ರಕಟಿಸಬೇಕು. ಪ್ರಗತಿಯ ಹಾದಿಯಲ್ಲಿ ದಾಪುಗಾಲಿಡುತ್ತಿರುವುದಾಗಿ ಹೇಳಿಕೊಳ್ಳುತ್ತಿರುವ ಮಹಾನಗರವೊಂದು, ತನ್ನ ಆರ್ಥಿಕತೆಗೆ ನೆರವಾಗುತ್ತಿರುವ ದುರ್ಬಲ ವರ್ಗವೊಂದಕ್ಕೆ ನ್ಯಾಯ ಮತ್ತು ಸಹಾನುಭೂತಿಯನ್ನು ನಿರಾಕರಿಸುವುದು ಸರಿಯಲ್ಲ.




## ರಾಮಾಯಣ: ಅಂಗದನು ವಾಲಿಗೆ ಅಗ್ನಿ ಸಂಸ್ಕಾರ ಮಾಡಿದ್ದು

• ಹಿಂದಿನ ಸಂಚಿಕೆಯಿಂದ

120 ನೆಯ ಅಧ್ಯಾಯ

ಅನಂತರ ಮಹಾಪ್ರತಾಪಶಾಲಿಯಾದ ರಾವಣನು ಮುಂದಣ ಕಾರ್ಯವನ್ನು ವಿಚಾರಿಸುತ್ತ ಅಂತಃಪುರದಿಂದ ಹೊರಟು ಓಲಗದ ಚಾವಡಿಗೆ ಬಂದು ಮಹಾಪರಾಕ್ರಮಶಾಲಿಗಳಾಗಿ ಮಾಂಸಾಹಾರಿಗಳಾದ ಎಂಟು ಮಂದಿ ರಾಕ್ಷಸರನ್ನು ಕರೆಸಿದನು. ಪೂರ್ವದಲ್ಲಿ ಬ್ರಹ್ಮದೇವನು ತನಗೆ ಕೊಟ್ಟವ ಗರ್ವಿತನಾದ ರಾವಣನು ಆ ರಾಕ್ಷಸರಿಗೆ ಅನೇಕ ರತ್ನಾಭರಣ ದುಕೂಲ ವಾಹನಾದಿಗಳನ್ನು ಅನಂತರ ಸುಗ್ರೀವನು ವಾಲಿಯಿಂದ ರಕ್ಷಿತವಾದ ಕಿಷ್ಕಿಂಧಾಪಟ್ಟಣಕ್ಕೆ ಹೋಗಿ ಮಂತ್ರಿಗಳನ್ನು ಕರೆಯಿಸಲು ಅವರು ಸುಗ್ರೀವನಿಗೆ ಪಟ್ಟಾಭಿಷೇಕಮಾಡುವುದಾಗಿ ನಾಲ್ಕು ಸಮುದ್ರಗಳಿಂದಲೂ ಗಂಗಾದಿ ಸಕಲ ಪುಣ್ಯತೀರ್ಥಗಳಿಂದಆಕ ಪುಣ್ಯಸರಸ್ಸುಗಳಿಂದಲೂ ಸುವರ್ಣಕಲಶಗಳಲ್ಲಿ ಉದಕಗಳನ್ನು ತರಿಸಿದರು. ಅವರೆಲ್ಲರೂ ಒಟ್ಟುಗೂಡಿ ಶ್ರೀಗಂಧ ಪುಷ್ಪಮಾಲಿಕೆ ಚಂದನ ಗಂಧ ಜೇನುತುಪ್ಪ ತುಪ್ಪ ಮೊಸರು ಬಿಳಿಯ ಅಕ್ಷತೆಗಳಿಂದಲೂ ವರುಣದೇವತಾಕವಾದ ಮಂತ್ರಗಳಿಂದ ಮಂತ್ರಿಸಲ್ಪಟ್ಟ ಸುವರ್ಣಕಲಶೋದಕಗಳಿಂದಲೂ ಅಭಿಷೇಕವನ್ನು ಮಾಡಿಸಿ ಸಮಿಚ್ಚರುಗಳನು ಬ್ರಾಹ್ಮಣರಿಂದ ಹೋಮಮಾಡಿಸಿದರು. ಆ ಬಳಿಕ ಸುಗ್ರೀವನನ್ನು ವಸ್ತ್ರಾಭರಣ ದಿವ್ಯಗಂಧಾನಂ ಲೇಪನಗಳಿಂದ ಅಲಂಕರಿಸಿ ಆಸ್ಥಾನಮಂಟಪದಲ್ಲಿ ಸಿಂಹಾಸನದ ಮೇಲೆ ಮೂಡಣ ಮುಖವಾಗಿ ಕುಳ್ಳಿರಿಸಿ ದೇವತೆಗಳು ದೇವೇಂದ್ರನಿಗೆ ಸ್ವರ್ಗಾಧಿಪತ್ಯವನ್ನು ಕೊಟ್ಟು ಪಟ್ಟಾಭಿಷೇಕವನ್ನು ಮಾಡು ವಂತೆ, ಗಜ ಗವಾಕ್ಷ ಗವಯ ಶರಭ ಗಂಧಮಾದನ ಮೈಂದ ದ್ವಿವಿದ ಹನುಮಂತರೇ ಮೊದಲಾದ ಕಪಿಶ್ರೇಷ್ಠರು ಆತನಿಗೆ ಪಟ್ಟಾಭಿಷೇಕಮಾಡಿ ನಮಸ್ಕಾರವನ್ನು ಮಾಡಿದರು. ಸುಗ್ರೀವನು ಅವರನ್ನು ಕೈಹಿಡಿದೆಬ್ಬಿಸಿ ಅವರಿಗೆ ವಸ್ತ್ರಾಭರಣಾದಿ ಉಡುಗೊರೆಗಳನ್ನು ಕೊಟ್ಟು ವ್ಯಾಘ್ರಚರ್ಮಸಹಿತವಾಗಿ ರತ್ನ ಖಚಿತವಾದ ಸಿಂಹಪೀಠದ ಮೇಲೆ ಕುಳಿತು ಪರಿಜನ ಪುರಜನರಿಗೆ ಕಾಣಿಸಿಕೊಂಡನು. ಬಳಿಕ ಅಂಗದಕುಮಾರನಿಗೆ ಯುವರಾಜಪಟ್ಟವನ್ನು ಕಟ್ಟಿದನು. ಆ ಸಮಯದಲ್ಲಿ ಸಕಲ ಪ್ರಧಾನಕಪಿನಾಯಕರೂ ಸುಗ್ರೀವನನ್ನು ನೋಡಿ ಜಯ ಜಯ ಎಂದು ನುಡಿಯುತ್ತ ಸಾಕ್ಷಾತ್ ಪುರುಷೋತ್ತಮನಾಗಿ ಲಕ್ಷ್ಮಣಸಮೇತನಾದ ಶ್ರೀರಾಮನು ಸರ್ವೋತ್ತಮನೆಂದು ಕೊಂಡಾಡಿದರು. ಈ ಪ್ರಕಾರದಲ್ಲಿ ಶ್ರೀರಾಮನ ಅನುಗ್ರಹದಿಂದ ಕಿಷ್ಕಿಂಧಾಧಿಪತಿಯಾದ ಸುಗ್ರೀವನು ಪಟ್ಟಾಭಿಷೇಕವನ್ನು ಮಾಡಿಕೊಂಡು ತೋರಣಪತಾಕಾದಿಗಳಿಂದ ಅಲಂಕರಿಸಲ್ಪಟ್ಟ ಕಿಷ್ಕಿಂಧಾಪಟ್ಟಣದಲ್ಲಿ ತನ್ನ ಪತ್ನಿಯಾದ ರುಮಾದೇವಿಯನ್ನು ಕೂಡಿಕೊಂಡು ಸ್ವರ್ಗಲೋಕದಲ್ಲಿ ಶಚೀದೇವಿಯೊಡನೆ ವಿನೋದಿಸಿಕೊಂಡಿರುವ ದೇವೇಂದ್ರನಂತೆ ಅತ್ಯಂತ ಹರ್ಷೋತ್ಸವದಿಂದಿದ್ದನು.

**ಮಾಲ್ಯವತ್ಪರ್ವತದಲ್ಲಿ ಶ್ರೀರಾಮಲಕ್ಷ್ಮಣರ ಮಾಸ**

ಈ ರೀತಿಯಲ್ಲಿ ಸುಗ್ರೀವನು ಪಟ್ಟಾಭಿಷಕ್ತನಾಗಿ ತನ್ನ ಅರಮನೆಯಲ್ಲಿ ಸುಖವಾಗಿರಲು ಲಕ್ಷ್ಮಣಸಮೇತನಾದ ಶ್ರೀರಾಮನು ಸಿಂಹ ಶಾರ್ದೂಲಾದಿ ಮೃಗಗಳಿಂದ ಇಟ್ಟಣಿಸಿ ಮೇರು ಪರ್ವತಕ್ಕೆ ಸಮಾನವಾಗಿಯೂ ಅತ್ಯಂತ ಪವಿತ್ರವಾಗಿಯೂ ಇರುವ ಮಂಗಳಪ್ರದವಾದ ಮಾಲ್ಯವತಶ್ಪರ್ವತಕ್ಕೆ ಹೋದನು.

ಮುಂದುವರಿಯುವುದು...




☛ ವಿಶ್ವಾಸ್.ಡಿ.ಗೌಡ

**• ಸೋಶಿಯಲ್ ಮೀಡಿಯಾ ಇಂದಿನ ಕಾಲದಲ್ಲಿ ಸಾಮಾನ್ಯ ವ್ಯಕ್ತಿಯನ್ನೇ ಕ್ಷಣಾರ್ಧದಲ್ಲಿ ದೇಶದ ಮಟ್ಟಿಗೆ ಪರಿಚಯಿಸುವ ಶಕ್ತಿ ಹೊಂದಿದೆ. ಒಂದು ಸರಳ ಕ್ಷಣ, ಒಂದು ನಿಜವಾದ ಭಾವನೆ, ಒಂದು ಮುಗ್ಧ ನಗು ಇವುಗಳೇ ಕೆಲವೊಮ್ಮೆ ಬದುಕಿನ ದಿಕ್ಕನ್ನೇ ಬದಲಾಯಿಸಿಬಿಡುತ್ತವೆ. ಇದಕ್ಕೆ ಜೀವಂತ ಉದಾಹರಣೆ ತೆಲಂಗಾಣದ ಅರುಣ್ ಎಂಬ ಬಾಲಕ.**

# ಒಂದು ನಗು ಒಂದು ಹೊಸ ಬದುಕು

ಟೀಕಪ್ ಹಿಡಿದು ಹೃದಯದಿಂದ ನಗುವ ಆ ಹುಡುಗನ ವಿಡಿಯೋವನ್ನು ನಾವು ಅನೇಕ ಮೀಮ್ಸ್‌ಗಳಲ್ಲಿ ಮತ್ತು ಟ್ರೋಲ್‌ಗಳಲ್ಲಿ ನೋಡಿರಬಹುದು. ಆ ನಗು ಕೇವಲ ಮನರಂಜನೆಗಾಗಿ ಅಲ್ಲ; ಅದು ಜೀವನದ ಕಷ್ಟಗಳನ್ನು ಮೀರಿ ಬಂದ ಆತ್ಮಸ್ಫೂರ್ತಿಯ ನಗು. ಅರುಣ್ ತೆಲಂಗಾಣದ ಜಯಶಂಕರ್ ಭೂಪಾಲಪಳ್ಳಿ ಜಿಲ್ಲೆಯ ನಾಲಪ್ಪುಚಟುವಲ್ಲಿ ಗ್ರಾಮದವನು. ಅತ್ಯಂತ ಬಡ ಕುಟುಂಬದಲ್ಲಿ ಜನಿಸಿದ ಅವನಿಗೆ ಬಾಲ್ಯದಲ್ಲೇ ಸಂಕಷ್ಟಗಳು ಪರಿಚಿತವಾದವು. ಆರ್ಥಿಕ ಕಾರಣಗಳಿಂದ ನಾಲ್ಕನೇ ತರಗತಿಯಲ್ಲೇ ಶಾಲೆ ಬಿಡಬೇಕಾಯಿತು.

ನಂತರ ಜೀವನೋಪಾಯಕ್ಕಾಗಿ ಲಾರಿಯಲ್ಲಿ ಕ್ಲೀನರ್ ಆಗಿ ಕೆಲಸ ಮಾಡಲು ಆರಂಭಿಸಿದ.

ಒಂದು ದಿನ ಲಾರಿ ಚಾಲಕ ನೆಹರು ಅವರ ಜೊತೆ ಚಹಾ ಕುಡಿಯುವ ವೇಳೆ, ಅವರು ಹೇಳಿದ ಜೋಕ್‌ಗೆ ಅರುಣ್ ಮನಮಿಡಿದು ನಕ್ಕನು. ಆ ಕ್ಷಣವನ್ನು ಯಾರೋ ವಿಡಿಯೋ ಮಾಡಿ ಸಾಮಾಜಿಕ ಜಾಲತಾಣದಲ್ಲಿ ಹಂಚಿದರು. ನಿರೀಕ್ಷಿಸದಂತೆ ಅದು ವೈರಲ್ ಆಯಿತು. ಕ್ಷಣಾರ್ಧದಲ್ಲಿ ಅರುಣ್ ದೇಶದಾದ್ಯಂತ ಪರಿಚಿತನಾದ.

ಅವನ ನಗು ಮೀಮ್ ಲೋಕದಲ್ಲಿ ತನ್ನದೇ ಸ್ಥಾನ ಪಡೆದಿತು. ಜನರು ಅವನ ನಗುವಿನಲ್ಲಿ ತಮ್ಮ ದಿನದ ಒತ್ತಡವನ್ನು ಮರೆತರು.


ಆದರೆ ಈ ವೈರಲ್ ಖ್ಯಾತಿ ಕೇವಲ ಮನರಂಜನೆಗೆ ಸೀಮಿತವಾಗಲಿಲ್ಲ. ಅನೇಕರು ಅವನನ್ನು ಗುರುತಿಸಿ, ಅವನ ಶಿಕ್ಷಣದ ಬಗ್ಗೆ ಕಾಳಜಿ ತೋರಿದರು. ಅವನಿಗೆ ಮತ್ತೆ ಶಾಲೆಗೆ ಹೋಗುವ ಅವಕಾಶ ದೊರೆಯಿತು. ನಾಲ್ಕನೇ ತರಗತಿಯಲ್ಲಿ ನಿಂತಿದ್ದ ಅವನ ಶಿಕ್ಷಣ ಪಯಣ ಪುನಃ ಆರಂಭವಾಯಿತು. ಪರಿಶ್ರಮ ಮತ್ತು ಆತ್ಮವಿಶ್ವಾಸದೊಂದಿಗೆ ಓದಿನಲ್ಲಿ ತೊಡಗಿಕೊಂಡ ಅರುಣ್, ಇದೀಗ ಹತ್ತನೇ ತರಗತಿಯನ್ನು ಯಶಸ್ವಿಯಾಗಿ ಪಾಸಾಗಿದ್ದಾನೆ.

ಇದು ಕೇವಲ ಒಬ್ಬ ಬಾಲಕನ ಕಥೆಯಲ್ಲ; ಇದು ಶಿಕ್ಷಣದ ಮಹತ್ವವನ್ನು ಸಾರುವ ಸ್ಫೂರ್ತಿದಾಯಕ ಉದಾಹರಣೆ. ಬಡತನವು ಕನಸುಗಳನ್ನು ಕೊಲ್ಲಬಹುದು ಎಂಬ ಕಲ್ಪನೆಗೆ ಇದು ಸವಾಲು ಹಾಕುತ್ತದೆ. ಅವಕಾಶ ಸಿಕ್ಕರೆ ಯಾರೂ ತಮ್ಮ ಬದುಕನ್ನು ಬದಲಾಯಿಸಬಹುದು ಎಂಬ ಸಂದೇಶವನ್ನು ಅರುಣ್ ನೀಡಿದ್ದಾನೆ.

ಈ ಕಥೆ ಸಾಮಾಜಿಕ ಜಾಲತಾಣಗಳ ಸಕಾರಾತ್ಮಕ ಶಕ್ತಿಯನ್ನೂ ತೋರಿಸುತ್ತದೆ. ಸರಿಯಾದ ರೀತಿಯಲ್ಲಿ ಬಳಕೆ ಮಾಡಿದರೆ ಸೋಶಿಯಲ್ ಮೀಡಿಯಾ ಒಬ್ಬ ಸಾಮಾನ್ಯ ಬಾಲಕನ ಬದುಕಿಗೆ ಹೊಸ ದಾರಿ ತೋರಿಸಬಲ್ಲದು. ಅರುಣ್‌ನ ನಗು ನಮಗೆ ಇನ್ನೊಂದು ಪಾಠ ಕಲಿಸುತ್ತದೆ ಜೀವನದಲ್ಲಿ ಎಷ್ಟೇ ಕಷ್ಟಗಳಿದ್ದರೂ ನಗುವ ಶಕ್ತಿಯನ್ನು ಕಳೆದುಕೊಳ್ಳಬಾರದು. ಒಂದೇ ಒಂದು ನಗು ಅವನ ಜೀವನವನ್ನು ಬದಲಾಯಿಸಿತು.

ಆದರೆ ಆ ನಗುವಿನ ಹಿಂದೆ ಇದ್ದ ಪರಿಶ್ರಮ, ಸಹನೆ ಮತ್ತು ಆಶಾವಾದವೇ ಅವನ ಯಶಸ್ಸಿನ ನಿಜವಾದ ಆಧಾರ. ಅರುಣ್‌ನ ಕಥೆ ನಮಗೆ ಹೇಳುವುದು ಒಂದೇ ಅವಕಾಶ ಯಾವ ರೂಪದಲ್ಲಿ ಬರುತ್ತದೆ ಎಂಬುದು ಗೊತ್ತಿಲ್ಲ, ಆದರೆ ಬಂದಾಗ ಅದನ್ನು ಹಿಡಿದುಕೊಳ್ಳುವ ಸಿದ್ಧತೆ ನಮ್ಮಲ್ಲಿರಬೇಕು.

## ಮಾನವರಾಗುತ ಬಾಳಿ



ಬಾಳ ಅರಿತು ವಿದ್ಯಾಸಂಸ್ಥೆಗಾಗಿ
48ವರ್ಷದಿಂದ ತನ್ನನ್ನು ತಾನು ಸವಿಸುತಲಿ
ತನ್ನ ಜೀವನವನ್ನೇ ಮೂಡುಪಾಗಿ ಇಟ್ಟವರು
ಶಾಂತಮೂರ್ತರಾಗಿ ಸದಾ ಇರುವವರು...

ಜಗದ ಅನಿಷ್ಟ ಪದ್ಧತಿಯ ಒಪ್ಪದವರು
ಬದುಕಿನಲಿ ಮಾರ್ಗದರ್ಶಿಯಾಗಿರುವರು
ಜೀವನದಿ ಬಹಳ ಕಷ್ಟ-ಸುಖವ ಅರಿತವರು
ಮಾನವರಾಗುತ ಬಾಳಿ ಎಂದು ತಿಳಿಸಿದವರು...

ಕಲಾವಿದರಾಗಿ, ಸಾಧಕರಾಗಿ ವಿದ್ಯಾದಾನದಿ
ಎಲ್ಲರ ಪೊರೆಯುವ ದೈವದ ರೂಪದಿ
ಕಡು ಬಡವರ ಮಕ್ಕಳಿಗೆ ಉಚಿತ ವಿದ್ಯೆಯ ನೀಡಿ
ಸಲಹುತ ಒಳಿತಿನ ದಾರಿಯಲಿ ಸಾಗಿದಿರಿ...

ಬೇಕು ಬೇಡವ ಕೇಳುತ ಸಾಗುತಲಿ
ಸಮಾನತೆಯ ತೋರುತ ಎಲ್ಲರ ಕಾಯುವಿರಿ
ಬಾಳಲಿ ಏನೇ ಬಂದರೂ ಮುನ್ನಡೆಯುತಲಿ
ಮಾರ್ಗದರ್ಶನ ನೀಡುತ ಪ್ರೀತಿಯ ತೋರುವಿರಿ...

ಕಪಟ ತುಂಬದ ತ್ಯಾಗಮಯಿ ದಯೆಯಲಿ
ದುಃಖ ದುಮ್ಮಾನ ತೊರೆದು ಕಾಯುತಲಿ
ಮಾತೃ ಹೃದಯದ ಉದಯ ಕುಮಾರರು ನೀವೂ
ಜೀವನವೆಂಬುದು ಒಳಿತಿಗಾಗಿ ಎಂದು ತೋರಿದಿರಿ...

ಶ್ರೀ ವಿವೇಕಾನಂದ ಶಾಲೆಯ ಅಧ್ಯಕ್ಷರು ಆಗಿರುತ
ಸರ್ಕಾರಿ ನೌಕರಿ ತ್ಯಜಿಸಿ ಶಾಲೆಯ ಸೇವೆ ಮಾಡುತ
ಸಾಧಕರ ಸ್ನೇಹಿತರ ಹೊಂದಿತ ಸಾಗಿ ಅನ್ನಧಾನವ
ಮಾಡುತ ಸಾಗುತ ಯಶಸ್ವಿಯಾಗಿ ಸಾಗಿದಿರಿ...

**-ಹೆಚ್. ಎಸ್. ಪ್ರತಿಮಾ ಹಾಸನ್**
**ಲೇಖಕರು, ಸಾಮಾಜಿಕ ಚಿಂತಕರು. ಶಿಕ್ಷಕರು**

# ದೆಹಲಿಯಲ್ಲಿ 'ಘರ್ ವಾಪಸಿ ಅಭಿಯಾನ'ದ ಸಂಕಲ್ಪ

## 25ಕ್ಕೂ ಹೆಚ್ಚು ಸಂಘಟನೆಗಳಿಂದ ರಾಷ್ಟ್ರವ್ಯಾಪಿ ಪುನರುತ್ಥಾನ !

**• ಉದಯವಾಹಿನಿ, ನವದೆಹಲಿ**




ದೆಹಲಿಯಲ್ಲಿ ನಿನ್ನೆ ನಡೆದ 'ಘರ್ ವಾಪಸಿ' ಸಮ್ಮೇಳನದಲ್ಲಿ ಈ ಅಭಿಯಾನವನ್ನು ಬಲಪಡಿಸುವ ದೃಢ ಸಂಕಲ್ಪ ಮಾಡಲಾಯಿತು. ಈ ಸಮ್ಮೇಳನದಲ್ಲಿ ದೇಶದಾದ್ಯಂತದ 25ಕ್ಕೂ ಹೆಚ್ಚು ಸಂಘಟನೆಗಳ ಪ್ರತಿನಿಧಿಗಳು, ನ್ಯಾಯವಾದಿಗಳು, ಉದ್ಯಮಿಗಳು ಹಾಗೂ ಘರ್ ವಾಪಸಿ ಚಳವಳಿಯ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಈ ಸಮ್ಮೇಳನವನ್ನು ಹಿಂದೂ ಜನಜಾಗೃತಿ ಸಮಿತಿ, ಸನಾತನ ಘರ್ ವಾಪಸಿ ಫೌಂಡೇಶನ್ ಹಾಗೂ ಸನಾತನ ಸಂವಾದ ಸಂಸ್ಥೆಗಳ ಜಂಟಿ ಆಶ್ರಯದಲ್ಲಿ ಆಯೋಜಿಸಲಾಗಿತ್ತು.

**ಪ್ರಾಯೋಗಿಕ ಕ್ರಮಗಳ ಬಗ್ಗೆಯೂ ಸಮಾಲೋಚನೆ**

ಸಮ್ಮೇಳನದಲ್ಲಿ ಘರ್ ವಾಪಸಿ ಅಭಿಯಾನಕ್ಕೆ ಸಂಬಂಧಿಸಿದ ವಿವಿಧ ಸಾಮಾಜಿಕ, ಕಾನೂನುಬದ್ಧ, ಆರ್ಥಿಕ ಮತ್ತು ರಾಜಕೀಯ ಸಮಸ್ಯೆಗಳ ಕುರಿತು ಸುದೀರ್ಘ ಚರ್ಚೆ ನಡೆಸಲಾಯಿತು.

ಅಲ್ಲದೆ, ಈ ಸವಾಲುಗಳನ್ನು ಸಮರ್ಥವಾಗಿ ಎದುರಿಸಲು ಅಗತ್ಯವಿರುವ ಪ್ರಾಯೋಗಿಕ ಕ್ರಮಗಳ ಬಗ್ಗೆಯೂ ಸಮಾಲೋಚನೆ ನಡೆಸಲಾಯಿತು.


ಇದೇ ಸಂದರ್ಭದಲ್ಲಿ, ದೇಶಾದ್ಯಂತ ಘರ್ ವಾಪಸಿ ಕಾರ್ಯದಲ್ಲಿ ತೊಡಗಿರುವ ಸಂಘಟನೆಗಳ ನಡುವೆ ಸಮನ್ವಯ, ಸಂವಾದ ಮತ್ತು ಸಹಕಾರವನ್ನು ಬಲಪಡಿಸುವ ಉದ್ದೇಶದಿಂದ www.sanatansamvaad.com ಎಂಬ ವಿಶೇಷ ಡಿಜಿಟಲ್ ವೇದಿಕೆಯನ್ನು ಅಧಿಕೃತವಾಗಿ ಅನಾವರಣಗೊಳಿಸಲಾಯಿತು.

ಭಾರತದ ಸಾಂಸ್ಕೃತಿಕ ಪರಂಪರೆ, ರಾಷ್ಟ್ರೀಯ ಭದ್ರತೆ ಹಾಗೂ ಸನಾತನ ಸಂಪ್ರದಾಯಗಳ ಸಂರಕ್ಷಣೆಗಾಗಿ ಘರ್ ವಾಪಸಿ ಅಭಿಯಾನವನ್ನು ದೇಶಾದ್ಯಂತ ಪುನಃ ಶಕ್ತಿಯುತವಾಗಿ ಜಾಗೃತಗೊಳಿಸಲು ಮತ್ತು ಸಮಾಜದಲ್ಲಿ ಅರಿವು ಮೂಡಿಸಲು ಸಂಘಟಿತ ಹಾಗೂ ನಿರಂತರ ಪ್ರಯತ್ನಗಳನ್ನು ಮಾಡಲು ಈ ಸಮ್ಮೇಳನದಲ್ಲಿ ಸಂಕಲ್ಪ ಮಾಡಲಾಯಿತು.

## 15 ವರ್ಷಗಳ ಸೃಜನಾತ್ಮಕ ಕಲಿಕಾ ಶಿಕ್ಷಣದ ಪಯಣವನ್ನು ದಾಖಲಿಸುವ ವಿಶೇಷ ಪುಸ್ತಕ

# ಏಕ್ಯಾ ಶಾಲೆಗಳ 'ವಿಚಾರಾಧಾರಿತ ಶಿಕ್ಷಣ' ಕುರಿತ ಪುಸ್ತಕ ಲೋಕಾರ್ಪಣೆ

**• ಉದಯವಾಹಿನಿ, ಬೆಂಗಳೂರು**



ವಿದ್ಯಾರ್ಥಿಗಳಲ್ಲಿ ಹೆಚ್ಚುತ್ತಿರುವ ಒತ್ತಡ, ಮಾನಸಿಕ ಆರೋಗ್ಯದ ಸಮಸ್ಯೆಗಳು ಮತ್ತು ಕೇವಲ ಪರೀಕ್ಷೆ ಕೇಂದ್ರಿತ ಶಿಕ್ಷಣ ಪದ್ಧತಿಯ ಬಗ್ಗೆ ವ್ಯಾಪಕ ಚರ್ಚೆ ನಡೆಯುತ್ತಿರುವ ಈ ಸಂದರ್ಭದಲ್ಲಿ ಏಕ್ಯಾ ಶಾಲೆಗಳು ಹೊರತಂದಿರುವ 15 ವರ್ಷಗಳ ಶೈಕ್ಷಣಿಕ ಪಯಣದ ಸ್ಮರಣಿಕೆಯಾದ '15 ಲರ್ನಿಂಗ್ಸ್ ಇನ್ 15 ಇಯರ್ಸ್ ಆಫ್ ಏಕ್ಯಾ: ಹೌ ವಿ ಬಿಲ್ಟ್ ಸ್ಕೂಲ್ಸ್' ಪುಸ್ತಕವನ್ನು ಪೂಜ್ಯ ದಲೈ ಲಾಮಾ ಅವರು ಲೋಕಾರ್ಪಣೆ ಮಾಡಿದರು.

ಈ ಸಂದರ್ಭದಲ್ಲಿ ಡಾ. ಕೆ.ಸಿ. ರಾಮಮೂರ್ತಿ ಐಪಿಎಸ್ (ನಿವೃತ್ತಿ), ಮಾಜಿ ರಾಜ್ಯಸಭಾ ಸದಸ್ಯರು, ಅಧ್ಯಕ್ಷರು ಸಿಎಂಆರ್ ಸಮೂಹ ಶಿಕ್ಷಣ ಸಂಸ್ಥೆಗಳು ಮತ್ತು ಸಿಎಂಆರ್ ವಿಶ್ವವಿದ್ಯಾಲಯ ಹಾಗೂ ಡಾ.ತ್ರಿಸ್ತಾ ರಾಮಮೂರ್ತಿ, ಸಂಸ್ಥಾಪಕರು ಏಕ್ಯಾ ಶಾಲೆಗಳು ಮತ್ತು ಪ್ರೊವೊಸ್ಟ್, ಸಿಎಂಆರ್ ವಿಶ್ವವಿದ್ಯಾಲಯ ಇವರು ಉಪಸ್ಥಿತರಿದ್ದು ಸ್ಮರಣಿಕೆ ಪುಸ್ತಕ ಲೋಕಾರ್ಪಣೆಗೆ ಸಾಕ್ಷಿಯಾದರು.

# ವಂಚನೆಯ ಜಾಲಕ್ಕೆ ಮುಗ್ಧತೆ ಬಲಿಯಾದ ಸ್ಮರಣೆ



**ಪುರಾಣಗಳು ಕೇವಲ ಕಥೆಗಳಲ್ಲ, ಅವು ಕಾಲ ಕಾಲಕ್ಕೆ ಹೊಸ ಅರ್ಥಗಳನ್ನು ಸ್ಫುರಿಸುವ ಕನ್ನಡಕಗಳು. ರಾಮಾಯಣದ ಅಹಲ್ಯೆಯ ಪ್ರಸಂಗವನ್ನು ನಾವು ಸಾವಿರಾರು ಬಾರಿ ಕೇಳಿದ್ದೇವೆ. ಆದರೆ, ಡಿ.ಎನ್. ಅಕ್ಕಿ ಅವರ 'ಅವಾಂತರ' ಕವಿತೆಯು ಈ ಪುರಾಣ ಪ್ರಸಂಗವನ್ನು ಕೇವಲ ಭಕ್ತಿಯ ನೆಲೆಯಲ್ಲಾಗಲಿ ಅಥವಾ ಪವಾಡದ ರೂಪದಲ್ಲಾಗಲಿ ನೋಡದೆ, ಸ್ತ್ರೀ ಸಂವೇದನೆ ಮತ್ತು ಸಾಮಾಜಿಕ ನ್ಯಾಯದ ನೆಲೆಯಲ್ಲಿ ವಿಶ್ಲೇಷಣೆಗೆ ಒಳಪಡಿಸಿದ್ದಾರೆ.**

ಕವಿತೆಯ ಆರಂಭವೇ ಒಂದು ಕಟು ವಾಸ್ತವದೊಂದಿಗೆ ತೆರೆದುಕೊಳ್ಳುತ್ತದೆ. ಅಪರಾತ್ರಿಯ ಕೋಳಿಯ ಕೂಗು, ಕೌಪಿನವ ಸೆಳೆಯಿತು ಕತ್ತಲೆ ಎನ್ನುವ ಸಾಲುಗಳು ಇಂದ್ರನು ಹೂಡಿದ ಕುತಂತ್ರದ ಭೀಕರತೆಯನ್ನು ಬಿಂಬಿಸುತ್ತದೆ, ಇಲ್ಲಿ ಅಹಲ್ಯೆ ತಪ್ಪು ಮಾಡಿದವಳಲ್ಲ, ಬದಲಾಗಿ 'ಕುಹಕ ಜಾಲ'ಕ್ಕೆ ಸಿಲುಕಿದವಳು. ಕವಿಯು ಅಹಲ್ಯೆಯನ್ನು ಏನೂ ಅರಿಯದ ಹರದಿ ಎಂದು ಕರೆಯುವ ಮೂಲಕ ಅವಳ ನಿರಪರಾಧಿತ್ವವನ್ನು ಎತ್ತಿ ಹಿಡಿಯುತ್ತಾರೆ. ನಿಷ್ಠೆಯಿಂದ ಪತಿಯ ಸೇವೆ ಮಾಡಿದವಳಿಗೆ ಪ್ರತಿಫಲವಾಗಿ ಸಿಕ್ಕಿದ್ದು 'ದಂಡನೆ' ಮತ್ತು 'ಯಾತನೆ' ಯು ಪುರುಷ ಪ್ರಧಾನ ವ್ಯವಸ್ಥೆಯ ಕ್ರೌರ್ಯಕ್ಕೆ ಹಿಡಿದ ಕನ್ನಡಿಯಂತಿದೆ.

ಕವಿತೆಯ ಮೂರನೇ ಚರಣದಲ್ಲಿ ಇಂದ್ರ ಮತ್ತು ಅಹಲ್ಯೆಗೆ ಸಿಕ್ಕ ಶಿಕ್ಷೆಗಳ ನಡುವಿನ ವ್ಯತ್ಯಾಸದ ತಾರತಮ್ಯವನು ಕವಿ ಮಾರ್ಮಿಕವಾಗಿ ಚಿತ್ರಿಸಿದ್ದಾರೆ. ಇಂದ್ರನಿಗೆ ಸಿಕ್ಕ ಶಿಕ್ಷೆ ದೈಹಿಕವಾದದ್ದು (ಸಾವಿರ ತೂತು), ಆದರೆ ಅಹಲ್ಯೆಗೆ ಸಿಕ್ಕಿದ್ದು ಅವಳ ಅಸ್ತಿತ್ವವನ್ನೇ ನಗಣ್ಯ ಮಾಡುವ 'ಜಡತ್ವ' ಅಥವಾ ಕಲ್ಲಾಗುವ ಶಿಕ್ಷೆ. ಈ 'ಜಡತ್ವ' ಕೇವಲ ಅಹಲ್ಯೆಯ ಸ್ಥಿತಿಯಲ್ಲ, ಅದು ಸಮಾಜವು ಸಂತ್ರಸ್ತ ಮಹಿಳೆಯನ್ನು ನೋಡುವ ದೃಷ್ಟಿಕೋನವೂ ಹೌದು.

ಕವಿತೆಯ ಶಕ್ತಿ ಇರುವುದು ಅದರ ಕೊನೆಯ ಎರಡು ಚರಣಗಳಲ್ಲಿ. ಇಲ್ಲಿ ಕವಿ ಕೇವಲ ತ್ರೇತಾಯುಗದ ಅಹಲ್ಯೆಯ ಬಗ್ಗೆ ಮಾತನಾಡುತ್ತಿಲ್ಲ; ಬದಲಿಗೆ ಯುಗ ಯುಗದಿಂದಲೂ ಸಾಗಿ ಬಂದ ಮಾನ ಪ್ರಾಣದ ಹರಣವು ಎನ್ನುವ ಮೂಲಕ ಇಂದಿನ ಅಬಲೆಯರ ಸ್ಥಿತಿಯನ್ನು ಪ್ರಶ್ನಿಸಿದ್ದಾರೆ.

ಅಹಲ್ಯೆ ಕಲ್ಲಾದದ್ದು ಅಂದಿನ ಕಥೆಯಾದರೆ, ಇಂದಿಗೂ ಸಮಾಜದ ಕೆಟ್ಟ ಕಣ್ಣುಗಳಿಗೆ ತುತ್ತಾಗಿ, ವಂಚನೆಗೆ ಒಳಗಾಗಿ ಮೌನಕ್ಕೆ ಶರಣಾಗುವ ಸಾವಿರಾರು ಅಹಲ್ಯೆಯರು ನಮ್ಮ ನಡುವೆ ಇದ್ದಾರೆ.

ಜಡದ ಬಿಡುಗಡೆಗಾಗಿ ಕಾಯಬೇಕು ಉದ್ಧಾರದ ಪಾದಕೆ ಎನ್ನುವ ಸಾಲು ಭರವಸೆಯನ್ನೂ, ಅಸಹಾಯಕತೆ ಒಟ್ಟಿಗೇ ಸಾರುತ್ತದೆ.

ಇಲ್ಲಿ 'ಶ್ರೀಪಾದ' ಎನ್ನುವುದು ಕೇವಲ ರಾಮನ ಪಾದವಲ್ಲ, ಅದು ಸಮಾಜದಲ್ಲಿ ಬರಬೇಕಾದ ಮಾನವೀಯತೆಯ ಸ್ಪರ್ಶ. ಮಹಿಳೆಯ ಘನತೆಯನ್ನು ಎತ್ತಿ ಹಿಡಿಯುವ, ಅವಳನ್ನು ಸಂಶಯದ ಕಣ್ಣಿನಿಂದ ನೋಡದ ಒಂದು ಸುಸಂಸ್ಕೃತ ಸಮಾಜದ ಆಶಯ ಇಲ್ಲಿದೆ.

ಡಿ.ಎನ್. ಅಕ್ಕಿ ಅವರ ಈ ಕವಿತೆಯು ಅಹಲ್ಯೆಯ ಪಾತ್ರದ ಕುರಿತು ಪುರಾಣದ ಕಥೆಯಿಂದ ವರ್ತಮಾನದ ಶೋಷಣೆಯ ಚಿತ್ರಣವನು ಚಿತ್ರಿಸಿರುವರು. ಹಳೆಯ ಕಥೆಯೊಂದಕ್ಕೆ ಹೊಸ ಭಾಷ್ಯ ಬರೆಯುವ ಮೂಲಕ, ಹೆಣ್ಣಿನ ಮೇಲಾಗುವ ನಿರಂತರ 'ಅವಾಂತರ'ಗಳನ್ನು ಕವಿ ಅತ್ಯಂತ ಪ್ರಬುದ್ಧವಾಗಿ ಕಟ್ಟಿಕೊಟ್ಟಿದ್ದಾರೆ. ಇದು ಕೇವಲ ಕವಿತೆಯಲ್ಲ, ಬದಲಿಗೆ ಮೌನವಾಗಿ ಕಲ್ಲಾಗಿರುವ ಸಾವಿರಾರು ಅಹಲ್ಯೆಯರ ಪರವಾಗಿ ಎತ್ತಿದ ದನಿಯಾಗಿದೆ.

**-ಪಾರ್ವತಿ ಎಸ್ ಬೂದೂರು**
**(ಕೆಂಭಾವಿ)**

# ತಲೆದಿಂಬು ನೀರಿಲ್ಲದೆ ಕ್ಲೀನ್ ಮಾಡಬಹುದು

ದಿನಾ ಬಳಸುವ ಪಿಲ್ಲೋ ಅಂದರೆ ತಲೆದಿಂಬು, ಹಾಸಿಗೆ ಮೇಲೆ ಹಾಕುವ ಬೆಡ್ ಶೀಟ್, ಚಳಿಗಾಲದಲ್ಲಿ ಹೊದ್ದುಕೊಳ್ಳಲು ಬಳಸುವ ಬ್ಲ್ಯಾಂಕೆಟ್ ಅಥವ ದಪ್ಪನೆಯ ಕಾಟನ್ ಕಂಬಳಿ, ಇವೆಲ್ಲಾವನ್ನು ಕೂಡ ತಿಂಗಳಲ್ಲಿ ಎರಡೂ ಬಾರಿಯಾದರೂ ಸ್ವಚ್ಛಗೊಳಿಸಬೇಕು. ಮುಖ್ಯವಾಗಿ ಬೆಡ್ ಶೀಟ್, ಪಿಲ್ಲೋ, ಇವೆಲ್ಲಾವನ್ನು ವರ್ಷಕ್ಕೊಮ್ಮೆ ಆದರೂ ಬದಲಾಯಿಸುತ್ತಿರಬೇಕು.

ಕೆಲವೊಮ್ಮೆ ತಲೆದಿಂಬುಗಳು ಹೊರಗಿನಿಂದ ಸ್ವಚ್ಛವಾಗಿ ಕಾಣುವುದರಿಂದ ಅವುಗಳ ಬಗ್ಗೆ ನಮ್ಮಲ್ಲಿ ಹೆಚ್ಚಿನವರು ತಲೆಕೆಡಿಸಿಕೊಳ್ಳಲು ಹೋಗುವುದಿಲ್ಲ! ಆದರೆ ನಿಮಗೆ ಗೊತ್ತಿರಲಿ ದೀರ್ಘಕಾಲದಿಂದ ಒಂದೇ ತಲೆದಿಂಬನ್ನು ಬಳಸುತ್ತಾ ಬರುವುದರಿಂದ, ಈ ತಲೆದಿಂಬಿನಿಂದ ವಿಚಿತ್ರವಾದ ವಾಸನೆಯನ್ನು ಹೊರ ಸೂಸುತ್ತವೆ.

ಹೀಗಾಗಿ ತಲೆದಿಂಬುಗಳನ್ನು ಸ್ವಚ್ಛವಾಗಿ ಮತ್ತು ನೈರ್ಮಲ್ಯವಾಗಿಡಲು, ದಿಂಬಿಗೆ ಬಳಸುವ ಕವರ್‌ಗಳನ್ನು ವಾರಕ್ಕೊಮ್ಮೆ ಮತ್ತು ದಿಂಬುಗಳನ್ನು ವರ್ಷಕ್ಕೆ ಒಮ್ಮೆಯಾದರೂ ಬದಲಾಯಿಸಬೇಕು.

**ಸೂರ್ಯನ ಬೆಳಕಿನಿಂದ ನೈಸರ್ಗಿಕ ಶುಚಿಗೊಳಿಸುವಿಕೆಯನ್ನು ಪ್ರಯತ್ನಿಸಿ:** ಸೂರ್ಯನ ಬೆಳಕು ಬೀಳುವ ಬಾಲ್ಕನಿಯಲ್ಲಿ ಅಥವಾ ಹೊರಗಡೆ ಮನೆಯ ಟೇರೆಸ್ ನಲ್ಲಿ ಮಧ್ಯಾಹ್ನದ ಮಟಮಟ ಬಿಸಿಲು ಅಥವಾ ಸುಡುವ ಬಿಸಿಲು ಬೀಳುವ ಸಮ ಯದಲ್ಲಿ ದಿಂಬುಗಳನ್ನು ಹಾಗೆಯೇ ಒಣಗಲು ಬಿಡಿ.

ಸೂರ್ಯನ ಬೆಳಕಿನ ಶಾಖಕ್ಕೆ ಪಿಲ್ಲೋ ಅಥವಾ ದಿಂಬುಗಳಲ್ಲಿ ಕಂಡುಬರುವ ತೇವಾಂಶ ಕಡಿಮೆಯಾಗಿ, ಬ್ಯಾಕ್ಟೀರಿಯದಂತಹ ಸೋಂಕು ನಿವಾರಣೆಯಾಗುತ್ತವೆ.




ಇನ್ನು ಈ ಸಮಯದಲ್ಲಿ ದಿಂಬುಗಳ ಮೇಲೆ ಚಿಟಿಕೆಯಷ್ಟು ಬೇಕಿಂಗ್ ಸೋಡಾವನ್ನು ಚುಮುಕಿಸುವ ಪ್ರಕ್ರಿಯೆಯಿಂದ ದಿಂಬುಗಳ ಮೇಲಿನ ದುರ್ವಾಸನೆಯು ದೂರವಾ ಗುತ್ತವೆ. ಈ ಟ್ರಿಕ್ಸ್ ಅನ್ನು ವಾರದಲ್ಲಿ ಎರಡು ಮೂರು ಬಾರಿಯಾದರೂ ಪುನರಾವರ್ತಿಸಿ

ನಿಮ್ಮ ಬಳಿ ಹ್ಯಾಂಡ್ ಸ್ಟೀಮರ್ ಇದ್ದರೆ, ನಿಮ್ಮ ದಿಂಬುಗಳನ್ನು ಸ್ವಚ್ಛಗೊಳಿಸಲು, ಶುಚಿಗೊಳಿಸಲು ನೀವು ಅದನ್ನು ಬಳಸಬಹುದು. ಸ್ಟೀಮಿಂಗ್ ಸೂಕ್ಷ್ಮಜೀವಿಗಳು ಮತ್ತು ಧೂಳಿನ ಹುಳಗಳನ್ನು ಕೊಲ್ಲುತ್ತದೆ. ಸೂಕ್ಷ್ಮಜೀವಿಗಳನ್ನು ಸ್ವಚ್ಛಗೊಳಿಸಲು ಸ್ಟೀಮರ್ ಬಳಸಿ.

**ಮನೆಯಲ್ಲಿ ನೈಸರ್ಗಿಕ ಶುಚಿಗೊಳಿಸುವ ಸ್ಪ್ರೇ ತಯಾರಿಸಿ**

ದಿಂಬುಗಳನ್ನು ಸ್ವಚ್ಛಗೊಳಿಸಲು ನೀವು ನೈಸರ್ಗಿಕ ಶುಚಿಗೊಳಿಸುವ ಸ್ಪ್ರೇ ಅನ್ನು ಸಹ ತಯಾರಿಸಬಹುದು. ಒಂದು ಕಪ್ ನೀರಿನೊಂದಿಗೆ ಒಂದು ಟೀಚಮಚ ಬಿಳಿ ವಿನೆಗರ್ ಅಥವಾ ರಬ್ಬಿಂಗ್ ಆಲ್ಕೋಹಾಲ್ ಅನ್ನು ಮಿಶ್ರಣ ಮಾಡಿ. ಬಯಸಿದಲ್ಲಿ, 2-3 ಹನಿ ಸಾರಭೂತ ತೈಲವನ್ನು ಸೇರಿಸಿ.

ಈ ಸ್ಪ್ರೇನೊಂದಿಗೆ ದಿಂಬನ್ನು ಲಘುವಾಗಿ ಸಿಂಪಡಿಸಿ ಮತ್ತು ಒಣಗಲು ಬಿಡಿ. ದಿಂಬು ವಾಸನೆಯಿಲ್ಲದಂತಾಗುತ್ತದೆ.

# ರಾಗಿ ಖರೀದಿ ಕೇಂದ್ರ ಉದ್ಘಾಟನೆ ಮಾಡಿದ ಶಾಸಕ ಕೆಎಂ ಶಿವಲಿಂಗೇಗೌಡ

• ಉದಯವಾಹಿನಿ ಅರಸೀಕೆರೆ

ನಗರದ ಕೃಷಿ ಉತ್ಪನ್ನ ಮಾರುಕಟ್ಟೆ ಆವರಣದಲ್ಲಿ ಕರ್ನಾಟಕ ಸರ್ಕಾರದ ಆಹಾರ, ನಾಗರಿಕ ಸರಬರಾಜು ಇಲಾಖೆ ಅಡಿಯಲ್ಲಿ ಬರುವ ಕರ್ನಾಟಕ ಆಹಾರ ನಾಗರಿಕ ನಿಗಮ ನಿಯಮಿತ ವತಿಯಿಂದ ರಾಗಿ ಖರೀದಿ ಕೇಂದ್ರವನ್ನು ಅರಸೀಕೆರೆ ಕ್ಷೇತ್ರದ ಶಾಸಕ, ಗೃಹ ಮಂಡಳಿ ಅಧ್ಯಕ್ಷರಾದ ಕೆಎಂ ಶಿವಲಿಂಗೇಗೌಡ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು ರೈತರಿಂದ ಬೆಂಬಲ ಬೆಲೆಯಲ್ಲಿ ರಾಗಿ ಖರೀದಿ ಮಾಡುವಾಗ ರೈತರಿಗೆ ಯಾವುದೇ ತೊಂದರೆ ಆಗಬಾರದು ಮತ್ತು ಪಡೆದ ರಾಗಿಯನ್ನು ಯಾವುದೇ ಕಾರಣಕ್ಕೂ ರಾಗಿಯಲ್ಲಿ ಕಸ ಮಣ್ಣು ಮಿಶ್ರಿತ ಕಂಡು ಬಂದರೆ ಯಾವುದೇ ಮುಲಾಜಿಲ್ಲದೆ ಸರ್ಕಾರದ ಮತದಲ್ಲಿ ತನಿಖೆಯನ್ನು ನಡೆಸಲಾಗುವುದು ಎಂದು ತಿಳಿಸಿದರು. ಸರ್ಕಾರದ ಮಾರುಕಟ್ಟೆಗೆ ರೈತರ ಹೆಸರಿನಲ್ಲಿ ಎಷ್ಟೇ ಪ್ರಮಾಣದಲ್ಲಿ ರಾಗಿ ಬಂದರೂ ಸಹ ರೈತರಿಗೆ ತೊಂದರೆಯಾಗದಂತೆ ಖರೀದಿ ಮಾಡುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ವಿಧಾನಸಭೆಯ ಗಲಾಟೆಯಲ್ಲಿ ಮತ್ತೆ ಪುನರುಚ್ಚರಿಸಿ


ಉದಯವಾಹಿನಿ ಚಿತ್ರ

ಮಾತನಾಡಿದ ಶಾಸಕ ಶಿವಲಿಂಗೇಗೌಡ ನನ್ನನ್ನು ಕೊಬ್ಬರಿ ಕಳ್ಳ ಕಾಯಿ ಕಳ್ಳ ಎಂದು ಅನ್ಯ ಪಕ್ಷದವರು ತೇಜೋವದೆ ಮಾಡಿದರು ನಾನು ಇದ್ಯಾವುದಕ್ಕೂ ತಲೆಕೆಡಿಸಿಕೊಳ್ಳುವುದಿಲ್ಲ ಕೊಬ್ಬರಿಗೆ ಬೆಂಬಲ ಬೆಲೆಸಿಗಲಿ ಇಂತಹ ಸಂದರ್ಭದಲ್ಲಿ ಹೋರಾಟ ನಡೆಸಿದ್ದರ ಬಗ್ಗೆ ತನ್ನ ಕ್ಷೇತ್ರದ ಮತದಾರರಿಗೆ ತಿಳಿದಿದೆ ಬೆಳಗಾವಿ ಅಧಿವೇಶನದಿಂದ ಪ್ರಾರಂಭವಾದ ಹೋರಾಟ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದ ಮಟ್ಟದಲ್ಲಿ ಕೇಂದ್ರ ಕೃಷಿ ಸಚಿವರನ್ನು ಸಹ ಭೇಟಿ ಮಾಡಿ ಕೊಬ್ಬರಿಯ ಬೆಂಬಲ ಬೆಲೆಗೆ ಶ್ರಮಿಸಿದ್ದೇನೆ ಎಂದರು.

ಇದಲ್ಲದೆ ಇತ್ತೀಚಿಗೆ ನಡೆದ ವಿಧಾನಸಭೆ ಅಧಿವೇಶನದಲ್ಲಿ ನನ್ನ ವಿರುದ್ಧ ಪಿತೂರಿ ನಡೆಸಿ ಪ್ರತಿ ಬಾರಿಯೂ ನನ್ನನ್ನು ಮಾತನಾಡಲು ಬಿಡದೆ ಕಳೆದ ಹಲವಾರು ತಿಂಗಳುಗಳಿಂದ ತೊಂದರೆ ನೀಡುತ್ತಿದ್ದರು ನಂತರ ನನ್ನನ್ನು ರಾಗಿ ಕಳ್ಳ ಕೊಬ್ಬರಿ ಕಳ್ಳ ಎಂದು ಘೋಷಣೆ ಮಾಡಿದಾಗ ನಾನು ತುಂಬಾ ರೋಷಾ ವೇಷದಲ್ಲಿ ಉತ್ತಮವಾಗಿ ಉತ್ತರ ನೀಡಿದ್ದೇನೆ ಈ ವಿಚಾರದ ಗಲಾಟೆಯಲ್ಲಿ ಹಲವಾರು ಜನರ ಪಿತೂರಿಯು ನಡೆದಿದೆ ನಾನು ಇದ್ಯಾವುದಕ್ಕೂ ಜಗ್ಗುವ ಮನುಷ್ಯನಲ್ಲ ಎಂದು ನೇರವಾಗಿ ವಿರೋಧ ಪಕ್ಷಗಳಿಗೆ ಉತ್ತರ ನೀಡಿದರು. ರಾಜ್ಯ ರೈತ ಸಂಘದ ಗೊಲ್ಲರಳ್ಳಿ ದಯಾನಂದ್ ಬಾಣಾವರ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷರಾದ ಜಯಣ್ಣ ಜಿಲ್ಲಾ ಕೆಎಫ್‌ಸಿಸಿ ಅಧಿಕಾರಿಗಳಾದ ಅನುರಾಧ ಅಧಿಕಾರಿಗಳಾದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಕಾರ್ಯದರ್ಶಿಗಳಾದ ಸಿದ್ದಲಿಂಗ ಸ್ವಾಮಿ ಅರಸೀಕೆರೆ ಆಹಾರ ಇಲಾಖೆ ಶಿರಸ್ತೆದರಾದ ಬಾಲಚಂದ್ರ ಅರಸೀಕೆರೆ ಆಹಾರ ನಿಗಮದ ಪ್ರಭಾರ ವ್ಯವಸ್ಥಾಪಕರಾದ ಶ್ರೀನಾಥ್ ಸೇರಿದಂತೆ ಹಲವಾರು ಗ್ರಾಮದ ರೈತರುಗಳು ಉಪಸ್ಥಿತರಿದ್ದರು.

## ದರ್ಗಾದಲ್ಲಿರುವ ಶಿವಲಿಂಗ ಪೂಜೆಗೆ ಅರ್ಜಿದಾರರಿಗಷ್ಟೇ ಹೈಕೋರ್ಟ್ ಅವಕಾಶ

• ಉದಯವಾಹಿನಿ, ಕಲಬುರಗಿ

ಜಿಲ್ಲೆಯ ಆಳಂದ ಪಟ್ಟಣದ ಲಾಡ್ಲೆ ಮಶಾಕ್ ದರ್ಗಾದಲ್ಲಿರುವ ಶಿವಲಿಂಗಕ್ಕೆ ಪೂಜೆ ಸಲ್ಲಿಸಲು ಕೇವಲ ಅರ್ಜಿದಾರರಿಗೆ ಮಾತ್ರವೇ ನೀಡಿ ಕರ್ನಾಟಕ ಹೈಕೋರ್ಟ್ ಕಲಬುರಗಿ ಪೀಠವು ಬುಧವಾರ ಆದೇಶಿಸಿದೆ. ಪ್ರತಿ ವರ್ಷದಂತೆ ಈ ವರ್ಷವೂ ಮಹಾಶಿವರಾತ್ರಿಯ ಪವಿತ್ರ ದಿನದಂದು 15 ಹಿಂದೂ ಮುಖಂಡರಿಗೆ ದರ್ಗಾದಲ್ಲಿನ ಶಿವಲಿಂಗಕ್ಕೆ ಪೂಜೆ ಸಲ್ಲಿಸಲು ಅವಕಾಶ ನೀಡುವಂತೆ ಕೋರಿ ಸಿದ್ರಾಮಯ್ಯ ಹಿರೇಮಠ ರಿಟ್ ಅರ್ಜಿ ಸಲ್ಲಿಸಿದ್ದರು. ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಪ್ರದೀಪ್‌ಸಿಂಗ್ ಯೆರೂರ್ ಅವರ ಪೀಠವು, ಶಿವರಾತ್ರಿಯಂದು ಮಧ್ಯಾಹ್ನ 2 ಗಂಟೆಯಿಂದ ಸಂಜೆ 6 ಗಂಟೆ ಒಳಗೆ ಪೂಜೆ ಸಲ್ಲಿಸಲು ಅವಕಾಶ ನೀಡಿ ಆದೇಶಿಸಿದೆ.

ಅರ್ಜಿದಾರರು ತಮ್ಮನ್ನೂ ಸೇರಿ 15 ಮಂದಿಗೆ ಶಿವಲಿಂಗ ಪೂಜೆಗೆ ಅವಕಾಶ ಕೋರಿದ್ದಾರೆ. ಆದರೆ, ಇತರ ಯಾರೊಬ್ಬರ ಹೆಸರನ್ನೂ ನೀಡಿಲ್ಲ. ಪೂಜಾ ಸ್ಥಳದಲ್ಲಿ ಕಾನೂನು ಸುವ್ಯವಸ್ಥೆ ಕದಡಬಲ್ಲಂಥ ಸಾಧ್ಯತೆ ಹಿನ್ನೆಲೆಯಲ್ಲಿ ಎಲ್ಲರಿಗೂ ಅನ್ವಯಿಸುವಂಥ ಆದೇಶ ನೀಡಲಾಗದು. ಈ ಹಂತದಲ್ಲಿ ಅರ್ಜಿದಾರರು ತಮ್ಮೊಬ್ಬರಿಗೆ ಪೂಜೆ ಸಲ್ಲಿಸುವ ಅವಕಾಶ ನೀಡುವುದಕ್ಕೂ ಸಮ್ಮತಿಸಿದ್ದಾರೆ ಎಂದು ಆದೇಶದಲ್ಲಿ ಹೇಳಿದ್ದಾರೆ. ಅಲ್ಲದೇ, ಪೂಜೆ ಸಲ್ಲಿಸಲು ತೆರಳುವ ಅರ್ಜಿದಾರರಿಗೆ ಸೂಕ್ತ ಭದ್ರತೆ ಕಲ್ಪಿಸಬೇಕು. ಅರ್ಜಿದಾರರ ಹಾಗೂ ದರ್ಗಾದವರ ಸೇರಿದಂತೆ ಯಾವುದೇ ಕಡೆಯವರಿಂದ ಅಹಿತಕರ ಘಟನೆ ನಡೆದಂತೆ ತಡೆಯಲು ಸಂಬಂಧಿಸಿದ ಪೊಲೀಸರು ಸೂಕ್ತ ಭದ್ರತೆ ಹಾಗೂ ಅಗತ್ಯ ಕ್ರಮವಹಿಸಬೇಕು. ಕಾನೂನು ಸುವ್ಯವಸ್ಥೆ ಉಲ್ಲಂಘಿಸಿದರೆ ಕಠಿಣ ಕ್ರಮಕೈಗೊಳ್ಳಲು ಪೊಲೀಸರು ಅವಕಾಶವಿದೆ ಎಂದು ಪೀಠ ಸ್ಪಷ್ಟಪಡಿಸಿದೆ.




# ಶರಾವತಿ ಪಂಪ್ಡ್ ಸ್ಟೋರೇಜ್‌ಗೆ ಒಪ್ಪಿಗೆ ಇಲ್ಲ

### ಕೇಂದ್ರ ಅರಣ್ಯ ಪರಿಸರ ಸಚಿವ ಭೂಪೇಂದ್ರ ಯಾದವ್ ಸ್ಪಷ್ಟನೆ

• ಉದಯವಾಹಿನಿ, ಶಿವಮೊಗ್ಗ

ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಗೆ ಕೇಂದ್ರ ವನ್ಯಜೀವಿ ಮಂಡಳಿ ಒಪ್ಪಿಗೆ ನೀಡಿಲ್ಲ, ಬೇಡ್ತಿ, ಅಘನಾಶಿನಿ ನದಿ ತಿರುವು ಯೋಜನೆಗೆ ಸಂಬಂಧಿಸಿದಂತೆ ಯಾವುದೇ ಅರಣ್ಯ ಪ್ರಸ್ತಾವನೆ ಬಂದಿಲ್ಲ ಎಂದು ಕೇಂದ್ರ ಅರಣ್ಯ ಮತ್ತು ಪರಿಸರ ಸಚಿವ ಭೂಪೇಂದ್ರ ಯಾದವ್ ತಿಳಿಸಿದ್ದಾರೆಂದು ವೃಕ್ಷಲಕ್ಷ ಆಂದೋಲನ ಹಾಗೂ ಪಶ್ಚಿಮಘಟ್ಟ ಉಳಿಸಿ ಆಂದೋಲನ ನಿಯೋಗ ಹೇಳಿದೆ. ವೃಕ್ಷಲಕ್ಷ ಆಂದೋಲನ, ಬೇಡ್ತಿ ಸಮಿತಿ ಮತ್ತು ಪಶ್ಚಿಮ ಘಟ್ಟ ಉಳಿಸಿ ಆಂದೋಲನದ ನಿಯೋಗ ಫೆ.9 ಮತ್ತು 10 ರಂದು ಹೊಸದಿಲ್ಲಿಯಲ್ಲಿ ಅರಣ್ಯ ಮತ್ತು ಪರಿಸರ ಸಚಿವ ಹಾಗೂ ಸಚಿವಾಲಯದ ಉನ್ನತಾಧಿಕಾರಿಗಳನ್ನು ಭೇಟಿ ಮಾಡಿದ ಸಂದರ್ಭ ನಿಯೋಗಕ್ಕೆ ಸಚಿವರು ಈ ಸ್ಪಷ್ಟನೆ ನೀಡಿದ್ದಾರೆ ಎಂದು ನಿಯೋಗದ ಮುಖಂಡರು ತಿಳಿಸಿದ್ದಾರೆ. ನಿಯೋಗವು ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆ, ಬೇಡ್ತಿ, ಅಘನಾಶಿನಿ ನದಿ ತಿರುವು ಯೋಜನೆಗಳಿಗೆ ಅರಣ್ಯ ಪರಿಸರ ಅನುಮತಿ ನೀಡಬಾರದು ಎಂದು ಆಗ್ರಹಿಸಿತು. ಈ ಸಂದರ್ಭದಲ್ಲಿ ಸಚಿವ ಭೂಪೇಂದ್ರ ಯಾದವ್ ಅವರು, ಶರಾವತಿ, ಕಾವೇರಿ, ಬೇಡ್ತಿ, ಅಘನಾಶಿನಿ, ಕಾಳಿ ಕಣಿವೆಗಳ ಅರಣ್ಯ, ಜೀವವೈವಿಧ್ಯ ಅತಿ ಅಮೂಲ್ಯ.

ಹೀಗಾಗಿ ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಗೆ ವನ್ಯಜೀವಿ ಮಂಡಳಿಯಿಂದ ಒಪ್ಪಿಗೆ ನೀಡಿಲ್ಲ ಹಾಗೂ ಬೇಡ್ತಿ, ಅಘನಾಶಿನಿ ನದಿ ತಿರುವು ಯೋಜನೆಗೆ ಸಂಬಂಧಿಸಿದಂತೆ ಯಾವುದೇ ಅರಣ್ಯ ಪ್ರಸ್ತಾವನೆ ನಮ್ಮ ಬಳಿಗೆ ಬಂದಿಲ್ಲ ಎಂದು ಸ್ಪಷ್ಟಪಡಿಸಿದರು.

ನಿಯೋಗದಲ್ಲಿ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ, ಮೀನುಗಾರಿಕಾ ಸಚಿವ ಮಂಕಾಳು ವೈದ್ಯ, ಶಾಸಕರಾದ ಭೀಮಣ್ಣ ನಾಯ್ಕ, ಶಿವರಾಮ ಹೆಬ್ಬಾರ, ಶಾಂತಾರಾಂ ಸಿದ್ಧಿ, ವೃಕ್ಷಲಕ್ಷ ಆಂದೋಲನದ ಅಧ್ಯಕ್ಷ ಅನಂತ ಹೆಗಡೆ ಆಶೀಸರ, ವನ್ಯಜೀವಿ ತಜ್ಞ ಡಾ. ಬಾಲಚಂದ್ರ ಸಾಯಿಮನೆ, ಬೇಡ್ತಿ ಸಮಿತಿ ಸಂಚಾಲಕ ನಾರಾಯಣ ಗಡೀಕೈ ಮತ್ತಿತರರು ಇದ್ದರು.


ಉದಯವಾಹಿನಿ ಚಿತ್ರ

- ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಗೆ ಕೇಂದ್ರ ವನ್ಯಜೀವಿ ಮಂಡಳಿ ಒಪ್ಪಿಗೆ ನೀಡಿಲ್ಲ
- ಶರಾವತಿ, ಕಾವೇರಿ, ಬೇಡ್ತಿ, ಅಘನಾಶಿನಿ, ಕಾಳಿ ಕಣಿವೆಗಳ ಅರಣ್ಯ, ಜೀವವೈವಿಧ್ಯ ಅತಿ ಅಮೂಲ್ಯ
- ಹೀಗಾಗಿ ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಗೆ ವನ್ಯಜೀವಿ ಮಂಡಳಿಯಿಂದ ಒಪ್ಪಿಗೆ ನೀಡಿಲ್ಲ



**ವನ್ಯಜೀವಿ ಮಂಡಳಿ ಒಪ್ಪಿಗೆ ನೀಡಿಲ್ಲ**

ಭಾರೀ ವಿರೋಧಕ್ಕೆ ಕಾರಣವಾಗಿದ್ದ ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಗೆ ಕೇಂದ್ರ ವನ್ಯಜೀವಿ ಮಂಡಳಿ ಒಪ್ಪಿಗೆ ನೀಡಿಲ್ಲ ಎಂದು ಕೇಂದ್ರ ಅರಣ್ಯ ಮತ್ತು ಪರಿಸರ ಸಚಿವ ಭೂಪೇಂದ್ರ ಯಾದವ್ ಸ್ಪಷ್ಟಪಡಿಸಿದ್ದಾರೆ. ಶರಾವತಿ, ಕಾವೇರಿ, ಬೇಡ್ತಿ, ಅಘನಾಶಿನಿ, ಕಾಳಿ ಕಣಿವೆಗಳ ಅರಣ್ಯ, ಜೀವವೈವಿಧ್ಯ ಅತಿ ಅಮೂಲ್ಯ. ಹೀಗಾಗಿ ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಗೆ ವನ್ಯಜೀವಿ ಮಂಡಳಿಯಿಂದ ಒಪ್ಪಿಗೆ ನೀಡಿಲ್ಲ ಎನ್ನಲಾಗಿದೆ.

**ಪಂಪ್ಡ್ ಸ್ಟೋರೇಜ್: ಪ್ರಸ್ತಾವನೆ ಬಂದಿಲ್ಲ;** ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವ ಭೂಪೇಂದ್ರ ಯಾದವ ಅವರನ್ನು ಭೇಟಿಯಾದ ಸಂದರ್ಭದಲ್ಲಿ, ಪಶ್ಚಿಮ ಘಟ್ಟಗಳ ಶ್ರೀಮಂತ ಪರಿಸರವನ್ನು ನಮ್ಮ ಆತ್ಮಸಾಕ್ಷಿಯಿಂದ ರಕ್ಷಿಸೋಣ. ಪಶ್ಚಿಮ ಘಟ್ಟಗಳನ್ನು ಬೇರೆಲ್ಲಿಯೂ ಕಾಣಲು ಸಾಧ್ಯವಿಲ್ಲ. ಪಶ್ಚಿಮ ಘಟ್ಟಗಳು ಎಲ್ಲಾ ನದಿಗಳ ಮೂಲ. ಹಿಮಾಲಯದ ನಂತರ, ಅತ್ಯುನ್ನತ ಆಧ್ಯಾತ್ಮಿಕ ತರಂಗ ಹೊಂದಿರುವ ತಾಣ. ನಮ್ಮ ಯಾವುದೇ ಪರಿಹಾರಗಳು ಪ್ರಕೃತಿ ಆಧಾರಿತವಾಗಿರಬೇಕು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆ ಕುರಿತು ತಮ್ಮ ಮಂತ್ರಾಲಯಕ್ಕೆ ಈವರೆಗೆ ಯಾವುದೇ ಪ್ರಸ್ತಾವನೆ ಬಂದಿಲ್ಲ, ಅದು ನಮ್ಮ ಇಲಾಖೆಗೆ ಬಂದಾಗ ಖಂಡಿತಾ ತಾವು ತಿಳಿಸಿರುವ ಅಂಶಗಳನ್ನು ಪರಿಗಣಿಸುತ್ತೇವೆ ಎಂದರು.

## ಮಿನಿ ನ್ಯೂಸ್

### ಆರ್ಥಿಕ ಸಾಕ್ಷರತಾ ಸಪ್ತಾಹಕ್ಕೆ ಚಾಲನೆ



ಉದಯವಾಹಿನಿ ಚಿತ್ರ

• ಉದಯವಾಹಿನಿ, ಚಿತ್ರದುರ್ಗ

ನಗರದ ಜಿಲ್ಲಾ ಪಂಚಾಯಿತಿ ನಡೆದ ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯತ್, ಲೀಡ್ ಬ್ಯಾಂಕ್ ವತಿಯಿಂದ ಹಮ್ಮಿಕೊಳ್ಳಲಾದ ಜಿಲ್ಲಾದ್ಯಂತ ನಡೆಯಲಿರುವ ಆರ್ಥಿಕ ಸಾಕ್ಷರತಾ ಸಪ್ತಾಹಕ್ಕೆ ಜಿ.ಪಂ.ಸಿಇಓ ಡಾ.ಆಕಾಶ್ ಎಸ್. ಅವರು ಸಪ್ತಾಹದ ಪೋಸ್ಟರ್ ಅನಾವರಣಗೊಳಿಸುವ ಮೂಲಕ ಈ ಅಭಿಯಾನಕ್ಕೆ ಚಾಲನೆ ನೀಡಿದರು.

ಆರ್ಥಿಕ ವ್ಯವಹಾರಗಳಲ್ಲಿ ಕೆವೈಸಿ ಅಪ್‌ಡೇಟ್ ಮಾಡುವುದು ಬಹಳ ಮುಖ್ಯ. ಬ್ಯಾಂಕ್ ಖಾತೆಗಳಲ್ಲಿ ಇ-ಕೆವೈಸಿ ಮತ್ತು ಸಿ-ಕೆವೈಸಿ ಮಾಡುವ ವಿಧಾನಗಳು ಹಾಗೂ ಇವುಗಳಿಂದಾಗುವ ಅನುಕೂಲಗಳ ಬಗ್ಗೆ ಸಾರ್ವಜನಿಕರು ಅರಿವು ಹೊಂದಿರಬೇಕು. ಆರ್ಥಿಕ ಸಾಕ್ಷರತಾ ಸಪ್ತಾಹದಲ್ಲಿ ಸಾರ್ವಜನಿಕರಿಗೆ ಈ ಕುರಿತು ಜಾಗೃತಿ ಮೂಡಿಸಿ, ಸಪ್ತಾಹವನ್ನು ಯಶಸ್ವಿಗೊಳಿಸುವಂತೆ ಸಿಇಓ ಡಾ.ಆಕಾಶ್.ಸಿ ಕರೆ ನೀಡಿದರು. ಲೀಡ್ ಬ್ಯಾಂಕ್ ವ್ಯವಸ್ಥಾಪಕ ರಾಘವೇಂದ್ರ, ಎಂ., ಆರ್‌ಬಿಐ ರೀಜನಲ್ ಮ್ಯಾನೇಜರ್ ಜಗನ್ನಾಥ್, ಕೆನರಾ ಬ್ಯಾಂಕ್ ಮುಖ್ಯ ವ್ಯವಸ್ಥಾಪಕ ರಣವೀರ್, ಎಸ್‌ಬಿಐ ವ್ಯವಸ್ಥಾಪಕ ಮಹೇಶ್ವರಪ್ಪ, ಆರ್ಥಿಕ ಸಾಕ್ಷರತಾ ಕೇಂದ್ರ, ಸಲಹೆಗಾರ ತಿಪ್ಪೇಸ್ವಾಮಿ ಸೇರಿದಂತೆ ಜಿಲ್ಲೆಯ ವಿವಿಧ ಬ್ಯಾಂಕ್‌ಗಳ ಮುಖ್ಯಸ್ಥರು ಹಾಗೂ ಅಧಿಕಾರಿಗಳು ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

### ಮೂರ್ಛರೋಗದ ಬಗ್ಗೆ ಜಾಗೃತಿ ಅಗತ್ಯ: ಡಾ.ಅರ್ಚನಾ ಕುಲಕರ್ಣಿ


• ಉದಯವಾಹಿನಿ, ವಿಜಯಪುರ

ಅಪಸ್ಮಾರ, ಮೂರ್ಛರೋಗ ಕುರಿತು ಸಮಾಜದಲ್ಲಿ ಇರುವ ಮೂಢನಂಬಿಕೆ, ತಪ್ಪು ಕಲ್ಪನೆಗಳನ್ನು ದೂರ ಮಾಡುವುದು ಅತ್ಯಂತ ಅವಶ್ಯಕವಾಗಿದೆ ಎಂದು ಜಿಲ್ಲಾ ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯಾಧಿಕಾರಿ ಡಾ.ಅರ್ಚನಾ ಕುಲಕರ್ಣಿ ಹೇಳಿದರು. ಅಂತರರಾಷ್ಟ್ರೀಯ ಅಪಸ್ಮಾರ ಮೂರ್ಛರೋಗ ದಿನಾಚರಣೆ ಅಂಗವಾಗಿ ಸಿದ್ದೇಶ್ವರ ದೇವಸ್ಥಾನದಿಂದ ಜನಜಾಗೃತಿ ಜಾಥಾದ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು. ಮೂರ್ಛರೋಗದಿಂದ ಬಳಲುವ ವ್ಯಕ್ತಿಯು ಸಾಮಾನ್ಯ ವ್ಯಕ್ತಿಯಂತೆ ಜೀವನ ನಡೆಸಲು ಸಮಾಜದ ಪ್ರತಿಯೊಬ್ಬರ ಸಹಕಾರ ಅಗತ್ಯವಾಗಿದೆ ಎಂದರು.

### ಮೋದಿಯಲ್ಲ, ಸಿದ್ದರಾಮಯ್ಯ ಹೇಡಿ: ಜನಾರ್ದನ ರೆಡ್ಡಿ

• ಉದಯವಾಹಿನಿ, ಹೊಸಪೇಟೆ

ಮಾತೆತ್ತಿದ್ದರೆ ಹೈಕಮಾಂಡ್ ಎನ್ನುತ್ತ, ಕುರ್ಚಿಗೆ ಅಂಟಿಕೊಂಡಿರುವ ಸಿಎಂ ಸಿದ್ದರಾಮಯ್ಯ ಅವರು ಹೇಡಿಯೇ ಹೊರತು ಪ್ರಧಾನಿ ನರೇಂದ್ರ ಮೋದಿ ಅವರಲ್ಲ ಎಂದು ಶಾಸಕ ಜನಾರ್ದನ ರೆಡ್ಡಿ ಹೇಳಿದರು. ಸಿದ್ದರಾಮಯ್ಯ ಅವರ ಆಡಳಿತದಲ್ಲಿ ಅಭಿವೃದ್ಧಿ ಸ್ಥಗಿತಗೊಂಡಿದೆ.



ಅವರು ಮುಂದೆಯೂ ಸಿಎಂ ಹುದ್ದೆ ಬಿಡುವ ಲಕ್ಷಣ ಕಾಣುತ್ತಿಲ್ಲ. ರಾಜ್ಯ ಅಭಿವೃದ್ಧಿಯೂ ಆಗುವುದಿಲ್ಲ. ಇದೆಲ್ಲದರ ಪರಿಣಾಮ 2028ರಲ್ಲಿ ರಾಜ್ಯದಲ್ಲಿ ಬಿಜೆಪಿಯೇ ಅಧಿಕಾರಕ್ಕೆ ಬರಲಿದೆ ಎಂದು ಸುದ್ದಿಗಾರರಿಗೆ ತಿಳಿಸಿದರು.

ಬಳ್ಳಾರಿಯಲ್ಲಿ ಜನವರಿ 1ರಂದು ನಡೆದಿದ್ದ ಗಲಭೆ ಪ್ರಕರಣ ಕುರಿತು ಸಿಐಡಿ ತನಿಖೆ ಬಗ್ಗೆ ನನಗೆ ನಂಬಿಕೆ ಇಲ್ಲ. ಸಿಬಿಐ ತನಿಖೆಗೆ ವಹಿಸಬೇಕು ಎಂದು ಕೋರಿ 2 ದಿನದಲ್ಲಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸುವೆ ಎಂದು ಹೇಳಿದರು.

**ಗಂಗಾವತಿಯಿಂದಲೇ ಸ್ಪರ್ಧೆ:** ನನಗೆ ರಾಜಕೀಯ ಪುನರ್ಜನ್ಮ ನೀಡಿದ ಗಂಗಾವತಿ ಕ್ಷೇತ್ರವನ್ನು ಬಿಟ್ಟು ಕೊಡುವುದಿಲ್ಲ. ಗಂಗಾವತಿ ಕ್ಷೇತ್ರದ ಜೊತೆಗೆ ಹೊಸಪೇಟೆ ಮತ್ತು ಹಂಪಿಯನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಈಗಾಗಲೇ ಯೋಜನೆಯನ್ನು ಹಾಕಿಕೊಂಡಿದ್ದೇನೆ ಎಂದರು.

### ಶಿವಾಜಿ ಹಿಂದೂ ಸಮಾಜದ ಶ್ರೇಷ್ಠ ರತ್ನ

• ಉದಯವಾಹಿನಿ, ಬೀದರ್

ಕರ್ನಾಟಕ ಮರಾಠ ಸಮುದಾಯ ಅಭಿವೃದ್ಧಿ ನಿಗಮ ಬೆಂಗಳೂರು, ಕರ್ನಾಟಕ ಸಾಹಿತ್ಯ ಸಂಘ, ಕರ್ನಾಟಕ ಪಶು ವೈದ್ಯಕೀಯ, ಪಶು, ಮೀನುಗಾರಿಕೆಗಳ ವಿಜ್ಞಾನ ವಿಶ್ವವಿದ್ಯಾಲಯ ಬೀದರ್, ಕಾಲೇಜಿನ ಇತಿಹಾಸ ವಿಭಾಗದ ಸಂಯುಕ್ತಾಶ್ರಯದಲ್ಲಿ ನಗರದ ಕರ್ನಾಟಕ ಕಾಲೇಜಿನಲ್ಲಿ ಏರ್ಪಡಿಸಿದ್ದ ಯುವ ನಾಯಕತ್ವಕ್ಕೆ ಛತ್ರಪತಿ ಶಿವಾಜಿ ಮಹಾರಾಜರ ಜೀವನ ದರ್ಶನ ಕುರಿತ ಎರಡು ದಿನಗಳ ಬಹುಶಿಸ್ತೀಯ ರಾಷ್ಟ್ರೀಯ ವಿಚಾರ ಸಂಕಿರಣಕ್ಕೆ ಮಂಗಳವಾರ ವಿಧ್ಯುಕ್ತ ತೆರೆ ಬಿತ್ತು. ಸಮಾರೋಪದಲ್ಲಿ ಮಾತನಾಡಿದ ಕರ್ನಾಟಕ ರಾಷ್ಟ್ರೀಯ ಶಿಕ್ಷಣ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಸತೀಶ್ ಪಾಟೀಲ್, ಮಹಾರಾಷ್ಟ್ರದ ಶಿವನೇರಿ ಕೋಟೆಯಲ್ಲಿ ಜನಿಸಿದ ಶಿವಾಜಿ ಮಹಾರಾಜರು ಹಿಂದೂ ಸಮಾಜದ ಶ್ರೇಷ್ಠ, ಅನರ್ಘ್ಯ ರತ್ನ. ಅವರ ಆದರ್ಶಗಳನ್ನು ವಿದ್ಯಾರ್ಥಿಗಳು, ಪ್ರಾಧ್ಯಾಪಕರು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ನಾಯಕತ್ವದ ಗುಣ ಬೆಳೆಸಿಕೊಳ್ಳಬೇಕೆಂದು ತಿಳಿಸಿದರು.

### ತಹಶೀಲ್ದಾರರು ಟೈಟ್ ಮಾಡ್ಯಾರ. ರೊಕ್ಕ ಕೊಡ್ರಿ, ಇಲ್ಲಾಂದ್ರೆ, ಹಕ್ಕು ಪತ್ರ ರಿಜೆಕ್ಟ್

# ಮೌನಕ್ಕೆ ಜಾರಿದ ತಹಶೀಲ್ದಾರರು

• ಉದಯವಾಹಿನಿ, ಕಾರಟಗಿ

ತಾಲ್ಲೂಕಿನ ಬೇವಿನಹಾಳ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬಸವಣ್ಣ ಕ್ಯಾಂಪಿನ ಜನತಾ ಕಾಲೋನಿ ನೂತನ ಕಂದಾಯ ಗ್ರಾಮವಾಗಿ ಮಾರ್ಪಟ್ಟಿದ್ದು. ಕಂದಾಯ ಇಲಾಖೆ ಗ್ರಾಮದ ಜನಗಳಿಗೆ ಹಕ್ಕು ಪತ್ರ ನೀಡಲು ಮುಂದಾಗಿದೆ.

ಜನತಾ ಕಾಲೋನಿಯ ಇನ್ನು ಹಲವರಿಗೆ ಅದಿಕಾರಿಗಳು ಹಕ್ಕು ಪತ್ರ ನೀಡಲು ನಿಯಮಪಾಲನೆ ಮಾಡದೆ ನಿರ್ಲಕ್ಷ್ಯ ಧೋರಣೆ ಅನುಸರಿಸಿದ್ದಾರೆ, ಗ್ರಾಮ ಸಹಾಯಕ ಮುದುಕಪ್ಪ ಜನತಾ ಕಾಲೊನಿಯ ಮನೆ ಮನೆಗೆ ಹೋಗಿ ಹಕ್ಕು ಪತ್ರದ ಹೆಸರಲ್ಲಿ 1500 ನೂರು 2000 ಹಣ ವಸೂಲಿ ಮಾಡಿದ್ದಾರೆ ಎಂದು ಸಾರ್ವಜನಿಕವಾಗಿ ನೇರ ಆರೋಪ ಮಾಡಿದ್ದಾರೆ. ಮನೆಗಳ ಪರಿಶೀಲನೆ ಮಾಡಲು ಜನತಾ ಕಾಲೋನಿಗೆ ಭೇಟಿ ನೀಡಿದ ಕಂದಾಯ ನಿರೀಕ್ಷಕರ ಸಮ್ಮುಖದಲ್ಲಿಯೇ ಗ್ರಾಮ ಸಹಾಯಕ ಮುದುಕಪ್ಪನನ್ನು ತೀವ್ರ ತರಾಟೆಗೆ ತೆಗೆದುಕೊಂಡ ಘಟನೆ ನಡೆದಿದೆ.ಇನ್ನು ಗ್ರಾಮ ಸಹಾಯಕ ಹಣ ಕೇಳಿದನ್ನು ಗ್ರಾಮಸ್ಥರು ವಿಡಿಯೋ ಮಾಡಿಕೊಂಡಿದ್ದಾರೆ. ವಿಡಿಯೋದಲ್ಲಿ ಗ್ರಾಮ ಸಹಾಯಕ ಹೀಗೆ ಮಾತನಾಡಿದ್ದಾರೆ. ತಹಶೀಲ್ದಾರರು ಟೈಟ್ ಮಾಡಿ ಹೇಳಿದ್ರೂ ನೀವೇನು ಮಾಡುತ್ತಿರಿ ಎನ್ನುತ್ತಿದ್ದಾರೆ.


ಉದಯವಾಹಿನಿ ಚಿತ್ರ

**ಅಧಿಕಾರಿಗಳ ಹೆಸರಲ್ಲಿ ಹಣ ವಸೂಲಿ ?**

ಈ ಸಲ ಬಹಳಷ್ಟು ರಿಜೆಕ್ಟ್ ಆಗುತ್ತವೆ, ರೊಕ್ಕ ಕೊಡಲಾರದ್ದುವೂ ರಿಜೆಕ್ಟ್ ಆಗುತ್ತವೆ, ರೊಕ್ಕ ಕೊಡ್ರಿ ಎಂದು ಮಾತನಾಡಿದ ವಿಡಿಯೋದಲ್ಲಿ ಸಾರ್ವಜನಿಕರು 1500 ನೂರು ಕೊಟ್ಟಿರುವ ಬಗ್ಗೆ ಮಾತನಾಡಿದ್ದು ನೋಡಬಹುದು, ಹಾಗೂ ಮುದುಕಪ್ಪ ಹಣ ಕೇಳೋದು ಕಾಣುತ್ತದೆ, ಹೀಗಾಗಿ ಹಕ್ಕು ಪತ್ರ ಪಡೆಯುವ ಅರ್ಹತೆ ಇದ್ದರು ಹಣ ಕೊಡದ ಜನರನ್ನು ಪರಿಗಣಿಸಿಲ್ಲ. ಅಂಥವರನ್ನು ಫಲಾನುಭವಿಗಳ ಪಟ್ಟಿಯಿಂದ ಕೈ ಬಿಟ್ಟಿದ್ದಾರೆ ಎಂದು ಗಂಭೀರವಾಗಿ ಆರೋಪಿಸಲಾಗಿದೆ,

ನೂತನ ಕಂದಾಯ ಗ್ರಾಮ ಜನತಾ ಕಾಲೋನಿಯ ಗಡಿ ರೇಖೆ ಗುರುತಿಸಬೇಕು. ವಾಸ್ತವ್ಯದ ಹಕ್ಕು ಪತ್ರ ವಂಚಿತರಿಗೆ ಒಂದು ವಾರದೊಳಗೆ ಹಕ್ಕು ಪತ್ರ ವಿತರಿಸಬೇಕು. ಜನತಾ ಕಾಲೋನಿಯ ವಸತಿ ರಹಿತ ಜಾಗಗಳನ್ನು ಗುರುತಿಸಬೇಕು. ಗುರುತಿಸಿದ ವಸತಿ ರಹಿತ ಜಾಗಗಳನ್ನು ಕಂದಾಯ /ಗ್ರಾಮ ಪಂಚಾಯಿತಿ ವ್ಯಾಪ್ತಿಗೊಳಪಡಿಸಬೇಕು. ಗುರುತಿಸಿದ ವಸತಿ ರಹಿತ ಜಾಗಗಳನ್ನು ನಿವೇಶನ ರಹಿತರಿಗೆ ನೀಡಲು ನಿಯಮಾನುಸಾರ ಕ್ರಮ ಕೈಗೊಳ್ಳಬೇಕು.

ಜನತಾ ಕಾಲೋನಿಯ ಸರ್ವೇ ನಂಬರ್ 48ರಲ್ಲಿ ಈ ಹಿಂದೆ ಸರ್ಕಾರ ನಿರ್ಮಿಸಿ ಹಕ್ಕು ಪತ್ರ ನೀಡಿದ ಮನೆಗಳನ್ನು ಹಾಗೂ ಫಲಾನುಭವಿಗಳನ್ನು ಗುರುತಿಸಬೇಕು ಹಕ್ಕು ಪತ್ರ ನೀಡುವ ಹೆಸರಲ್ಲಿ ಜನಗಳಿಂದ ಹಣ ವಸೂಲಿ ಮಾಡಿರುವ ಬಗ್ಗೆ ಗ್ರಾಮ ಸಹಾಯಕರ ವಿರುದ್ಧ ಆರೋಪ ಬಂದಿದ್ದು ಪರಿಶೀಲಿಸಿ ಕೂಡಲೇ ಕ್ರಮ ಕೈಗೊಳ್ಳಬೇಕು. ಜನತಾ ಕಾಲೋನಿಯ ಖಾಲಿ ಜಾಗಗಳಲ್ಲಿ ಹೊಸದಾಗಿ ಮನೆ ನಿರ್ಮಿಸದಂತೆ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಲಾಗಿದೆ.

## ರಕ್ತಹೀನತೆ ತಡೆಗೆ ಜಂತುಹುಳು ಮಾತ್ರೆ ನೀಡಿ

• ಉದಯವಾಹಿನಿ, ಯಾದಗಿರಿ

ರಾಷ್ಟ್ರೀಯ ಜಂತುಹುಳು ನಿವಾರಣಾ ಕಾರ್ಯಕ್ರಮದಡಿ ಯಾವುದೇ ಅರ್ಹ ಮಕ್ಕಳು ಜಂತುನಿವಾರಕ ಮಾತ್ರೆ ಸೇವನೆಯಿಂದ ವಂಚಿತ ಆಗದಂತೆ ನೋಡಿಕೊಳ್ಳಬೇಕು ಎಂದು ಜಿಲ್ಲಾ ಪಂಚಾಯಿತಿ ಸಿಇಒ ಲವೀಶ್ ಒರಡಿಯಾ ಹೇಳಿದರು. ನಗರದ ಸ್ಟೇಷನ್ ಬಜಾರ್ ಪ್ರದೇಶದ ಸರ್ಕಾರಿ ಮಾದರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ಮಂಗಳವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಜಿಲ್ಲಾ ಆರ್‌ಸಿಎಚ್ ವಿಭಾಗ ಆಯೋಜಿಸಿದ್ದ ರಾಷ್ಟ್ರೀಯ ಜಂತುಹುಳು ನಿವಾರಣಾ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

1ರಿಂದ 19 ವರ್ಷ ಒಳಗಿನ ಎಲ್ಲಾ ಮಕ್ಕಳಿಗೆ ಜಂತುಹುಳು ನಿವಾರಣೆ ಮಾತ್ರೆಗಳನ್ನು ನೀಡಬೇಕು. ಮಕ್ಕಳಲ್ಲಿನ ರಕ್ತಹೀನತೆ, ಅಪೌಷ್ಟಿಕತೆ ನಿರ್ಮೂಲನೆ ಮಾಡುವಂತ ಇಂತಹ ಕಾರ್ಯಕ್ರಮಕ್ಕೆ ಆಶಾ, ಅಂಗನವಾಡಿ ಕಾರ್ಯಕರ್ತೆಯರು ಸೇರಿದಂತೆ ಪ್ರತಿಯೊಬ್ಬರು ಸಹಕರಿಸಬೇಕು ಎಂದರು. ಡಿಎಚ್‌ಒ ಡಾ.ಮಹೇಶ ಬಿರಾದರ ಮಾತನಾಡಿ, ಹೊಟ್ಟೆಯಲ್ಲಿ ಜಂತುಹುಳು ಇದ್ದರೆ ಮಕ್ಕಳ ದೈಹಿಕ ಮತ್ತು ಮಾನಸಿಕ ಬೆಳವಣಿಗೆಗೆ ತೊಂದರೆ ಆಗುತ್ತದೆ. ತಿಂದಂತಹ ಆಹಾರ ಮಕ್ಕಳ ಮೈಗೆ ಸಹ ಹತ್ತುವುದಿಲ್ಲ. ಮಕ್ಕಳಲ್ಲಿ ಮತ್ತು ಹದಿ ಹರೆಯದರಲ್ಲಿ ಕಂಡುಬರುವ ಜಂತುಭಾದೆಯನ್ನು ತಡೆದರೆ ಅವರ ಆರೋಗ್ಯದಲ್ಲಿ ಸುಧಾರಣೆ ಕಂಡುಬರುತ್ತದೆ ಎಂದು ಹೇಳಿದರು.


ಉದಯವಾಹಿನಿ ಚಿತ್ರ


ಜಿಲ್ಲೆಯಲ್ಲಿ 1ರಿಂದ 19 ವರ್ಷ ಒಳಗೆ 5.13 ಲಕ್ಷ ಮಕ್ಕಳಿದ್ದಾರೆ. ಇದರಲ್ಲಿ ಅಂಗನವಾಡಿ ಮಕ್ಕಳು 1.51 ಲಕ್ಷ, ಅಂಗನವಾಡಿಯಿಂದ ಹೊರಗುಳಿದ ಮಕ್ಕಳು 7,577 ಇದ್ದಾರೆ. ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಶಾಲೆಯಲ್ಲಿ 3.61 ಲಕ್ಷ ಮಕ್ಕಳು ಕಲಿಯುತ್ತಿದ್ದಾರೆ. 18,678 ಮಕ್ಕಳು ಪಿಯು ಹಾಗೂ ಐಟಿಐ ಮತ್ತು ತಾಂತ್ರಿಕ ಸಂಸ್ಥೆಗಳಲ್ಲಿ 1,956 ಮಕ್ಕಳು ವ್ಯಾಸಂಗ ಮಾಡುತ್ತಿದ್ದರೆ. ಪ್ರತಿ ಮಕ್ಕಳಿಗೆ ಮಾತ್ರೆ ನುಂಗಿಸಲು ಖಾಸಗಿ ಶಾಲೆಗಳೂ ಸಹಕರಿಸಬೇಕಿದೆ' ಎಂದು ಹೇಳಿದರು. ಜಿಲ್ಲಾ ಆರ್‌ಸಿಎಚ್‌ಒ ಡಾ.ಕೆ. ಮಲ್ಲಪ್ಪ, 'ಶೌಚಾಲಯಕ್ಕೆ ಹೋಗಿ ಬಂದ ಬಳಿಕ, ಊಟಕ್ಕೂ ಮುನ್ನ ಕೈಗಳನ್ನು ತೊಳೆದುಕೊಳ್ಳಬೇಕು. ಸ್ವಚ್ಛತೆಗೆ ಸದಾ ಆದ್ಯತೆಯೂ ಕೊಟ್ಟರೆ ಜಂತುಹುಳು ಬಾಧೆ ಆರಂಭಿಕ ಹಂತದಲ್ಲಿ ತಡೆಯಬಹುದು' ಎಂದರು.

# ಅಗಸರ ಹಳ್ಳ ಸೇತುವೆ: ಬ್ಯಾರೇಜ್ ನಿರ್ಮಾಣಕ್ಕೆ ಅನುಮೋದನೆ

• ಉದಯವಾಹಿನಿ, ಆಲಮಟ್ಟಿ

ಬೇನಾಳ ಆರ್.ಎಸ್. ಮತ್ತು ಬೇನಾಳ ಎನ್.ಎಚ್. ಮಧ್ಯೆ ಈಗಿರುವ ಅಗಸರಹಳ್ಳ ಸೇತುವೆಗೆ ಬ್ಯಾರೇಜ್ ನಿರ್ಮಾಣಕ್ಕೆ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ಮುಂದಾಗಿದೆ. ನೀರಿನಿಂದ ಈ ಅವಳಿ ಗ್ರಾಮಗಳು ಜಲಾವೃತಗೊಂಡು ಒಂದೆಡೆ ಪುನರ್ವಸತಿಗೊಂಡರೂ ಬೇಸಿಗೆಯಲ್ಲಿ ಜನ, ಜಾನುವಾರು, ಜಮೀನುಗಳಿಗೆ ನೀರಿಲ್ಲದೆ ಪರದಾಡುತ್ತಿದ್ದರು.

ಬೇನಾಳ ಆರ್.ಎಸ್.ಹತ್ತಿರ ಹರಿಯುವ ಪಾರ್ವತಿ ಕಟ್ಟೆ ಹಳ್ಳದ ಮಧ್ಯ ಆಲಮಟ್ಟಿ ಜಲಾಶಯದ ಹಿನ್ನೀರು ಆವರಿಸಿ, ಸುಮಾರು ಆರು ತಿಂಗಳ ಕಾಲ ಈ ಸೇತುವೆ ಹಿಂಭಾಗದ ಪ್ರದೇಶದಲ್ಲಿ ಹಿನ್ನೀರು ಸಂಗ್ರಹವಾಗಿರುತ್ತದೆ. ಆದರೆ, ಫೆಬ್ರುವರಿಯಲ್ಲಿ ಈ ನೀರು ಖಾಲಿಯಾಗುತ್ತಿತ್ತು. ಇದರಿಂದ ಜನ ಜಾನುವಾರುಗಳಿಗೆ ಕುಡಿಯುವ ನೀರಿನ ತೊಂದರೆ ಉಂಟಾಗುತ್ತಿತ್ತು. ಅಲ್ಲದೆ, ಸೇತುವೆ ಎರಡು ಬದಿಗೆ ಜಮೀನು ಹೊಂದಿರುವ ರೈತರ ಬೆಳೆಗಳಿಗೆ ನೀರಿಲ್ಲದೆ ಪೈರು ಒಣಗಿ ಹೋಗುತಿತ್ತು.


ಉದಯವಾಹಿನಿ ಚಿತ್ರ

ರೈತರು ಕಳೆದ ಒಂದು ದಶಕದಿಂದಲೂ ಈ ಸೇತುವೆಯ ಬಾಕ್ಸ್ ಕಲ್ವರ್ಟ್‌ಗಳಿಗೆ ಗೇಟ್ ಅಳವಡಿಸಿ ಬ್ಯಾರೇಜ್ ನಿರ್ಮಿಸಲು ಸಚಿವ ಶಿವಾನಂದ ಪಾಟೀಲರಿಗೆ ಮನವಿ ಸಲ್ಲಿಸುತ್ತಾ ಬಂದಿದ್ದರು. ಕೃಷ್ಣಾ ಭಾಗ್ಯ ಜಲನಿಗಮಕ್ಕೆ ಬ್ಯಾರೇಜ್ ನಿರ್ಮಿಸಲು ಪ್ರಸ್ತಾವನೆ ಸಲ್ಲಿಕೆಯಾದರೂ ಅನುದಾನದ ಕೊರತೆಯ ಕಾರಣ ಸಾಧ್ಯವಾಗಿರಲಿಲ್ಲ.

2012ರಲ್ಲಿ ಈ ಎರಡು ಪುನರ್ವಸತಿ ಕೇಂದ್ರಗಳನ್ನು ಸಂಪರ್ಕಿಸುವ ಉದ್ದೇಶದಿಂದ ಅಗಸರಹಳ್ಳಕ್ಕೆ ಸುಮಾರು 8.5 ಕೋಟಿ ವೆಚ್ಚದಲ್ಲಿ ಬಾಕ್ಸ್ ಕಲ್ವರ್ಟ್ ಮಾದರಿಯ ಸೇತುವೆ ನಿರ್ಮಿಸಲಾಗಿತ್ತು. ಸೇತುವೆಗೆ ಗೇಟ್ ಅಳವಡಿಸಿದರೆ, ಜಲಾಶಯದ ಹಿನ್ನೀರು ಸೇತುವೆಯ ಹಿಂಭಾಗ ನಿಲ್ಲುತ್ತದೆ. ಇದರಿಂದ ಬೇಸಿಗೆಯಲ್ಲಿ ಜನ, ಜಾನುವಾರುಗಳು ಹಾಗೂ ಜಮೀನಿಗೆ ನೀರುಣಿಸಲು ಸಾಧ್ಯವಾಗಲಿದೆ. ಇದರಿಂದ ಅಂತರ್ಜಲ ಮಟ್ಟವೂ ಹೆಚ್ಚಾಗುತ್ತದೆ. ಜತೆಗೆ ಬೇಸಿಗೆಯಲ್ಲಿ ಬೇನಾಳ ಅವಳಿ ಗ್ರಾಮಗಳು, ವಂದಾಲ, ಗೋನಾಳ ಗ್ರಾಮಗಳ ಜಮೀನಿಗೆ ಬೇಸಿಗೆಯಲ್ಲಿ ನೀರು ಪೂರೈಕೆಗೆ ಸಹಕಾರಿಯಾಗಲಿದೆ. ಇದರ ಜತೆ ಬಾಕ್ಸ್ ಕಲ್ವರ್ಟ್‌ಗಳ ಎರಡೂ ಬದಿ ಕಟ್ಟಲಾಗಿದ್ದ ರಕ್ಷಣಾ ಗೋಡೆಯೂ ರಭಸದ ನೀರಿಗೆ ಕೊಚ್ಚಿದೆ. ಅದನ್ನು ನಿರ್ಮಿಸಬೇಕೆಂದು ಗ್ರಾಮಸ್ಥರು ಮನವಿ ಮಾಡಿದ್ದಾರೆ.

**ಆಡಳಿತಾತ್ಮಕ ಅನುಮೋದನೆ**

ಸ್ಥಳೀಯ ಶಾಸಕರೂ ಆದ ಸಚಿವ ಶಿವಾನಂದ ಪಾಟೀಲರ ಇಚ್ಛಾಶಕ್ತಿಯ ಕಾರಣ, ಈ ಪ್ರಸ್ತಾವನೆಯನ್ನು ಸಣ್ಣ ನೀರಾವರಿ ಇಲಾಖೆಗೆ ಕಳುಹಿಸಿ, ಅಲ್ಲಿಂದ ಅನುಮೋದನೆ ಪಡೆದಿದ್ದಾರೆ. ಅಗಸರ ಹಳ್ಳ ಸೇತುವೆಗೆ ಬ್ಯಾರೇಜ್ ನಿರ್ಮಿಸಲು 1.80 ಕೋಟಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

### ದಾವಣಗೆರೆ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ವರ್ಗಾವಣೆ ಕಾರಣ ಬಿಚ್ಚಿಟ್ಟ ಬಿಜೆಪಿ

# ದಕ್ಷ ಅಧಿಕಾರಿಗಳನ್ನು ಕಂಡರೆ ನಿಮಗೇಕೆ ಈ ಪರಿ ದ್ವೇಷ?

• ಉದಯವಾಹಿನಿ, ದಾವಣಗೆರೆ

ದಾವಣಗೆರೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ಅವರನ್ನು ಕರ್ನಾಟಕ ಸರ್ಕಾರ ಏಕಾಏಕಿ ವರ್ಗಾವಣೆ ಮಾಡಿದೆ. ಇದಕ್ಕೆ ಸಾರ್ವಜನಿಕರಿಂದಲೂ ವಿರೋಧ ವ್ಯಕ್ತವಾಗಿದ್ದು, ವಿರೋಧ ಪಕ್ಷವಾದ ಬಿಜೆಪಿಯು ಕಿಡಿಕಾರಿದೆ. ಮಾತ್ರವಲ್ಲದೇ, ಜಿಲ್ಲಾ ಉಸ್ತುವಾರಿ ಸಚಿವರ ಉಲ್ಲೇಖಿಸಿ ವರ್ಗಾವಣೆಗೆ ಕಾರಣಕೊಟ್ಟಿದೆ.

ಈ ಬಗ್ಗೆ ಟ್ವೀಟ್ ಮಾಡಿರುವ ಕರ್ನಾಟಕ ಬಿಜೆಪಿ, ವರ್ಗಾವಣೆ ಮಾಡಿರುವ ಕರ್ನಾಟಕ ಸರ್ಕಾರವು ಶೇಖರ್ ತೆಕ್ಕಣ್ಣವರ್ ಅವರನ್ನು ನೇಮಕ ಮಾಡಿದೆ. ಸದ್ಯ ಉಮಾ ದಕ್ಷ ಅಧಿಕಾರಿಗಳಿಗೆ ಅಮಾನತು ಹಾಗೂ ವರ್ಗಾವಣೆಯ ಶಿಕ್ಷೆ ನೀಡುವುದೇ ಕಾಂಗ್ರೆಸ್ ಸರ್ಕಾರದ ಪ್ರಮುಖ ಅಜೆಂಡಾ ಎಂದು ಆಕ್ರೋಶ ವ್ಯಕ್ತಪಡಿಸಿದೆ.

**ವರ್ಗಾವಣೆಗೆ ಹಿಂದಿನ ಕಾರಣ ಬಿಚ್ಚಿಟ್ಟ ಬಿಜೆಪಿ:** ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಕಾಲ್ತುಳಿತಕ್ಕೆ ದಕ್ಷ ಅಧಿಕಾರಿ ದಯಾನಂದ್ ಅವರನ್ನು ಅಮಾನತು ಮಾಡಿದ ರೀತಿಯಲ್ಲೇ, ಸಚಿವ ಎಸ್‌ಎಸ್ ಮಲ್ಲಿಕಾರ್ಜುನ್ ಆಪ್ತರಾದ ದಾವಣಗೆರೆಯ ಡ್ರಗ್ಸ್ ದಂಧೆಕೋರರನ್ನು ಹೆಡೆಮುರಿ ಕಟ್ಟಿದರು ಎಂಬ ಕಾರಣಕ್ಕೆ ದಕ್ಷ ಅಧಿಕಾರಿ ಎಸ್.ಪಿ ಉಮಾ ಪ್ರಶಾಂತ್ ಅವರನ್ನು ಯಾವುದೇ ಸ್ಥಳ ತೋರಿಸದೆ ವರ್ಗಾವಣೆ ಮಾಡಿದ್ದಾರೆ ಎಂದು ಬಿಜೆಪಿ ಆರೋಪ ಮಾಡಿದೆ. ಸಿಎಂ ಸಿದ್ದರಾಮಯ್ಯ ಅವರೆ, ಡಿಸಿಎಂ ಡಿಕೆ ಶಿವಕುಮಾರ್ ಅವರೆ, ಗೃಹ ಸಚಿವ ಡಾ ಜಿ ಪರಮೇಶ್ವರ್ ಅವರೆ, ದಕ್ಷ ಅಧಿಕಾರಿಗಳನ್ನು ಕಂಡರೆ ನಿಮಗೇಕೆ ಈ ಪರಿ ದ್ವೇಷ? ಎಂದು ಬಿಜೆಪಿ ಪ್ರಶ್ನೆ ಮಾಡಿದೆ.

**ಏನಿದು ಡ್ರಗ್ಸ್ ಜಾಲ ಪತ್ತೆ ಕಾರ್ಯಾಚರಣೆ:** ಡಿಸೆಂಬರ್ ಕೊನೆಯಲ್ಲಿ ದಾವಣಗೆರೆಯಲ್ಲಿ ಡ್ರಗ್ಸ್ ಜಾಲದ ಮೇಲೆ ಎಸ್ಪಿ ಉಮಾ ಪ್ರಶಾಂತ್ ನೇತೃತ್ವದ ತಂಡ ದಾಳಿ ನಡೆಸಿತ್ತು. ಸಚಿವ ಮಲ್ಲಿಕಾರ್ಜುನ ಆಪ್ತ ಎನ್ನಲಾದ ವೇದಮೂರ್ತಿ ವಸತಿ ಸಚಿವ ಜಮೀರ್ ಅಹ್ಮದ್ ಆಪ್ತ ಎನ್ನಲಾದ ಅನ್ವರ್ ಬಾಷಾ ಸೇರಿ ಮತ್ತಿಬ್ಬರು ಬಂಧನಕ್ಕೊಳಗಾಗಿದ್ದರು.



ಉದಯವಾಹಿನಿ ಚಿತ್ರ

ಈ ಕಾರ್ಯಾಚರಣೆಯಲ್ಲಿ 290 ಗ್ರಾಂ ಎಂಡಿಎಂಎ ಡ್ರಗ್ಸ್ ಮತ್ತು ಲಕ್ಷಾಂತರ ರೂ. ಮೌಲ್ಯದ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿತ್ತು. ಸಚಿವರ ಆಪ್ತರು ಈ ಮಾದಕ ದ್ರವ್ಯಗಳ ಜಾಲದಲ್ಲಿರುವುದು ಸರ್ಕಾರಕ್ಕೆ ಮುಜುಗರ ತಂದಿತ್ತು. ಈ ಪ್ರಕರಣವನ್ನು ಯಶಸ್ವಿಯಾಗಿ ಬಯಲಿಗೆಳೆದ ಎಸ್‌ಪಿ ಉಮಾ ಪ್ರಶಾಂತ್ ಅವರ ಕಾರ್ಯವೈಖರಿಗೆ ಸಾರ್ವಜನಿಕ ವಲಯದಲ್ಲಿ ವ್ಯಾಪಕ ಮೆಚ್ಚುಗೆ ವ್ಯಕ್ತವಾಗಿತ್ತು. 'ಲೇಡಿ ಸಿಂಗಂ' ಎಂದೇ ಖ್ಯಾತರಾಗಿರುವ ಉಮಾ ಪ್ರಶಾಂತ್ ಅವರ ಧೈರ್ಯ ಮತ್ತು ಕರ್ತವ್ಯ ನಿಷ್ಠೆಯನ್ನು ಎಲ್ಲರೂ ಶ್ಲಾಘಿಸಿದ್ದರು.

**ದಕ್ಷ ಅಧಿಕಾರಿಗಳಿಗೆ ವರ್ಗಾವಣೆ ಶಿಕ್ಷೆ**

ದಾವಣಗೆರೆ ಎಸ್‌ಪಿ ಬದಲಾವಣೆ ವಿಚಾರವು ರಾಜಕೀಯ ತಿರುವು ಪಡೆದುಕೊಂಡಿದೆ. ಎಸ್‌ಎಸ್ ಮಲ್ಲಿಕಾರ್ಜುನ್ ಆಪ್ತನ ಬಂಧನವೇ ಉಮಾ ಪ್ರಶಾಂತ್ ಅವರ ವರ್ಗಾವಣೆಗೆ ಕಾರಣವಾಗಿದೆ ಎಂದು ಬಿಜೆಪಿ ಆರೋಪ ಮಾಡಿದೆ. ದಕ್ಷ ಅಧಿಕಾರಿಗಳಿಗೆ ವರ್ಗಾವಣೆ ಶಿಕ್ಷೆ ಎಂದಿರುವ ಬಿಜೆಪಿ ಈ ವಿಚಾರವಾಗಿ ಸರ್ಕಾರದ ವಿರುದ್ಧ ಕಿಡಿಕಾರಿದೆ.

**ಎರಡೂವರೆ ವರ್ಷಗಳಿಂದ ಜಿಲ್ಲೆಯ ಜವಾಬ್ದಾರಿ**

2023ಆಗಸ್ಟ್‌ನಲ್ಲಿ ದಾವಣಗೆರೆಗೆ ಬಂದಿದ್ದ ಉಮಾ ಪ್ರಶಾಂತ್ ಅವರು ಕಳೆದ ಎರಡೂವರೆ ವರ್ಷಗಳಿಂದ ಜಿಲ್ಲೆಯ ಭದ್ರತಾ ವ್ಯವಸ್ಥೆ ನಿಭಾಹಿಸಿದ್ದರು. ಏಕಾಏಕಿ ಅವರನ್ನು ಜಿಲ್ಲೆಯಿಂದ ವರ್ಗಾವಣೆ ಮಾಡಿದ್ದು, ಅವರಿಗೆ ಸೂಕ್ತ ಸ್ಥಳ ನಿಯೋಜನೆ ಮಾಡದೇ ಕಾಯ್ದಿರಿಸಿರುವ ದಾವಣಗೆರೆ ಜನರಿಗೆ ಬೇಸರ ತರಿಸಿದೆ.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಮಧ್ಯಾಹ್ನ | 01:30 ರಿಂದ 03:00 |
| ಗುಳಿಕ ಕಾಲ | ಬೆಳಿಗ್ಗೆ | 09:00 ರಿಂದ 10:30 |
| ಯಮಗಂಡ ಕಾಲ | ಬೆಳಿಗ್ಗೆ | 06:00 ರಿಂದ 07:30 |

**ಮೇಷ** ಕುಟುಂಬದ ಜೊತೆ ನಿಮ್ಮ ಸಮಯವನ್ನು ವ್ಯಯಿಸಿ ಪ್ರತ್ಯೇಕತೆ, ಒಂಟಿತನದ ಭಾವನೆಯನ್ನು ತೊಡೆದುಹಾಕಿ. ದೀರ್ಘ ಕಾಲ ಬಾಕಿಯಿದ್ದ ಬಾಕಿಗಳು ಕೊನೆಗೂ ದೊರಕುತ್ತವೆ. ಮನೆಯ ಕೆಲಸ ನಿಮ್ಮನ್ನು ಯಾವಾಗಲೂ ವ್ಯಸ್ತವಾಗಿರಿಸುತ್ತದೆ. ಪಾರಿತೋಷಕಗಳೂ ಸಹ ಇಂದು ಹರ್ಷಚಿತ್ತದ ಕ್ಷಣಗಳನ್ನು ತರದಿರಬಹುದು.

**ವೃಷಭ** ಅನಗತ್ಯ ಆಲೋಚನೆಗಳು ನಿಮ್ಮ ಮನಸ್ಸನ್ನು ಆವರಿಸಬಹುದು. ಖಾಲಿ ಮೆದುಳು ದೆವ್ವಗಳ ಕಾರ್ಖಾನೆಯಾದ್ದರಿಂದ ದೈಹಿಕ ವ್ಯಾಯಾಮದಲ್ಲಿ ನಿಮ್ಮನ್ನು ತೊಡಗಿಸಿಕೊಳ್ಳಲು ಪ್ರಯತ್ನಿಸಿ. ಇಂದು ನಿಮಗೆ ನೀಡಲಾದ ಹೂಡಿಕೆಯ ಯೋಜನೆಗಳ ಬಗ್ಗೆ ಚೆನ್ನಾಗಿ ಆಲೋಚಿಸಬೇಕು. ಇಂದು ಕೆಲಸ ಒತ್ತಡ ಮತ್ತು ಸುಸ್ತಿನಿಂದ ಕೂಡಿರುತ್ತದೆ.

**ಮಿಥುನ** ಬಲವಾದ ಧೃಢತೆ, ನಿರ್ಭಯತೆ ನಿಮ್ಮ ಮಾನಸಿಕ ಶಕ್ತಿ ವರ್ಧಿಸುವಲ್ಲಿ ಮಹತ್ತರ ಪಾತ್ರ ವಹಿಸುತ್ತವೆ. ಇದು ನಿಮಗೆ ಯಾವುದೇ ಪರಿಸ್ಥಿತಿಯನ್ನು ನಿಯಂತ್ರಣದಲ್ಲಿ ಇರಿಸಿಕೊಳ್ಳಲು ಉತ್ತೇಜಿಸುವುದರಿಂದ ಇದನ್ನು ಕಾಯ್ದುಕೊಳ್ಳಿ. ಸುಲಭವಾಗಿ ಬಂಡವಾಳ ಪಡೆಯಬಹುದು ಬಾಕಿಯಿರುವ ಸಾಲಗಳನ್ನು ಸಂಗ್ರಹಿಸಬಹುದು

**ಕರ್ಕಾಟಕ** ಹಾಸ್ಯಪ್ರಜ್ಞೆಯಿರುವ ಸಂಬಂಧಿಕರ ಸಂಗ ನಿಮ್ಮ ಉದ್ವೇಗವನ್ನು ಕಡಿಮೆ ಮಾಡುತ್ತದೆ ಮತ್ತು ನಿಮಗೆ ತುಂಬಾ ಅಗತ್ಯವಾಗಿರುವ ಶಮನವನ್ನು ನೀಡುತ್ತದೆ. ಈ ರೀತಿಯ ಸಂಬಂಧಿಗಳನ್ನು ಹೊಂದಿದ ನೀವೇ ಅದೃಷ್ಟವಂತರು. ತಾತ್ಕಾಲಿಕ ಸಾಲಕ್ಕಾಗಿ ನಿಮ್ಮ ಬಳಿ ಬರುವವರನ್ನು ನಿರ್ಲಕ್ಷಿಸಿ.

**ಸಿಂಹ** ನಿಮ್ಮ ಸಭ್ಯ ನಡವಳಿಕೆ ಮೆಚ್ಚುಗೆ ಪಡೆಯುತ್ತದೆ. ಅನೇಕ ಜನರು ನಿಮ್ಮನ್ನು ಹೊಗಳುತ್ತಾರೆ. ಹಣಕಾಸಿನಲ್ಲಿ ಸುಧಾರಣೆ ದೀರ್ಘಕಾಲದಿಂದ ಬಾಕಿಯಿರುವ ನಿಮ್ಮ ಬಾಕಿಗಳು ಮತ್ತು ಬಿಲ್ಲುಗಳನ್ನು ಪಾವತಿಸುವುದನ್ನು ಅನುಕೂಲಕರವಾಗಿಸುತ್ತದೆ. ನಿಮ್ಮ ಮಕ್ಕಳ ಸಮಸ್ಯೆಗಳನ್ನು ನಿಭಾಯಿಸಲು ಸ್ವಲ್ಪ ಸಮಯ ತೆಗೆದುಕೊಳ್ಳಿ.

**ಕನ್ಯಾ** ನೀವು ನಿಮ್ಮ ಭಾವನೆಗಳನ್ನು ನಿಯಂತ್ರಿಸಬೇಕು ಮತ್ತು ನಿಮ್ಮ ಭಯವನ್ನು ಸಾಧ್ಯವಾದಷ್ಟೂ ಬೇಗ ತೊಡೆದುಹಾಕಬೇಕು ಏಕೆಂದರೆ ಇವು ತಕ್ಷಣವೇ ನಿಮ್ಮ ಆರೋಗ್ಯವನ್ನು ಬಾಧಿಸಬಹುದು ಮತ್ತು ಒಳ್ಳೆಯ ಆರೋಗ್ಯವನ್ನು ಅನುಭವಿಸುವ ನಿಮ್ಮ ಹಾದಿಯಲ್ಲಿ ಅಡ್ಡ ಬರಬಹುದು.

**ತುಲಾ** ವಿಜಯೋತ್ಸವವು ನಿಮಗೆ ಪ್ರಚಂಡ ಸಂತೋಷವನ್ನು ನೀಡುತ್ತದೆ. ಸಂತೋಷ ಅನುಭವಿಸಲು ನೀವಿದನ್ನು ನಿಮ್ಮ ಸ್ನೇಹಿತರ ಜೊತೆ ಹಂಚಿಕೊಳ್ಳಬಹುದು. ಹಣದ ಆಗಮನವು ನಿಮ್ಮನ್ನು ಯಾವುದೇ ಸಮಸ್ಯೆಗಳಿಂದ ಮುಕ್ತಗೊಳಿಸಬಹುದು ಸ್ನೇಹಿತರು ರೋಮಾಂಚಕವಾದದ್ದನ್ನೇನಾದರೂ ಯೋಜಿಸಿ ನಿಮಗೆ ಆನಂದ ತರುತ್ತಾರೆ.

**ವೃಶ್ಚಿಕ** ದ್ವೇಷಪ್ರೀತಿಗಿಂತ ಹೆಚ್ಚು ಶಕ್ತಿಶಾಲಿಯಾಗಿದ್ದು, ದೇಹದ ಮೇಲೆ ಪ್ರಾಣಾಂತಿಕ ಪರಿಣಾಮ ಬೀರುವದರಿಂದ, ದ್ವೇಷವನ್ನು ಸಾಯಿಸಲು ಒಂದು ಸಮರಸದ ಸ್ವಭಾವವನ್ನು ರೂಪಿಸಿಕೊಳ್ಳಿ. ದುಷ್ಟತೆಯು ಒಳಿತಿಗಿಂತ ಬೇಗ ವಿಜಯ ಸಾಧಿಸುತ್ತದೆಂದು ನೆನಪಿಡಿ. ರಿಯಲ್ ಎಸ್ಟೇಟ್ ನಲ್ಲಿ ಹೂಡಿಕೆ ಲಾಭದಾಯಕವಾಗಬಹುದು.

**ಧನಸ್ಸು** ನಿಮ್ಮ ಮಗುವಿನಂಥ ಸ್ವಭಾವ ಕಾಣಿಸಿಕೊಳ್ಳುತ್ತದೆ, ನೀವು ಒಂದು ಆಹ್ಲಾದಕಾರಿ ಮನಸ್ಥಿತಿಯಲ್ಲಿರುತ್ತೀರಿ. ಪೋಷಕರು ನೀಡಿದ ಬೆಂಬಲದಿಂದ ಹಣಕಾಸು ಸಮಸ್ಯೆಗಳು ನಿವಾರಣೆಯಾದಂತೆನಿಸುತ್ತವೆ. ಒಬ್ಬ ಹತ್ತಿರದ ಸಂಬಂಧಿಗೆ ಹೆಚ್ಚು ಗಮನ ನೀಡಬೇಕಾಗಬಹುದಾದರೂ ಅವರು ಬೆಂಬಲ, ಆರೈಕೆ ನೀಡಬಹುದು.

**ಮಕರ** ನಿಮ್ಮ ಸಂತೋಷದ ಪ್ರಕೃತಿ ಇತರರಿಗೆ ಸಂತೋಷ ತರುತ್ತದೆ. ಹಣಕ್ಕೆ ಸಂಬಂಧಿಸಿದ ಯಾವುದೇ ವಿಷಯ ನ್ಯಾಯಾಲಯ ಪ್ರಕರಣದಲ್ಲಿ ಸಿಲುಕಿಕೊಂಡಿದ್ದರೆ, ಇಂದು ನೀವು ಅದರಲ್ಲಿ ವಿಜಯವನ್ನು ಪಡೆಯಬಹುದು ಮತ್ತು ನೀವು ಹಣದ ಲಾಭವನ್ನು ಪಡೆಯಬಹುದು. ನಿಮ್ಮ ಸಂಗಾತಿಯಿಂದಾಗಿ ತೊಂದರೆಗೆ ಸಿಲುಕುತ್ತೀರಿ.

**ಕುಂಭ** ಚೈತನ್ಯಯುಕ್ತವಾಗಿರುತ್ತೀರಿ, ನೀವೇನೇ ಮಾಡಿದರೂ ಸಾಮಾನ್ಯವಾಗಿ ತೆಗೆದುಕೊಳ್ಳುವ ಅರ್ಧ ಸಮಯದಲ್ಲಿ ಅದನ್ನು ಮಾಡಲು ನಿಮಗೆ ಸಾಧ್ಯವಾಗುತ್ತದೆ. ಆರ್ಥಿಕ ನಿರ್ಬಂಧಗಳನ್ನು ತಪ್ಪಿಸಲು ನಿಮ್ಮ ಬಜೆಟ್‌ಗೆ ಅಂಟಿಕೊಳ್ಳಿ. ನೀವು ನಂಬುವ ಯಾರಾದರೂ ನಿಮಗೆ ಸಂಪೂರ್ಣ ನಿಜ ಹೇಳದಿರಬಹುದು

**ಮೀನ** ನೀವು ಮಾನಸಿಕವಾಗಿ ಅತ್ಯಂತ ದುರ್ಬಲರಾಗಿರುತ್ತೀರಿ – ಆದ್ದರಿಂದ ನೀವು ನೋವಿಗೀಡಾಗಬಹುದಾದ ಸಂದರ್ಭಗಳಿಂದ ದೂರ ಉಳಿಯಿರಿ. ಪೂರ್ತಿ ದಿನ ನೀವು ಹಣದ ಬಗ್ಗೆ ಹೋರಾಟ ಮಾಡುತ್ತಿದ್ದೀರಿ, ಆದರೆ ಸಂಜೆಯ ಸಮಯದಲ್ಲಿ ನೀವು ಹಣದ ಲಾಭವನ್ನು ಪಡೆಯಬಹುದು.

### ಕೃಷಿ ಚಟುವಟಿಕೆಗಳಿಗೆ ಕೆರೆ ಮಣ್ಣು ಬಳಸಲು ಅನುಮತಿ : ಕಟ್ಟುನಿಟ್ಟಿನ ಮಾರ್ಗಸೂಚಿ ಪಾಲಿಸಲು ಸೂಚನೆ

# ನಿಯಮ ಮೀರಿ ಮಣ್ಣು ಸಾಗಿಸಿದರೆ ಅವರ ವಿರುದ್ಧ ಕ್ರಮ

• ಉದಯವಾಹಿನಿ, ಚಿತ್ರದುರ್ಗ

ಜಿಲ್ಲೆಯಲ್ಲಿ ಕೃಷಿ ಚಟುವಟಿಕೆಗಳ ಅಭಿವೃದ್ಧಿಗಾಗಿ ರೈತರು ಕೆರೆಯ ಹೂಳು ಅಥವಾ ಮಣ್ಣನ್ನು ಬಳಸಿಕೊಳ್ಳಲು ಸಂಬಂದ ಪಟ್ಟವರಿಂದ ಅನುಮತಿ ಪಡೆಯುವುದು ಕಡ್ಡಾಯವಾಗಿದೆ. ಈ ಕುರಿತು ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಟಿ. ವೆಂಕಟೇಶ್ ಸೂಚಿಸಿದರು.

**ಕೃಷಿ ಚಟುವಟಿಕೆಯ ಉದ್ದೇಶ**

ನಗರದ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಜರುಗಿದ ಗಣಿಗಾರಿಕೆ ಸಂಬಂಧಿಸಿದ ಜಿಲ್ಲಾ ಟಾಸ್ಕ್ ಫೋರ್ಸ್ ಸಭೆಯ ಅಧ್ಯಕ್ಷತೆ ಅವರು ಮಾತನಾಡಿದರು. ರೈತರು ತಮ್ಮ ಜಮೀನಿನ ಕೃಷಿ ಉದ್ದೇಶಕ್ಕಾಗಿ ಮಣ್ಣು ಪಡೆಯುವ ಮೊದಲು ಕೆರೆಯ ಮಾಲೀಕತ್ವ ಹೊಂದಿರುವ ಸಣ್ಣ ನೀರಾವರಿ ಇಲಾಖೆ, ಪಂಚಾಯತ್ ರಾಜ್ ಇಂಜಿನಿಯರಿಂಗ್ ಗ್ರಾಮ ಪಂಚಾಯತಿಯಿಂದ ಕಡ್ಡಾಯವಾಗಿ ಪೂರ್ವಾನುಮತಿ ಪಡೆಯಬೇಕು. ಅನುಮತಿ ಕೋರುವಾಗ ರೈತರು ತಮ್ಮ ಜಮೀನಿನ ಪಹಣಿ ಮತ್ತು ಕೃಷಿ ಚಟುವಟಿಕೆಯ ಉದ್ದೇಶವನ್ನು ಸ್ಪಷ್ಟವಾಗಿ ನಮೂದಿಸಬೇಕು. ಕೃಷಿ ಉದ್ದೇಶಕ್ಕಾಗಿ ಕೇವಲ ಟ್ರಾಕ್ಟರ್‌ಗಳ ಮೂಲಕ ಮಾತ್ರ ಮಣ್ಣು ಸಾಗಿಸಲು ಅವಕಾಶವಿದೆ. ಯಾವುದೇ ಕಾರಣಕ್ಕೂ ಟ್ರಕ್, ಲಾರಿಗಳನ್ನು ಬಳಸುವಂತಿಲ್ಲ. ಮಣ್ಣು ತೆಗೆಯುವಾಗ ಕೆರೆಯ ಒಳಭಾಗದಲ್ಲಿ ಒಂದು ಮೀಟರ್‌ಗಿಂತ ಹೆಚ್ಚು ಆಳಕ್ಕೆ ಗುಂಡಿ ತೋಡುವಂತಿಲ್ಲ. ಕೆರೆಗಳ ಸಂರಕ್ಷಣೆ ದೃಷ್ಟಿಯಿಂದ ಇದು ಕೆರೆಯ ಮೂಲ ವಿನ್ಯಾಸಕ್ಕೆ ಧಕ್ಕೆ ತರದಂತೆ ಇರಬೇಕು ಎಂದು ಜಿಲ್ಲಾಧಿಕಾರಿ ಸ್ಪಷ್ಟಪಡಿಸಿದರು.




**ಅದಿರು ಸಾಗಾಣಿಕೆ ವಾಹನಗಳಿಗೆ ನಿಯಂತ್ರಣ**

ಭೀಮಸಮುದ್ರ, ಬೊಮ್ಮೇನಹಳ್ಳಿ ಸೇರಿದಂತೆ ಗಣಿಲಾರಿಗಳು ಸಾಗುವ ಗ್ರಾಮಸ್ಥರು ಅಧಿರು ಸಾಗಟದಿಂದ ತೊಂದರೆಯಾಗುತ್ತಿದೆ ಎಂದು ದೂರಿದ್ದಾರೆ. ಗಣಿಲಾರಿಗಳು ನಿಗದಿತ ತೂಕಕ್ಕಿಂತ ಹೆಚ್ಚು ಅಧಿರು ಸಾಗಾಟ ಮಾಡುತ್ತಿವೆ. ಅದಿರನ ಮೇಲೆ ನೀರು ಸಿಂಪಡಿಸುವುದಿಲ್ಲ. ತಾಡಪಲ್ ಮುಚ್ಚುವುದಿಲ್ಲ. ಗಣಿ ಧೂಳು ಕೃಷಿ ಬೆಳೆಗಳ ಮೇಲೆ ಬಿದ್ದು ಬೆಳೆ ನಾಶವಾಗುತ್ತಿದೆ. ಇದಕ್ಕೆ ಕಡಿವಾಣ ಹಾಕುವಂತೆ ಪ್ರತಿಭಟನೆ ನಡೆಸಿ ಮನವಿ ಸಲ್ಲಿಸಿದ್ದಾರೆ. ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಹೆಚ್ಚುವರಿಯಾಗಿ ಗಣಿ ಅಧಿರು ಸಾಗಾಟ ಮಾಡುವ ಹಾಗೂ ನಿಯಮ ಪಾಲಿಸದ ಲಾರಿಗಳ ವಿರುದ್ದ ಕಾರ್ಯಾಚರಣೆ ನಡೆಸಬೇಕು. ಗಣಿ ಬಾಧಿತ ಪ್ರದೇಶದಲ್ಲಿ ಸಾಮಾಜಿಕ ಹೊಣೆಗಾರಿಕೆ ನಿಧಿಯಡಿ ಶಾಲೆ, ಅಂಗನವಾಡಿ, ಪ್ರಾಥಮಿಕ ಆರೋಗ್ಯ ಕೇಂದ್ರ, ಹಾಗೂ ಆರ್‌ಓ ಘಟಕಗಳನ್ನು ಅಭಿವೃದ್ಧಿ ಮಾಡುವಂತೆ ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಸೂಚಿಸಿದರು.

**ಅನಗತ್ಯ ಮಣ್ಣು ಪರೀಕ್ಷೆ ಬೇಡ**

ರೈತರು ತಮ್ಮ ತೋಟ , ಜಮೀನಿಗೆ ಕೆರೆಯ ಮಣ್ಣನ್ನು ಸಾಗಿಸುವಾಗ, ಆ ಮಣ್ಣಿನಲ್ಲಿರುವ ಖನಿಜಾಂಶಗಳ ಬಗ್ಗೆ ವರದಿ ಕೇಳುವುದು ಅಥವಾ ಪರೀಕ್ಷಿಸುವುದು ಅನಗತ್ಯ. ರೈತರು ಕೃಷಿ ಚಟುವಟಿಕೆಗಾಗಿ ಮಣ್ಣು ಬಳಸುತ್ತಿದ್ದರೆ, ಅದರಲ್ಲಿ ಯಾವ ಖನಿಜಾಂಶ ಇದೆ ಎಂದು ಪರೀಕ್ಷಿಸುವ ಅವಶ್ಯಕತೆಯಿಲ್ಲ. ಮಣ್ಣನ್ನು ವಾಣಿಜ್ಯ ಉದ್ದೇಶಕ್ಕಾಗಿ ಬಳಸುತ್ತಿದ್ದರೆ ಅಥವಾ ಮಾರಾಟ ಮಾಡುತ್ತಿದ್ದರೆ ಮಾತ್ರ ಗಣಿ ಇಲಾಖೆಯ ನಿಯಮಗಳ ಪ್ರಕಾರ ತಪಾಸಣೆ ನಡೆಸಿ ಕ್ರಮ ಕೈಗೊಳ್ಳಬೇಕು. ಸಣ್ಣಪುಟ್ಟ ವಿಷಯಗಳನ್ನು ದೊಡ್ಡದು ಮಾಡಿ ವರದಿ ನೀಡುವುದರಿಂದ ಸರ್ಕಾರದ ಮಟ್ಟದಲ್ಲಿ ತಪ್ಪು ಸಂದೇಶ ಹೋಗುತ್ತದೆ. ಗೊಂದಲ ಉಂಟಾಗುತ್ತದೆ. ಅಧಿಕಾರಿಗಳು ಈ ಕುರಿತು ಎಚ್ಚರಿಕೆಯಿಂದ ಕೆಲಸ ನಿರ್ವಹಿಸಬೇಕು.

-ಟಿ.ವೆಂಕಟೇಶ್, ಜಿಲ್ಲಾಧಿಕಾರಿ

**ವಾಣಿಜ್ಯ ಉದ್ದೇಶಗಳಿಗೆ ಬಳಸಿದರೆ ಕಠಿಣ ಕ್ರಮ:** ಯಾವುದೇ ವ್ಯಕ್ತಿ ವಾಣಿಜ್ಯ ಉದ್ದೇಶಕ್ಕಾಗಿ, ಗುತ್ತಿಗೆ ಆಧಾರಿತ ಕಾಮಗಾರಿಗಳಿಗಾಗಿ ಕೆರೆ ಮಣ್ಣು, ಗ್ರಯಾವೆಲ್ ಬಳಸುತ್ತಿದ್ದರೆ, ಅವರು ಕಡ್ಡಾಯವಾಗಿ ಗಣಿ ಇಲಾಖೆಯಿಂದ ಅನುಮತಿ ಪಡೆಯಬೇಕು. ಅಂತಹ ಬಳಕೆಗೆ ನಿಗದಿಪಡಿಸಿದ ರಾಜಧನ ಸರ್ಕಾರಕ್ಕೆ ಪಾವತಿಸುವುದು ಕಡ್ಡಾಯವಾಗಿದೆ. ಒಂದು ವೇಳೆ ನಿಯಮ ಮೀರಿ ಯಾರಾದರು ಮಣ್ಣು ಸಾಗಿಸಿದರೆ ಅವರ ವಿರುದ್ಧ ತಕ್ಷಣ ಕ್ರಮ ಕೈಗೊಳ್ಳಲು ತಹಶೀಲ್ದಾರರು, ತಾಲ್ಲೂಕು ಪಂಚಾಯತ್ ಇಓಗಳು, ಗಣಿ ಇಲಾಖೆ ಮತ್ತು ಸಣ್ಣ ನೀರಾವರಿ ಇಲಾಖೆಯ ಅಧಿಕಾರಿಗಳಿಗೆ ಸ್ಪಷ್ಟ ನಿರ್ದೇಶನವನ್ನು ಜಿಲ್ಲಾಧಿಕಾರಿ ಟಿ.ವೆಂಕಟೇಶ್ ನೀಡಿದರು.

**ಅನಧಿಕೃತ ಗಣಿಗಾರಿಕೆ ಕಡಿವಾಣ ಟಾಸ್ಕ್ ಫೋರ್ಸ್ ಕಾರ್ಯಾಚರಣೆ:** ಗೋಮಾಳ, ಸರ್ಕಾರಿ ಜಾಗಗಳಲ್ಲಿ ಅಕ್ರಮವಾಗಿ ಮಣ್ಣು ಗಣಿಗಾರಿಕೆ ನಡೆಸುವುದನ್ನು ತಡೆಯಲು ಜಿಲ್ಲಾ, ತಾಲ್ಲೂಕು ಹಂತದ ಟಾಸ್ಕ್ ಫೋರ್ಸ್‌ಗಳು ಕ್ರಿಯಾಶೀಲವಾಗಿ ಕೆಲಸ ಮಾಡಬೇಕು. ಅನಧಿಕೃತ ಗಣಿಗಾರಿಕೆಗೆ ಕಡಿವಾಣ ಹಾಕಬೇಕು ತಹಶೀಲ್ದಾರ್, ತಾಲ್ಲೂಕು ಪಂಚಾಯಿತಿ ಇಓ, ಪೊಲೀಸರು, ಗಣಿ ಇಲಾಖೆ ಅಧಿಕಾರಿಗಳು ಜಂಟಿಯಾಗಿ ಕಾರ್ಯಾಚರಣೆ ನಡೆಸಿ ವಾರಕೊಮ್ಮೆ ವರದಿ ನೀಡುವಂತೆ ಜಿಲ್ಲಾಧಿಕಾರಿ ಟಿ.ವೆಂಕಟೇಶ್ ನಿರ್ದೇಶನ ನೀಡಿದರು. ಸಭೆಯಲ್ಲಿ ಗಣಿ, ಮರಳು, ಕ್ರಷರ್ ಪರವಾನಿಗೆ, ರಾಜಧನ ಸಂಗ್ರಹ ಕುರಿತು ಚರ್ಚಿಸಲಾಯಿತು. ಜಿ.ಪಂ.ಸಿಇಓ ಡಾ. ಆಕಾಶ್, ಪೊಲೀಸ್ ವರಿಷ್ಠಾಧಿಕಾರಿ ರಂಜಿತ್ ಕುಮಾರ್‌ಬಂಡಾರು, ಗಣಿ, ಭೂ ವಿಜ್ಞಾನ ಇಲಾಖೆ ಉಪನಿರ್ದೇಶಕ ಮಹೇಶ್, ಪ್ರಾದೇಶಿಕ ಸಾರಿಗೆ ಇಲಾಖೆ ಅಧಿಕಾರಿ ಕಾಳೆ ಸಿಂಘೇ ಸೇರಿದಂತೆ ಇತರೆ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

## ಬೀದಿ ನಾಯಿಗಳ ಶಸ್ತ್ರ ಚಿಕಿತ್ಸೆ, ಲಸಿಕಾ ಕಾರ್ಯಕ್ರಮ

• ಉದಯ ವಾಹಿನಿ ಕಾರಟಗಿ





ಕರ್ನಾಟಕ ಸರ್ಕಾರದ ಪ್ರಾಣಿ ಸಂತಾನ ನಿಯಂತ್ರಣ (ಅಲ್) ನಿಯಮ 2023ರ ಅಡಿಯಲ್ಲಿ ಪುರಸಭೆಗಳು ಬೀದಿ ನಾಯಿಗಳ ಸಂತಾನ ಹರಣ ಶಸ್ತ್ರಚಿಕಿತ್ಸೆ, ರೇಬಿಸ್ ಲಸಿಕಾ ಕಾರ್ಯಕ್ರಮವನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿವೆ.

ಈ ನಿಟ್ಟಿನಲ್ಲಿ ಶ್ಲಾಘನೀಯ ಕಾರ್ಯ ನಿರ್ವಹಿಸಿದ ಅಧಿಕಾರಿಗಳಿಗೆ ಸಾರ್ವಜನಿಕರ ಪರವಾಗಿ ಈ ಪ್ರಶಂಸಾ ಪತ್ರವನ್ನು ಕೊಪ್ಪಳ ಜಿಲ್ಲಾಧಿಕಾರಿ ಶ್ರೀ ಸುರೇಶ್ ಹಿಟ್ನಾಳ ಅವರು ಪ್ರಶಂಸ ಪತ್ರ ನೀಡಿ ಅಭಿನಂದಿಸಿದ್ದಾರೆ.

ಕಾರಟಗಿ ಪುರಸಭೆ ಪುರಸಭೆಯ ವ್ಯಾಪ್ತಿಯಲ್ಲಿ ದಿನೇ ದಿನೇ ಹೆಚ್ಚುತ್ತಿದ್ದ ಬೀದಿ ನಾಯಿಗಳ ಹಾವಳಿಯನ್ನು ನಿಯಂತ್ರಿಸಲು ಮತ್ತು ಸಾರ್ವಜನಿಕ ಸುರಕ್ಷತೆಯನ್ನು ಖಚಿತ ಪಡಿಸಿಕೊಳ್ಳಲು ನೀವು ಕೈಗೊಂಡ ಕ್ರಮಗಳು ಅತ್ಯಂತ ಶ್ಲಾಘನೀಯ.

ಈ ಕಾರ್ಯಕ್ರಮದ ಮೂಲಕ ನಾಯಿ ಕಡಿತದ ಪ್ರಕರಣಗಳನ್ನು ತಗ್ಗಿಸಲು, ಪ್ರಾಣಿಗಳ ಮೇಲಿನ ಕ್ರೌರ್ಯ ತಡೆಯಲು, ರೇಬಿಸ್‌ರೋಗ ಹರಡುವುದನ್ನು ತಡೆಗಟ್ಟಲು ನೀವು ನೀಡಿರುವ ಕೊಡುಗೆ ಅಪಾರ. ನಿಮ್ಮ ತಂಡದ ಜವಾಬ್ದಾರಿಯುತ, ಮಾನವೀಯ ಮತ್ತು ವೈಜ್ಞಾನಿಕ ವಿಧಾನವು ಜನಸಾಮಾನ್ಯರಿಗೆ ದೊಡ್ಡ ನಿರಾಳತೆಯನ್ನು ತಂದಿದೆ.

ನಿಮ್ಮ ಕರ್ತವ್ಯ ನಿಷ್ಠೆ ಸಾರ್ವಜನಿಕ ಹಿತಾಸಕ್ತಿಯನ್ನು ಮುಂಚೂಣಿಯಲ್ಲಿ ಇಟ್ಟುಕೊಂಡು ಕಾರ್ಯ ನಿರ್ವಹಿಸಿದಕ್ಕಾಗಿ ನಿಮಗೆ ಈ ಪ್ರಶಂಸಾ ಪತ್ರವನ್ನು ಅರ್ಪಿಸುತ್ತಿದ್ದೇವೆ. ಎಂದಿದ್ದಾರೆ. ಬೀದಿನಾಯಿಗಳ ನಿಯಂತ್ರಣ/2025-26ನೇ ಸಾಲಿನಲ್ಲಿ ಕೊಪ್ಪಳ ಜಿಲ್ಲೆಯ ಪುರಸಭೆ ಕಾರಟಗಿ ವ್ಯಾಪ್ತಿಯಲ್ಲಿನ ಬೀದಿನಾಯಿಗಳ ಕುರಿತಾದ, ಮಾನ್ಯ ಘನ ಸುಯೋ ಮೋಟೋ ರಿಟ್ ಪಿಟಿಷನ್ (ಸಿವಿಲ್) ನೋಸ್ 5 ಆ 2025 2 07-11-2025 ರ ಆದೇಶದಲ್ಲಿನ ಅಂಶಗಳನ್ನು ಒಳಗೊಂಡಂತೆ ಬೀದಿ ನಾಯಿಗಳ ನಿಯಂತ್ರಣ, ಬೀದಿ ನಾಯಿಗಳ ಶಸ್ತ್ರ ಚಿಕಿತ್ಸೆ ಮತ್ತು ಲಸಿಕಾ ಕಾರ್ಯಕ್ರಮ ಸೇರಿದಂತೆ, ಈ ಕಾರ್ಯಕ್ರಮದ ಎಲ್ಲಾ ಕಾರ್ಯಗಳನ್ನು ತಾವು ನಿಗದಿತ ಸಮಯದೊಳಗೆ ಶೇಕಡಾ 100 ರಷ್ಟು ಗುರಿಯನ್ನು ಪೂರ್ಣಗೊಳಿಸಿರುವುದು ಪ್ರಶಂಸನೀಯವಾಗಿದೆ.


ಈ ಹಿನ್ನಲೆಯಲ್ಲಿ, ಕಾರಟಗಿ ಪುರಸಭೆ ಪ್ರಗತಿ ಸಾಧಿಸಿರುವುದಕ್ಕೆ. ನಿಮಗೂ, ನಿಮ್ಮ ಸಂಬಂಧಪಟ್ಟ ಎಲ್ಲಾ ಸಿಬ್ಬಂದಿಗಳಿಗೆ, ಹೃದಯ ಪೂರ್ವಕ ಅಭಿನಂದನೆಗಳನ್ನು ತಿಳಿಸುತ್ತಾ, ಮುಂದಿನ ದಿನಗಳಲ್ಲಿ ನಿಮ್ಮ ಪುರಸಭೆಯು ಇನ್ನು ಉತ್ತಮವಾಗಿ ಕಾರ್ಯನಿರ್ವಹಿಸುವ ಎಂದು ನಿರೀಕ್ಷಿಸುತ್ತೇನೆ. ಜಿಲ್ಲಾಧಿಕಾರಿ ಸುರೇಶ್ ಇಟ್ನಾಳ್ ಹಾರೈಸಿದ್ದಾರೆ.

## ಆನ್‌ಲೈನ್‌ನಲ್ಲಿ ಉದ್ಯೋಗದ ಆಮಿಷಕ್ಕೊಳಗಾಗಿ 2.5 ಲಕ್ಷ ರೂ. ಕಳೆದುಕೊಂಡ ಯುವಕ

• ಉದಯವಾಹಿನಿ, ಚಿಕ್ಕಮಗಳೂರು

ಉನ್ನತ ವಿದ್ಯಾಭ್ಯಾಸ ಮುಗಿಸಿ ಪ್ರತಿಷ್ಠಿತ ಕಂಪನಿಯಲ್ಲಿ ಉದ್ಯೋಗ ಗಿಟ್ಟಿಸಿಕೊಳ್ಳಬೇಕೆಂಬ ಯುವಕನ ಆಸೆಯನ್ನೇ ಬಂಡವಾಳ ಮಾಡಿಕೊಂಡ ವಂಚಕನೊಬ್ಬ ಬರೋಬ್ಬರಿ ಎರಡೂವರೆ ಲಕ್ಷ ರೂಪಾಯಿಗಳನ್ನು ವಂಚಿಸಿರುವ ಘಟನೆ ನಡೆದಿದೆ. ಎಂ.ಎಸ್ಸಿ ಪದವೀಧರ ಕೆ.ಸನತ್ ಎಂಬುವರು ಲಿಂಕ್‌ಇನ್ ಪೋರ್ಟಲ್‌ನಲ್ಲಿ ಉದ್ಯೋಗ ಹುಡುಕುತ್ತಿದ್ದಾಗ, ಮನುಕುಮಾರ್ ಎಂಬ ಅಪರಿಚಿತ ವ್ಯಕ್ತಿ ಸಂಪರ್ಕಿಸಿ ಇನ್ಫೋಸಿಸ್ ಕಂಪನಿಯಲ್ಲಿ ಕೆಲಸ ಕೊಡಿಸುವುದಾಗಿ ನಂಬಿಸಿದ್ದಾನೆ.

ಕಂಪನಿಯ ಅಭಿವೃದ್ಧಿ ಹೆಸರಲ್ಲಿ 2 ಲಕ್ಷ ರೂಪಾಯಿ ಹಾಗೂ ತನ್ನ ಸೇವಾ ಶುಲ್ಕವಾಗಿ 50 ಸಾವಿರ ರೂಪಾಯಿ ನೀಡಬೇಕೆಂದು ಬೇಡಿಕೆ ಇಟ್ಟಿದ್ದನು. ಇದನ್ನು ನಂಬಿದ ಸನತ್ ಅವರು ಹಂತ ಹಂತವಾಗಿ ಒಟ್ಟು 2.5 ಲಕ್ಷ ರೂಪಾಯಿಗಳನ್ನು ಆರೋಪಿಯ ಖಾತೆಗೆ ಗೂಗಲ್ ಪೆ ಮೂಲಕ ವರ್ಗಾವಣೆ ಮಾಡಿದ್ದಾರೆ. ಹಣ ವರ್ಗಾವಣೆಯಾದ ಬಳಿಕ ವಂಚಕ ಮನುಕುಮಾರ್



ಜಾಯ್ನಿಂಗ್ ಲೆಟರ್ ನೀಡದೆ ಸತಾಯಿಸಿದ್ದಲ್ಲದೆ, ತನ್ನ ಎರಡು ಮೊಬೈಲ್ ಸಂಖ್ಯೆಗಳನ್ನು ಸ್ವಿಚ್ ಆಫ್ ಮಾಡಿಕೊಂಡು ಸಂಪರ್ಕಕ್ಕೆ ಸಿಗದಂತೆ ಪರಾರಿಯಾಗಿದ್ದಾನೆ. ತಾನು ಮೋಸ ಹೋಗಿರುವುದು ತಡವಾಗಿ ಬೆಳಕಿಗೆ ಬಂದ ಕೂಡಲೇ ವಂಚನೆಗೊಳಗಾದ ಯುವಕ ಸೆನ್ ಪೊಲೀಸ್ ಠಾಣೆಯ ಮೆಟ್ಟಿಲೇರಿದ್ದಾರೆ.ಉದ್ಯೋಗ ಕೊಡಿಸುವುದಾಗಿ ನಂಬಿಸಿ ಹಣ ಪೀಕಿದ ಆರೋಪಿಯ ವಿರುದ್ಧ ಕಾನೂನು ಕ್ರಮ ಜರುಗಿಸಿ, ತನ್ನ ಹಣವನ್ನು ವಾಪಸ್ ಕೊಡಿಸಬೇಕೆಂದು ಅವರು ದೂರಿನಲ್ಲಿ ಮನವಿ ಮಾಡಿದ್ದಾರೆ. ಸದ್ಯ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದು, ತನಿಖೆ ಚುರುಕುಗೊಳಿಸಿದ್ದಾರೆ.

## ಮಕ್ಕಳಿಗೆ ಜಂತುಹುಳು ನಿವಾರಣೆ ಮಾತ್ರೆ ನೀಡಲು ಸಲಹೆ

• ಉದಯವಾಹಿನಿ, ಮಹಾಲಿಂಗಪುರ

ಅಶುಚಿತ್ವದ ಪರಿಸರದಿಂದಾಗಿ ಮಕ್ಕಳು ಮತ್ತು ದೊಡ್ಡವರು ಜಂತು ಹುಳು ಬಾಧೆಗೆ ಒಳಗಾಗುತ್ತಿದ್ದು ಮಾತ್ರೆ ಸೇವಿಸುವುದರ ಮೂಲಕ ಜಂತುರಹಿತರಾಗಬೇಕು ಎಂದು ಆರೋಗ್ಯ ಸಹಾಯಕಿ ಮಹಾದೇವಿ ಮೆಕ್ಕಳಕಿ ಹೇಳಿದರು. ಸಮೀಪದ ಕೆಸರಗೊಪ್ಪದ ಮಾಯವ್ವ ವಿಠಲ ಕಪರಟ್ಟಿ ಇಂಗ್ಲಿಷ್ ಮಾಧ್ಯಮ ಶಾಲೆಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದಿಂದ ಜಂತು ಹುಳು ನಿವಾರಣಾ ಕಾರ್ಯಕ್ರಮದಡಿ ಮಕ್ಕಳಿಗೆ ಮಾತ್ರೆ ವಿತರಿಸಿ ಮಾತನಾಡಿದರು. ಜಂತುಹುಳು ಬಾಧೆಯಿಂದ ಮಕ್ಕಳು ರಕ್ತ ಹೀನತೆಯಿಂದ ಹಾಗೂ ಅಪೌಷ್ಟಿಕತೆಯಿಂದ ಬಳಲುತ್ತಾರೆ. ಜಂತುಹುಳು ಮಾತ್ರೆಯನ್ನು ಸೇವಿಸುವುದರಿಂದ ಬಾಧೆಯಿಂದ ತಪ್ಪಿಕೊಳ್ಳಲು ಸಾಧ್ಯ ಎಂದರು.

## ಕುಡಿಯುವ ನೀರಿಗಾಗಿ ಗ್ರಾಮ ಪಂಚಾಯಿತಿಗೆ ಮುತ್ತಿಗೆ





• ಉದಯವಾಹಿನಿ, ಶಿರಹಟ್ಟಿ

ತಾಲ್ಲೂಕಿನ ಕಡಕೋಳ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಒಳಪಡುವ ಜಲ್ಲಿಗೆರಿ ಗ್ರಾಮಕ್ಕೆ 15 ದಿನಗಳಿಂದ ಕುಡಿಯುವ ನೀರು ಪೂರೈಕೆಯಾಗಿಲ್ಲ. ಇದರಿಂದ ಗ್ರಾಮಸ್ಥರು ಕಡಕೋಳ ಗ್ರಾಮ ಪಂಚಾಯಿತಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು. ಕಳೆದ ಕೆಲವು ದಿನಗಳಿಂದ ಕುಡಿಯುವ ನೀರು ಬಂದಿಲ್ಲ ಎಂದು ಗ್ರಾಮ ಪಂಚಾಯತಿ ಅಧಿಕಾರಿಯನ್ನು ಕೇಳಿದರೆ ಅವರು ಹತ್ತಾರು ಸುಳ್ಳಿನ ಆಶ್ವಾಸನೆ ಕೊಟ್ಟು ಗ್ರಾಮಸ್ಥರನ್ನು ದಾರಿ ತಪ್ಪಿಸುವ ಕೆಲಸ ಮಾಡುತ್ತಿದ್ದಾರೆಯೇ ಹೊರತು ಜನರ ಕುಡಿಯುವ ನೀರಿನ ಸಮಸ್ಯೆ ಮಾತ್ರ ಬಗೆ ಹರಿಸುತ್ತಿಲ್ಲ. ಇದೇ ತಿಂಗಳಲ್ಲಿ ಜಲ್ಲಿಗೇರಿ ಗ್ರಾಮದಲ್ಲಿ ದ್ಯಾಮವ್ವ ದೇವಿ ಜಾತ್ರೆ ಇರುವುದರಿಂದ ನೀರಿಗಾಗಿ ಹಾಹಾಕಾರ ಉಂಟಾಗಿದ್ದು, ಕೂಡಲೇ ಈ ಸಮಸ್ಯೆ ಬಗೆಹರಿಸುವುದರ ಜೊತೆಗೆ ವಿವಿಧ ಸಮಸ್ಯೆಗಳಿಗೆ ಸ್ಪಂದಿಸಬೇಕು ಎಂದು ದಿಂಗಾಲೇಶ ಹಿರೇಮಠ ಹೇಳಿದರು.

ಕಡಕೋಳ ಗ್ರಾಮ ಪಂಚಾಯಿತಿ ಮುಂದೆ ಮುಂಜಾನೆ ಇಂದಲೇ ಕುಡಿಯುವ ನೀರಿಗಾಗಿ ನೂರಾರು ಸಾರ್ವಜನಿಕರು ಜಮಾಯಿಸಿ ತಮ್ಮ ಬೇಡಿಕೆ ಈಡೇರುವವರೆಗೆ ಸ್ಥಳ ಬಿಟ್ಟು ಹೋಗುವುದಿಲ್ಲ ಎಂದು ಪಟ್ಟು ಹಿಡಿದಿದರು. ನಂತರ ಅಭಿವೃದ್ಧಿ ಅಧಿಕಾರಿ ಶಿವಾನಂದ ಮಾಳವಾಡ ಆಗಮಿಸಿದರು. ಅವರಿಗೆ ಜಲ್ಲಿಗೇರಿ ಗ್ರಾಮಸ್ಥರು ಕುಡಿಯುವ ನೀರು, ವಿವಿಧ ಬೇಡಿಕೆಗಳನ್ನು ಈಡೇರಿಸಬೇಕೆಂದು ಮನವಿ ಸಲ್ಲಿಸಿದರು.

## ಅಂತರ್ಜಾಲ ಬಳಕೆ ಅರಿವು ಅತ್ಯಗತ್ಯ

• ಉದಯವಾಹಿನಿ, ಬೆಳಗಾವಿ




ಅಂತರ್ಜಾಲ ವಂಚಕರು ಹೊಸ ಹೊಸ ಮಾರ್ಗಗಳ ಮೂಲಕ ಸುಶಿಕ್ಷತರು ಸೇರಿದಂತೆ ಸಾಮಾನ್ಯ ಜನರನ್ನು ವಂಚನೆಗೊಳಪಡಿಸುತ್ತಿದ್ದಾರೆ. ಈ ವಂಚನೆ ತಡೆಗಟ್ಟಲು ಅಂತರ್ಜಾಲ ಬಳಕೆ ಕುರಿತು ಜಾಗೃತಿ ಹೊಂದಬೇಕು ಎಂದು ಎನ್.ಐ.ಸಿ ಜಿಲ್ಲಾ ಸಂಯೋಜಕ ಶಿರೀಶ್ ನಾಯಕ ಹೇಳಿದರು.

ಮಾಹಿತಿ ತಂತ್ರಜ್ಞಾನ ಇಲಾಖೆ ಸಹಯೋಗದಲ್ಲಿ ಜಿಲ್ಲಾಧಿಕಾರಿ ಕಚೇರಿಯ ಸಭಾಂಗಣದಲ್ಲಿ ಬುಧವಾರ ನಡೆದ ಸುರಕ್ಷಿತ ಅಂತರ್ಜಾಲ ದಿನ-2026ರ ತರಬೇತಿ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

ಅಂತರ್ಜಾಲದ ಮೂಲಕ ಇಡೀ ಜಗತ್ತಿನ ಮಾಹಿತಿಯನ್ನು ಅಂಗೈಯಲ್ಲಿ ಪಡೆಯಬಹುದು. ಅಂತರ್ಜಾಲದ ಮೂಲಕ ನಾವು ಸಾಕಷ್ಟು ಪ್ರಯೋಜನ ಪಡೆದುಕೊಳ್ಳ ಬಹುದಾಗಿದೆ. ಆದರೆ ಅಷ್ಟೇ ಅಪಾಯವು ಇದ್ದು, ಬಳಕೆ ಸಂದರ್ಭದಲ್ಲಿ ಜಾಗೂರಕರಾಗಿರಬೇಕು. ಭವಿಷ್ಯದಲ್ಲಿ ಸುರಕ್ಷಿತ ಆನ್‌ಲೈನ್ ಸೇವೆ ಅತ್ಯಗತ್ಯವಾಗಿದ್ದು ಇದರ ಸಾಧಕ, ಬಾಧಕಗಳ ಕುರಿತು ಅರಿತು ಜನ ಸಾಮಾನ್ಯರಲ್ಲಿ ಜಾಗೃತಿ ಮೂಡಿಸಲು ಅಧಿಕಾರಿ, ಸಿಬ್ಬಂದಿ ಮುಂದಾಗುವಂತೆ ತಿಳಿಸಿದರು.

ಕೃತಕ ಬುದ್ಧಿಮತ್ತೆ (ಎಐ) ಬಗ್ಗೆ ಜಾಗೃತರಾಗಬೇಕು. ಎಐ ಸಂಬಂಧಿತ ಅಪಾಯಗಳ ಅರಿವು ಪ್ರತಿಯೊಬ್ಬರು ಸಂಪೂರ್ಣವಾಗಿ ಅರಿತುಕೊಳ್ಳಬೇಕು. ಯುಪಿಐ ಪೇಮೆಂಟ್ ಪಾವತಿಸುವಾಗ ಹಣ ವರ್ಗಾಯಿಸುವ ಸಂಖ್ಯೆ ಮತ್ತು ಲಿಂಕ್ ಅಧಿಕೃತವಾಗಿರುವ ಕುರಿತು ಖಚಿತ ಪಡಿಸಿಕೊಳ್ಳಬೇಕು' ಎಂದೂ ಸಲಹೆ ನೀಡಿದರು.

## ನುಡಿದಂತೆ ನಡೆತ ರಾಜ್ಯ ಸರ್ಕಾರ

• ಉದಯವಾಹಿನಿ, ಹಾನಗಲ್

ಕಳೆದ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದಿಂದ ಐದು ಗ್ಯಾರಂಟಿ ಭರವಸೆ ಜೊತೆಗೆ ತಾಲ್ಲೂಕಿನಲ್ಲಿ ಮನೆ ಹಕ್ಕುಪತ್ರ ವಿತರಿಸುವುದಾಗಿ 6ನೇ ಗ್ಯಾರಂಟಿ ಘೋಷಣೆ ಮಾಡಿದ್ದೆವು ಇದೀಗ ನುಡಿದಂತೆ ನಡೆದು ಕುಟುಂಬಗಳಿಗೆ ಮನೆ ಮಾಲಿಕತ್ವ ದೊರಕಿಸಲಾಗುತ್ತಿದೆ ಎಂದು ಶಾಸಕ ಶ್ರೀನಿವಾಸ ಮಾನೆ ಹೇಳಿದರು. ಇಲ್ಲಿನ ಜನಸಂಪರ್ಕ ಕಚೇರಿಯಲ್ಲಿ ಭಾನುವಾರ ನಡೆದ ತಾಲ್ಲೂಕಿನ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರ ಸಭೆಯಲ್ಲಿ ಭಾಗವಹಿಸಿ ಅವರು ಮಾತನಾಡಿದರು. ತಾಲ್ಲೂಕಿನ ಸುಮಾರು 12 ಸಾವಿರಕ್ಕೂ ಹೆಚ್ಚು ಕುಟುಂಬಗಳು ಯಾವುದೇ ದಾಖಲೆಗಳಿಲ್ಲದೇ ಸರ್ಕಾರಿ ಮತ್ತು ಖಾಸಗಿ ಜಮೀನುಗಳಲ್ಲಿ ಮನೆ ನಿರ್ಮಿಸಿಕೊಂಡು ಅತಂತ್ರವಾಗಿ ವಾಸಿಸುತ್ತಿವೆ. ಇಂಥ ಕುಟುಂಬಗಳಿಗೆ ಶಾಶ್ವತ ಮನೆ ಮಾಲಿಕತ್ವದ ಭರವಸೆ ನೀಡಲಾಗಿತ್ತು. ಇದೀಗ ಕಂದಾಯ ಸಚಿವ ಕೃಷ್ಣ ಭೈರೇಗೌಡ ಅವರ ಸಹಕಾರದಿಂದ ಈ ಕಾರ್ಯ ಜಾರಿಯಾಗುತ್ತಿದೆ ಎಂದರು.

ಹಕ್ಕುಪತ್ರ ವಿತರಣೆ ಕಾರ್ಯದಲ್ಲಿ ವಿಜಯನಗರ ಜಿಲ್ಲೆ ಮೊದಲ ಸ್ಥಾನದಲ್ಲಿದ್ದು, ಹಾವೇರಿ ಜಿಲ್ಲೆ 2ನೇ ಸ್ಥಾನದಲ್ಲಿದೆ. ಹಾನಗಲ್ ತಾಲ್ಲೂಕು ರಾಜ್ಯದಲ್ಲಿ ಮೊದಲ ಸ್ಥಾನದಲ್ಲಿದ್ದು, ಅತೀ ಹೆಚ್ಚು




ಸಂಖ್ಯೆಯ ಕುಟುಂಬಗಳಿಗೆ ಅನುಕೂಲವಾಗುತ್ತಿರುವುದು ಹೆಚ್ಚು ಸಂತೋಷಕ್ಕೆ ಕಾರಣವಾಗಿದೆ ಎಂದರು. ಫೆ.14 ರಂದು ಹಾವೇರಿಯಲ್ಲಿ ನಡೆಯಲಿರುವ ಸಾಧನಾ ಸಮಾವೇಶದಲ್ಲಿ ತಾಲ್ಲೂಕಿನಿಂದ ಹೆಚ್ಚು ಸಂಖ್ಯೆಯಲ್ಲಿ ಕಾರ್ಯಕರ್ತರು ಭಾಗವಹಿಸುವ ಮೂಲಕ ಕಾರ್ಯಕ್ರಮ ಯಶಸ್ವಿಗೊಳಿಸೋಣ ಎಂದರು.

## ಹಕ್ಕುಪತ್ರ ವಿತರಣೆಗೆ ಸಕಲ ಸಿದ್ದತೆ ಅವಶ್ಯ : ರುದ್ರಪ್ಪಲಮಾಣಿ

• ಉದಯವಾಹಿನಿ, ಹಾವೇರಿ

ಜಿಲ್ಲೆಯಲ್ಲಿ ಕಂದಾಯ ಇಲಾಖೆಯ ವತಿಯಿಂದ ಫೆ.14 ರಾಜ್ಯಮಟ್ಟದ 2ನೇ ಬೃಹತ್ ಹಕ್ಕುಪತ್ರ ವಿತರಣಾ ಕಾರ್ಯಕ್ರಮ ಆಯೋಜಿಸಲಾಗಿದೆ. ಇದಕ್ಕೆ ಅಧಿಕಾರಿಗಳು ಜವಾಬ್ದಾರಿಯುತವಾಗಿ ಕರ್ತವ್ಯ ನಿರ್ವಹಿಸಬೇಕು ಎಂದು ವಿಧಾನಸಭೆ ಉಪಸಭಾಪತಿ ರುದ್ರಪ್ಪ ಲಮಾಣಿ ಹೇಳಿದರು. ನಗರದ ತಹಶೀಲ್ದಾರ್ ಕಚೇರಿಯಲ್ಲಿ ಕಂದಾಯ ಇಲಾಖೆಯ ಅಧಿಕಾರಿಗಳೊಂದಿಗೆ ಹಮ್ಮಿಕೊಂಡಿದ್ದ ಸಮಾವೇಶ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಹಾವೇರಿ ಹಾಗೂ ಇತರೆ 8 ಜಿಲ್ಲೆಗಳನ್ನು ಸೇರಿ ಒಂದು ಲಕ್ಷ ಫಲಾನುಭವಿಗಳಿಗೆ ಫೆ.14ರಂದು ಹಕ್ಕುಪತ್ರ ವಿತರಿಸಲಾಗುವುದು ಎಂದು ತಿಳಿಸಿದರು.

ಸರ್ಕಾರ ಜಾರಿಗೆ ತಂದಿರುವ ಮಹತ್ವದ ಗ್ಯಾರಂಟಿ ಯೋಜನೆಗಳ ಜೊತೆಗೆ ಇದೀಗ ಸರ್ಕಾರ ಒಂದು ಹೆಜ್ಜೆ ಮುಂದೆ ಇಟ್ಟು ಕಂದಾಯ ಗ್ಯಾರಂಟಿ ನೀಡಲು ಮುಂದಾಗಿದೆ. ಹೊಸಪೇಟೆಯಲ್ಲಿ ಹಮ್ಮಿಕೊಂಡಿದ್ದ ಸಮಾವೇಶಕ್ಕಿಂತಲೂ ಉತ್ತಮವಾಗಿ




ಆಯೋಜಿಸಲು ಸಕಲ ವ್ಯವಸ್ಥೆ ಮಾಡಿಕೊಳ್ಳಲಾಗಿದೆ ಎಂದರು. ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಮಟ್ಟದ ಅಧಿಕಾರಿಗಳು ಸಮಿತಿ ರಚಿಸಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಜಿಲ್ಲೆಯಲ್ಲಿ ನಡೆಯುತ್ತಿರುವ ಸಮಾವೇಶ ಇಡೀ ದೇಶಕ್ಕೆ ಮಾದರಿಯಾಗಲಿದೆ. ಕಾರ್ಯಕ್ರಮದಲ್ಲಿ ಸಿಎಂ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೇರಿದಂತೆ ರಾಜ್ಯದ ಸಚಿವ ಸಂಪುಟದ ಬಹುತೇಕ ಎಲ್ಲಾ ಸಚಿವರ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಹಾವೇರಿ ಜಿಲ್ಲೆಯಿಂದ 50,000, ದಾವಣಗೆರೆ 20,000, ಶಿವಮೊಗ್ಗ, ಧಾರವಾಡ ಹಾಗೂ ಗದಗ ಜಿಲ್ಲೆಯಿಂದ ತಲಾ 10,000, ಚಿಕ್ಕಮಗಳೂರು 7,000, ಚಿತ್ರದುರ್ಗ 5,500, ಕೊಪ್ಪಳ 8,000 ಹಾಗೂ ಉತ್ತರ ಕನ್ನಡ ಜಿಲ್ಲೆಯಿಂದ 1,000 ಜನರು ಹಕ್ಕು ಪತ್ರ ಪಡೆದುಕೊಳ್ಳಲಿದ್ದಾರೆ.

ಫಲಾನುಭವಿಗಳನ್ನು ಸಮಾವೇಶಕ್ಕೆ ಕರೆ ತರಲು 800 ಕೆಎಸ್‌ಆರ್‌ಟಿಸಿ ಬಸ್, 75 ಖಾಸಗಿ ಬಸ್, 200 ಶಾಲಾ ವಾಹನ ಸೌಲಭ್ಯ ಕಲ್ಪಿಸಲಾಗಿದೆ. ಕಾರ್ಯಕ್ರಮದ ಭದ್ರತೆಗೆ 3500ಕ್ಕಿಂತಲೂ ಹೆಚ್ಚಿನ ಪೊಲೀಸ್ ಸಿಬ್ಬಂದಿ ನಿಯೋಜಿಸಲಾಗಿದೆ ಎಂದರು.

# ಕೆಕೆಆರ್‌ಡಿಬಿ ಅಡಿಯಲ್ಲಿ ಅನುದಾನ ನೀಡಿ ಅಭಿವೃದ್ಧಿಪಡಿಸಲಾಗುವುದು

### ಸಾಲುಮರದ ತಿಮ್ಮಕ್ಕನ ವೃಕ್ಷೋಧ್ಯಾನ ಅಭಿವೃದ್ಧಿಗೆ 2ಕೋಟಿ ರೂ.ಅನುದಾನ ಬಳಕೆ,ಸಂಪೂರ್ಣ ಅಭಿವೃದ್ಧಿಗೆ ಇನ್ನು 2ಕೋಟಿ ರೂ.ಅವಶ್ಯಕ

• ಉದಯವಾಹಿನಿ, ಚಿಂಚೋಳಿ

ತಾಲ್ಲೂಕಿನ ಪೋಲಕಪಳ್ಳಿ ಗ್ರಾಮದ ಹತ್ತಿರ ಸಾಲುಮರದ ತಿಮ್ಮಕ್ಕನ ವೃಕ್ಷೋಧ್ಯಾನ ಅಭಿವೃದ್ಧಿಗೆ 2019ರಿಂದ 2025ರವರೆಗೆ ಅಂದಾಜು 2ಕೋಟಿ ರೂ.ಅನುದಾನ ನೀಡಿ ಅಭಿವೃದ್ಧಿ ಪಡಿಸಲಾಗಿದೆ, ಸಂಪೂರ್ಣ ಅಭಿವೃದ್ಧಿಗೆ ಇನ್ನು 2ಕೋಟಿ ರೂ.ಅವಶ್ಯಕವಿದೆ ಶಾಸಕರ ಅನುದಾನದಲ್ಲಿ ಅಥವಾ ಕೆಕೆಆರ್‌ಡಿಬಿ ಅಡಿಯಲ್ಲಿ ಅನುದಾನ ನೀಡಿ ಅಭಿವೃದ್ಧಿಪಡಿಸಲಾಗುವುದು ಎಂದು ಶಾಸಕ ಡಾ.ಅನಿನಾಶ ಜಾಧವ ಹೇಳಿದರು.




ಸಾಲುಮರದ ತಿಮ್ಮಕ್ಕನ ವೃಕ್ಷೋಧ್ಯಾನಗೆ ಭೇಟಿನೀಡಿ ಕಾಮಗಾರಿ ವಿಕ್ಷಿಸಿ ಸುದ್ದಿಗಾರರೋಂದಿಗೆ ಮಾತನಾಡಿದ ಅವರು,2019ರಲ್ಲಿ ಟ್ರೀ ಪಾರ್ಕ ನಿರ್ಮಾಣಕ್ಕೆ 85.50ಲಕ್ಷ ರೂ.ಮತ್ತು 20ಲಕ್ಷ ರೂ.




ಹಾಗೂ 7ಲಕ್ಷ,ಒಮ್ಮೆ 20ಲಕ್ಷ,ಡಿಸಿ ಹೇಡ್ 50ಲಕ್ಷ ರೂ.29.ಲಕ್ಷ ರೂ,ಚೆಟ್ಟಿನಾಡು ಕಂಪನಿ ಅನುದಾನ ಹೀಗೆ ಒಟ್ಟಾರೆ 2ಕೋಟಿ ರೂ. ಗಳಲ್ಲಿ ಅಭಿವೃದ್ಧಿ ಮಾಡಲಾಗಿದೆ,ಹೆಚ್ಚಿನ ಅನುದಾನ ಸಚಿವರ ಗಮನಕ್ಕೆ ತರಲಾಗುವುದು,ಇಲ್ಲಾದಿದ್ದರೆ ಶಾಸಕರ ಅನುದಾನ ನೀಡಿ ಮೂಲಭೂತ ಸೌಕರ್ಯ ಕೆಲಸಗಳು ಮಾಡಲಾಗುವುದು ಎಂದರು. ಸಾಲುಮರದ ತಿಮ್ಮಕ್ಕನ ವೃಕ್ಷೋಧ್ಯಾನದಲ್ಲಿ ಆಟದ ಸಾಮಾನು, ಸೋಲಾರ ದ್ವೀಪ, ಹೈಮಾಸ್ಟ್ ದ್ವೀಪ, ಬಿದಿರು ಪ್ಲಾಂಟ್, ಸಣ್ಣ ಪ್ರಾಣಿ ಸಂಗ್ರಾಲಯ, ಇನ್ನೊಂದು ಶೌಚಾಲಯ, ಇನ್ನೊಂದು ಕೃತಕ ಜಲಪಾತ, ಮಾಡುವುದು ಬಾಕಿಯಿದೆ, ಒಟ್ಟಾರೆ 370 ಏಕರೆ ಜಮೀನು ಅರಣ್ಯ ಇಲಾಖೆಗೆ ಒಳಪಟ್ಟಿದೆ, ಈಗಾಗಲೆ 20ಏಕರೆ ಜಮೀನು ಪ್ರದೇಶದಲ್ಲಿ ಉಧ್ಯಾನವನ ಅಭಿವೃದ್ಧಿ ಮಾಡಲಾಗುತ್ತಿದೆ.

ಅರಣ್ಯ ಕಾಲೇಜು, ಪಿಜಿ ಸೇಂಟರ್, ಪ್ರಗತಿ ಪಂಥ ಯೋಜನೆ ಇವೆಲ್ಲವೂ ಚೀಚೋಳಿ ಅಭಿವೃದ್ಧಿಗೆ ಮಂಜೂರು ಮಾಡಿ ಎಂದು ಮತ್ತೊಮ್ಮೆ ಸರ್ಕಾರಕ್ಕೆ ಮತ್ತು ಸಂಭಧಪಟ್ಟ ಸಚಿವರಿಗೆ ಭೇಟಿಯಾಗಿ ಲಿಖಿತ ರೂಪದಲ್ಲಿ ಮನವಿ ಕೋಡುತ್ತೇನೆ, ಶೇರಿಭೀಕನಳ್ಳಿ ಸ್ಥಳಾಂತರಕ್ಕೆ ಈಗಾಗಲೇ ಎಲ್ಲಾ ಪ್ರಕ್ರೀಯೇ ಮುಕ್ತಾಯವಾಗಿದ್ದು ಜಮೀನು ಹಸ್ತಾಂತರ ಬಾಕಿಯಿದೆ ಶೀಘ್ರದಲ್ಲೇ ವೇಂಕಟಪೂರ ಗ್ರಾಮ ಪಂಚಾಯತ ವ್ಯಾಪ್ತಿ 137ಸರ್ವೆ ನಂಬರ್‌ನಲ್ಲಿ ಮನೆಗಳು ಮಂಜೂರಾತಿ ನೋಡಲು ಕೆಲಸ ಪ್ರಾರಂಭವಾಗುತ್ತದೆ ಎಂದರು.

ಈ ಸಂದರ್ಭದಲ್ಲಿ ಗೋಪಾಲರಾವ ಕಟ್ಟಿಮನಿ,ಅಶೋಕ ಚವ್ಹಾಣ, ಜಗದೀಶಸಿಂಗ್ ಠಾಕೂರ, ಕೆಎಂ ಬಾರಿ, ಶೀಮಂತ ಕಟ್ಟಿಮನಿ, ಭೀಮಶೆಟ್ಟಿ ಮುರುಡಾ, ರಾಜು ಪವ್ಹಾರ, ರಾಜರೆಡ್ಡಿ, ವೀರೇಶ ಎಂಪಳ್ಳಿ,ಗಿರಿ ನಾಟೀಕಾರ, ಆಕಾಶ ಕೋಳೂರ, ಗೈಬಣ್ಣ,ಅಧಿಕಾರಿಗಳಾದ ಜಗನ್ನಾಥ ಕೋರಳ್ಳಿ, ಸಂಜುಕುಮಾರ ಚವ್ಹಾಣ, ಸಿದ್ದರೂಢ ಅನೇಕರಿದ್ದರು.

**ಶಾಸಕರ ಎದುರು ಪತ್ರಕರ್ತರಿಗೆ ಅವಾಜ್ ಹಾಕಿದ ಅಧಿಕಾರಿ**

ಗೋಟ್ಟಂಗೋಟ್ಟ ಅಭಯಾರಣ್ಯದಲ್ಲಿ ಪ್ರವಾಸಿಗರ ಅನುಕೂಲಕ್ಕಾಗಿ 24ಲಕ್ಷ ರೂ.ಗಳಲ್ಲಿ ಎರಡು ತಂಗುದಾಣ ಟೆಂಟ್ ಮತ್ತು ಎರಡು ಶೌಚಾಲಯ ನಿರ್ಮಾಣ ಕಾಮಗಾರಿಯು ಸಂಪೂರ್ಣ ಕಳೆಪೆ ಕಾಮಗಾರಿ ನಡೆಸಿ ಗುತ್ತಿಗೆದಾರ ಕೈತೊಳೆದುಕೋಂಡಿದ್ದಾನೆ ಎಂದು ಪತ್ರಕರ್ತರು ಶಾಸಕರಿಗೆ ಪ್ರಶ್ನೆ ಕೇಳಿದಾಗ ಸ್ಥಳದಲ್ಲಿಯೇ ಇದ್ದ ಅರಣ್ಯ ಇಲಾಖೆ ಕಂಚಾವರಂ ವಲಯದ ವನ್ಯಜೀವಿ ಧಾಮ ಆರ್‌ಎಫ್‌ಓ ಸಂಜುಕುಮಾರ ಚವ್ಹಾಣ ಶಾಸಕರು ಉತ್ತರಿಸುವ ಮೊದಲೇ ಮಧ್ಯ ಪ್ರವೇಶಿಸಿ ಪತ್ರಕರ್ತರಿಗೆ ಭೆದರಿಸುವ ರೀತಿಯಲ್ಲಿ ಅವಾಜ್ ಹಾಕಿದರು,ಮದ್ಯ ಪ್ರವೇಶಿಸಿದ ಗೋಪಾಲರಾವ ಕಟ್ಟಿಮನಿ ಮಾತನಾಡಿ ಪತ್ರಕರ್ತರು ಶಾಸಕರಿಗೆ ಪ್ರಶ್ನೆ ಕೇಳುತ್ತಿದ್ದಾರೆ ಶಾಸಕರು ಉತ್ತರ ಕೋಡುತ್ತಾರೆ ತಾವು ಅಧಿಕಾರಿ ತಾವೇಕೆ ಎರುಧ್ವನಿಯಲ್ಲಿ ಉತ್ತರ ಕೋಡುತ್ತಿದ್ದೀರಿ ಕಾಮಗಾರಿಯಲ್ಲಿ ನಿಮ್ಮ ಕೈವಾಡವಿದೆಯ ಇಲ್ಲವೇಂದರೆ ಸುಮ್ಮನೀರಿ ಎಂದು ಹೇಳಿದರು, ಆಗ ಶಾಸಕ ಡಾ.ಅವಿನಾಸ ಜಾಧವ ಮಾತನಾಡಿ ಅಧಿಕಾರಿಗೆ ಸಮ್ಮನೀರಿ ಎಂದು ಹೇಳಿ ಪರಿಸ್ಥಿತಿ ತಿಳಿಗೊಳಿಸಿ,ಗೋಟ್ಟಂಗೋಟ್ಟ ಅಭಯಾರಣ್ಯದಲ್ಲಿ ನಿರ್ಮಿಸಿದ ಕಾಮಗಾರಿ ನಾನೇ ಖುದ್ದಾಗಿ ಹೋಗಿ ಪರಿಶೀಲನೆ ಮಾಡುತ್ತೇನೆ ಎಂದರು.

## ಅಜೆರ್ಬೈಜಾನ್‌ನಲ್ಲಿ ಅಪಹರಣಕ್ಕೊಳಗಾಗಿದ್ದ ಭಾರತೀಯ ದಂಪತಿ ರಕ್ಷಣೆ

**ಆನಂದ್:** ಗುಜರಾತ್‌ನ ಆನಂದ್ ಜಿಲ್ಲೆಯ ದಂಪತಿ ಅಮೆರಿಕಕ್ಕೆ ತೆರಳುವಾಗ ಅಜೆರ್ಬೈಜಾನ್‌ನಲ್ಲಿ ಅಪಹರಿಸಿ ಒತ್ತೆಯಾಳಾಗಿ ಇರಿಸಲಾಗಿತ್ತು, ನಂತರ ಭಾರತೀಯ ವಿದೇಶಾಂಗ ಸಚಿವಾಲಯದ ಸಹಾಯದಿಂದ ಅವರನ್ನು ರಕ್ಷಿಸಲಾಯಿತು ಎಂದು ಸ್ಥಳೀಯ ಲೋಕಸಭಾ ಸಂಸದರು ತಿಳಿಸಿದ್ದಾರೆ. ಧ್ರುವ್ ಪಟೇಲ್ ಮತ್ತು ಅವರ ಪತ್ನಿ ದೀಪಿಕಾ ಅವರನ್ನು ಬಿಡುಗಡೆ ಮಾಡಲಾಗಿದೆ, ಸುರಕ್ಷಿತವಾಗಿದ್ದಾರೆ, ವಿದೇಶಾಂಗ ಸಚಿವಾಲಯದ ಸಕಾಲಿಕ ಪ್ರಯತ್ನಗಳಿಗೆ ಧನ್ಯವಾದಗಳು ಎಂದು ಸ್ಥಳೀಯ ಲೋಕಸಭಾ ಸಂಸದ ಆನಂದ್ ಮಿತೇಶ್ ಪಟೇಲ್ ವಿಡಿಯೋ ಹೇಳಿಕೆಯಲ್ಲಿ ತಿಳಿಸಿದ್ದಾರೆ. ಎರಡು ದಿನಗಳ ಹಿಂದೆ, ಧ್ರುವ್ ಪಟೇಲ್, ದೀಪಿಕಾ ಪಟೇಲ್ ಅವರ ಪೋಷಕರು ನನ್ನನ್ನು



ಸಂಪರ್ಕಿಸಿ ಅಜೆರ್ಬೈಜಾನ್‌ನಲ್ಲಿ ಅಪಹರಿಸಲಾಗಿದೆ ಎಂದು ನನಗೆ ತಿಳಿಸಿದರು. ಅವರು ಅಜೆರ್ಬೈಜಾನ್‌ನಿಂದ ಜನರು ತಮ್ಮ ಬಿಡುಗಡೆಗಾಗಿ ಸುಲಿಗೆಗಾಗಿ ಬೇಡಿಕೆ ಇಟ್ಟಿದ್ದ ವಿಡಿಯೋ ಕರೆಯನ್ನು ಸ್ವೀಕರಿಸಿದ್ದಾರೆ ಎಂದು ಬಿಜೆಪಿ ಸಂಸದರು ಹೇಳಿದರು. ಅಕ್ರಮ ಮಾರ್ಗಗಳ ಮೂಲಕ ಅಮೆರಿಕಕ್ಕೆ ಸುರಕ್ಷಿತವಾಗಿ ಸಾಗಿಸುವ ಭರವಸೆ ನೀಡಿದ್ದ ಏಜೆಂಟ್‌ಗಳ ಸಹಾಯದಿಂದ ಈ ಇಬ್ಬರನ್ನು ಅಮೆರಿಕಕ್ಕೆ ಹೋಗುವಾಗ ಅಪಹರಿಸಲಾಗಿದೆ ಎಂದು ಅವರು ಮಾಹಿತಿ ನೀಡಿದರು. ದಂಪತಿಯ ಚಿಂತಿತ ಕುಟುಂಬ ಸದಸ್ಯರು ಸಹಾಯಕ್ಕಾಗಿ ಮಿತೇಶ್ ಪಟೇಲ್ ಅವರ ಕಚೇರಿಯನ್ನು ಸಂಪರ್ಕಿಸಿದಾಗ, ಅವರು ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರನ್ನು ನವದೆಹಲಿಯಲ್ಲಿ ನಡೆಯುತ್ತಿರುವ ಸಂಸತ್ತಿನ ಅಧಿವೇಶನಕ್ಕಾಗಿ ಭೇಟಿಯಾದಾಗ ವಿದೇಶಾಂಗ ವ್ಯವಹಾರಗಳ ಸಚಿವರಿಗೆ ಉನ್ನತ ಮಟ್ಟದ ಪ್ರಾತಿನಿಧ್ಯ ನೀಡಿದರು. ವಿದೇಶಾಂಗ ವ್ಯವಹಾರಗಳ ಸಚಿವ ಅಜೆರ್ಬೈಜಾನ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿಯನ್ನು ಸಂಪರ್ಕಿಸಿ 24 ಗಂಟೆಗಳ ಒಳಗೆ, ಅಪಹರಿಸಲ್ಪಟ್ಟ ಇಬ್ಬರು ವ್ಯಕ್ತಿಗಳನ್ನು ರಕ್ಷಿಸಿ ದಕ್ಷಿಣ ಕಾಕಸಸ್ ಪ್ರದೇಶದ ದೇಶದ ರಾಜಧಾನಿ ಬಾಕುದಲ್ಲಿರುವ ರಾಯಭಾರ ಕಚೇರಿಗೆ ಕರೆತರಲಾಯಿತು ಎಂದು ಮಿತೇಶ್ ಪಟೇಲ್ ಹೇಳಿದರು ವಿದೇಶಗಳಿಗೆ ತೆರಳುವ ಬದಲಿಗೆ, ಇಲ್ಲಿ ಕೆಲಸ ಮಾಡಿ. ನಿಮಗೆ ಇಲ್ಲಿ ಉತ್ತಮ ಅವಕಾಶಗಳು ಸಿಗುತ್ತವೆ ಎಂದು ಲೋಕಸಭಾ ಸಂಸದರು ಹೇಳಿದರು. ದಂಪತಿಯನ್ನು ರಕ್ಷಿಸುವಲ್ಲಿ ಸರ್ಕಾರದ ಪ್ರಯತ್ನಗಳಿಗಾಗಿ ಅವರು ವಿದೇಶಾಂಗ ವ್ಯವಹಾರಗಳ ಸಚಿವರಿಗೆ, ಪ್ರಧಾನಿ ಮೋದಿ ಅವರಿಗೆ ಧನ್ಯವಾದ ಅರ್ಪಿಸಿದರು.

# ಏನಿದು ಅಮೆರಿಕಾದ ದ್ವಂದ್ವ ನಿಲುವು?


## ಅಕ್ಸಾಯ್ ಚಿನ್, ಪಿಒಕೆ ಭಾರತದ ಭೂಭಾಗ ಎಂದಿದ್ದ ಯುಎಸ್ ಯೂಟರ್ನ್

**ವಾಷಿಂಗ್ಟನ್:** ಭಾರತದ ವಿವಾದಿತ ಭೂಭಾಗಗಳಾಗಿರುವ ಪಿಒಕೆ ಹಾಗೂ ಅಕ್ಸಾಯ್ ಚಿನ್ ಕುರಿತು ಯಾವಾಗಲೂ ದ್ವಂದ್ವ ನಿಲುವನ್ನು ಹೊಂದಿದ್ದ ಅಮೆರಿಕಾ ಇತ್ತೀಚೆಗಷ್ಟೇ

**ಭಾರತದ ನಕ್ಷೆ ಡಿಲೀಟ್ ಮಾಡಿದ ಅಮೆರಿಕಾ**

ಭಾರತದ ಮೇಲಿನ ಸುಂಕವನ್ನು ಶೇ.18ಕ್ಕೆ ಇಳಿಕೆ ಮಾಡಿದ ಬಳಿಕ ಯುಎಸ್ ಪಾಕಿಸ್ತಾನ ಆಕ್ರಮಿತ ಕಾಶ್ಮೀರ, ಅಕ್ಸಾಯ್ ಚಿನ್ ಸೇರಿದಂತೆ ಜಮ್ಮು, ಕಾಶ್ಮೀರ ಮತ್ತು ಲಡಾಖ್‌ನ ಸಂಪೂರ್ಣ ಪ್ರದೇಶವನು ಭಾರತೀಯ ಪ್ರದೇಶವೆಂದು ತೋರಿಸುವ ನಕ್ಷೆಯನ್ನು ಸಾಮಾಜಿಕ ಜಾಲತಾಣದಲ್ಲಿ ಬಿಡುಗಡೆ ಮಾಡಿತ್ತು. ಆದರೆ, ಸದ್ಯ ಈ ನಿಲುವಿನಿಂದ ಮತ್ತೆ ಅಮೆರಿಕಾ ಯೂಟರ್ನ್ ಹೊಡೆದಂತೆ ಕಾಣಿಸುತ್ತಿದ್ದು, ಈ ಪೋಸ್ಟ್ ಅನ್ನು ಡಿಲೀಟ್ ಮಾಡಿದೆ.

**ಪಿಒಕೆ, ಅಕ್ಸಾಯ್ ಚಿನ್ ಭಾರತದ ಭೂಭಾಗವೆಂದಿದ್ದ ಯುಎಸ್ ನಕ್ಷೆ:** ಫೆ.7ರಂದು ಅಮೆರಿಕಾದ ಯುನೈಟೆಡ್ ಸ್ಟೇಟ್ಸ್ ಟ್ರೇಡ್ ರೆಪ್ರೆಸೆಂಟೇಟಿವ್ ಕಚೇರಿ ಭಾರತದೊಂದಿಗೆ ವ್ಯಾಪಾರ ಒಪ್ಪಂದ ಮಾಡಿಕೊಳ್ಳಲಿದ್ದೇವೆ ಎಂದು ಘೋಷಿಸಿದ ಕೆಲ ಹೊತ್ತಿನಲ್ಲೆ ತಮ್ಮ ಅಧಿಕೃತ x ಖಾತೆಯಲ್ಲಿ ಅಮೆರಿಕಾ ಭಾರತದ ನಕ್ಷೆಯೊಂದನ್ನು ಪೋಸ್ಟ್ ಮಾಡಿ ಜಗತ್ತಿನ ಗಮನ ಸೆಳೆದಿತ್ತು. ಈ ಪೋಸ್ಟ್ ಇಷ್ಟೊಂದು ಗಮನ ಸೆಳೆಯುವಂತೆ ಮಾಡಲು ಕಾರಣ ಅಮೆರಿಕಾ ಪಿಒಕೆ ಮತ್ತು ಅಕ್ಸಾಯ್ ಚಿನ್ ಸೇರಿದಂತೆ ಲಡಾಖ್‌ನ ಸಂಪೂರ್ಣ ಪ್ರದೇಶ ಭಾರತದ ಭೂಭಾಗ ಎಂದು ಗುರುತಿಸುವ ಮೂಲಕ, ತನ್ನ ಹಳೆಯ ನಿಲುವುಗಳಿಗೆ ವಿರುದ್ದವಾಗಿ ಅಂದರೆ, ಈ ಪ್ರದೇಶಗಳನ್ನು ವಿವಾದಿತ ಪ್ರದೇಶಗಳಾಗಿ ಗುರುತಿಸುವ ಅಮೆರಿಕನ್




**ಯುಎಸ್ ನಕ್ಷೆ ಬಿಡುಗಡೆ**

**ಭಾರತದ ವಿವಾದಿತ ಭೂಭಾಗಗಳಾಗಿರುವ ಪಿಒಕೆ ಹಾಗೂ ಅಕ್ಸಾಯ್ ಚಿನ್ ಭಾರತದ ಭೂಭಾಗಗಳೆಂದು ಯುಎಸ್ ನಕ್ಷೆಯೊಂದನ್ನು ಇತ್ತೀಚೆಗೆ ಬಿಡುಗಡೆ ಮಾಡಿತ್ತು. ಇದು ಅಮೆರಿಕಾ ಐತಿಹಾಸಿಕವಾಗಿ ಅನುಸರಿಸುಕೊಂಡು ಬರುತ್ತಿದ್ದ ದ್ವಂದ್ವ ನಿಲುವಿನಿಂದ ದೂರ ಸರಿದು ಸ್ಪಷ್ಟ ಚಿತ್ರಣವನ್ನು ನೀಡುವಂತಹ ಕೆಲಸ ಮಾಡಿತ್ತು. ಆದರೆ ಸದ್ಯ, ಈ ನಿಲುವಿನಿಂದ ಈಗ ಮತ್ತೆ ಯೂಟರ್ನ್ ಹೊಡೆದಿದ್ದು, ಈ ಪೋಸ್ಟ್ ಅನ್ನು ಡಿಲೀಟ್ ಮಾಡಿದೆ.**

ಪದ್ಧತಿಯನ್ನು ಮುರಿದಿತ್ತು.

ಇದನ್ನು ಗಮನಿಸಿದ ಹಲವು ವಿಶ್ಲೇಷಕರು ಇದು ಪಾಕಿಸ್ತಾನ ಹಾಗೂ ಚೀನಾ ದೇಶಗಳೊಂದಿಗೆ ಅಮೆರಿಕ ಸಂಬಂಧಗಳು ಕ್ಷೀಣಿಸುತ್ತಿರುವ ಹೊತ್ತಿನಲ್ಲಿ ಭಾರತವನ್ನು

- **ಪಿಒಕೆ, ಅಕ್ಸಾಯ್ ಚಿನ್ ಸಮಗ್ರ ಭಾರತದ ಭೂಭಾಗ ಎಂದು ನಕ್ಷೆ ಬಿಡುಗಡೆ ಮಾಡಿದ್ದ ಯುಎಸ್ ಯೂಟರ್ನ್**
- **ಅಮೆರಿಕಾದ ಯುಎಸ್‌ಟಿಆರ್ ತನ್ನ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದ ಪೋಸ್ಟ್ ಏಕಾಏಕಿ ಡಿಲೀಟ್**

ಒಲಿಸುವ ಉದ್ದೇಶಪೂರ್ವಕ ಭೌಗೋಳಿಕ ರಾಜಕೀಯ ನಡೆ ಎಂದು ನಂಬಿದ್ದರು. ಅಷ್ಟೇ ಅಲ್ಲದೆ, ಇಂಡೋ-ಫೆಸಿಫಿಕ್ ಭಾಗದಲ್ಲಿ ಅಮೆರಿಕಾಗೆ ಬಲವಾದ ಬೆಂಬಲವಾಗಿ ಭಾರತವಿದೆ ಎಂದು ತೋರಿಸಿಕೊಳ್ಳುವ ತಂತ್ರ ಎಂದು ಊಹಿಸಲಾಗಿತ್ತು.

**ತನ್ನ ನಕ್ಷೆಯನ್ನು ಏಕಾಏಕಿ ಡಿಲೀಟ್ ಮಾಡಿದ ಯುಎಸ್:** ಸದ್ಯ ಈ ಎಲ್ಲಾ ವಿಶ್ಲೇಷಣೆಗೆ ಬ್ರೇಕ್ ಹಾಕುವಂತೆ ಯುಎಸ್ ಟಿಆರ್ ತನ್ನ ಅಧಿಕೃತ ಖಾತೆಯಿಂದ ಈ ಪೋಸ್ಟ್ ಅನ್ನು ಡಿಲೀಟ್ ಮಾಡಿದೆ. ಇದು ಸದ್ಯ ಅಮೆರಿಕಾ ತನ್ನ ಸ್ಪಷ್ಟ ನಿಲುವಿನ ಫೇಸ್ ನಿಂದ ಮತ್ತೆ ದ್ವಂದ್ವ ನಿಲುವಿನತ್ತ ಯೂಟರ್ನ್ ಹೊಡೆದಿದೆ.


**ಭಾರತದ ನಿಲುವೇನು?:** ಆದಾಗ್ಯೂ, ಭಾರತ ಹಿಂದಿನಿಂದಲೂ ಭಾರತದ ಈ ವಿವಾದಿತ ಭೂಪ್ರದೇಶಗಳಾಗಿರುವ ಜಮ್ಮು ಮತ್ತು ಕಾಶ್ಮೀರ ಮತ್ತು ಲಡಾಖ್‌ನ ಸಂಪೂರ್ಣ ಕೇಂದ್ರಾಡಳಿತ ಪ್ರದೇಶವು ಭಾರತದ ಅವಿಭಾಜ್ಯ ಮತ್ತು ಅಳಿಸಲಾಗದ ಭಾಗವಾಗಿತ್ತು, ಇದೆ ಮತ್ತು ಯಾವಾಗಲೂ ಇರುತ್ತದೆ ಎಂದು ಭಾರತ ನಿರಂತರವಾಗಿ ಸಮರ್ಥಿಸಿಕೊಂಡಿದೆ. ಅಂತಯೇ, ಚೀನಾ ತನ್ನದೆಂದು ಹೇಳಿಕೊಳ್ಳುವ ಅಕ್ಸಾಯ್ ಚಿನ್ ಭಾರತೀಯ ಪ್ರದೇಶದ ಅವಿಭಾಜ್ಯ ಅಂಗವಾಗಿದೆ ಎಂದು ಸಹ ಸ್ಪಷ್ಟಪಡಿಸಿದೆ.

# ಸತ್ಯ ಬಾಯ್ಬಿಟ್ಟ ಪಾಕ್ ರಕ್ಷಣ ಸಚಿವ

## ಯುಎಸ್ ನಮ್ಮನ್ನು ಟಾಯ್ಲೆಟ್ ಪೇಪರ್‌ಗಿಂತ ಕೆಟ್ಟದಾಗಿ ನಡೆಸಿಕೊಂಡಿದೆ

**ಸುಳ್ಳಿನ ಕೋಟೆ ಕಟ್ಟಲು ಮುಂದು**

**ಇಸ್ಲಾಮಾಬಾದ್:** ಪಾಕಿಸ್ತಾನದ ನಾಯಕರು ಇತ್ತೀಚೆಗೆ ಅಮೆರಿಕಾರೊಂದಿಗೆ ಉತ್ತಮ ಸಂಬಂಧ ಹೊಂದಿಕೊಳ್ಳಲು ಯುಎಸ್ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅನ್ನು ತಲೆ ಮೇಲಿಟ್ಟುಕೊಂಡು ಮೆರೆಸುವ ಪ್ರಯತ್ನ ಮಾಡುತ್ತಿದ್ದು, ಅಮೆರಿಕಾ-ಪಾಕಿಸ್ತಾನ್ ಭಾಯಿಭಾಯಿ ಎಂಬಂತೆ ಜಗತ್ತಿನ ಮುಂದೆ ಸುಳ್ಳಿನ ಕೋಟೆ ಕಟ್ಟಲು ಮುಂದಾಗಿದ್ದಾರೆ. ಆದರೆ ಅಮೆರಿಕಾ ಯಾರಿಂದ ಲಾಭವೂ ಅವರಿಗೆ ಮಾತ್ರ ಕಿಮ್ಮತ್ತು ನೀಡುವದು ಎಂದು ಎಲ್ಲರಿಗೂ ತಿಳಿದಿದೆ. ಸದ್ಯ ವಿಚಾರ ಬಡಪಾಯಿ ಪಾಕಿಸ್ತಾನಕ್ಕೆ ಈಗ ಅರ್ಥವಾಗಿದ್ದು, ಅಮೆರಿಕಾ ತನ್ನನ್ನು ಟಾಯ್ಲೆಟ್ ಪೇಪರ್‌ಗಿಂತ ಕೆಟ್ಟದಾಗಿ ನಡೆಸಿಕೊಂಡಿದೆ ಎಂದು ಪಾಕಿಸ್ತಾನವೇ ಒಪ್ಪಿಕೊಂಡಿದೆ. ಹೌದು, ಈ ಮಾತನ್ನು ಯಾರೋ ಬೇರೆಯವರು ವಿಮರ್ಶೆ ಮಾಡುತ್ತಾ ಹೇಳಿರುವುದಲ್ಲ. ಬದಲಿಗೆ ಪಾಕಿಸ್ತಾನದ ರಕ್ಷಣಾ ಸಚಿವ ಖವಾಜ ಆಸಿಫ್ ಅವರೇ ಸ್ವತಃ ಈ ಸತ್ಯವನ್ನು ಒಪ್ಪಿಕೊಂಡಿದ್ದಾರೆ. ಅಲ್ಲದೆ ಅಮೆರಿಕಾ ವಿರುದ್ಧ ಹಲವು ಗಂಭೀರ ಆರೋಪಗಳನ್ನು ಮಾಡಿದ್ದಾರೆ.



**ಪಾಕಿಸ್ತಾನ-ಯುಎಸ್ ಸಂಬಂಧದ ಬಗ್ಗೆ ಅಚ್ಚರಿಯ ಹೇಳಿಕೆ ಕೊಟ್ಟ ಪಾಕ್ ರಕ್ಷಣಾ ಸಚಿವ:** ಪಾಕಿಸ್ತಾನದ ಸಂಸತ್ತನ್ನುದ್ದೇಶಿಸಿ ಮಾತನಾಡಿದ ಪಾಕ್ ರಕ್ಷಣಾ ಸಚಿವ ಖವಾಜ ಆಸೀಫ್, 1999ರ ನಂತರ ಅಮೆರಿಕಾದೊಂದಿಗೆ ಮರು ಹೊಂದಾಣಿಕೆ ಮಾಡಿಕೊಳ್ಳುವ ಪಾಕಿಸ್ತಾನದ ನಿರ್ಧಾರ, ಅದರಲ್ಲೂ ವಿಶೇಷವಾಗಿ ಅಫ್ಘಾನಿಸ್ತಾನದ ಯುದ್ದದ ಬಳಿಕ ಅವರೊಂದಿಗೆ ಸಂಬಂಧ ಬೆಳೆಸಿದ್ದು, ದೇಶಕ್ಕೆ ಶಾಶ್ವತ ಹಾನಿಯನ್ನುಂಡು ಮಾಡುವಂತೆ ಮಾಡಿದ ಅತಿದೊಡ್ಡ ತಪ್ಪು ಎಂದು ಹೇಳಿದ್ದಾರೆ. ಇದಕ್ಕೆ ಕಾರಣವನ್ನು ನೀಡಿದ್ದು, ಏಕೆಂದರೆ, ಪಾಕಿಸ್ತಾನವನ್ನು ಯುಎಸ್ ಟಾಯ್ಲೆಟ್ ಪೇಪರ್‌ಗಿಂತ ಕೆಟ್ಟದಾಗಿ ನಡೆಸಿಕೊಂಡಿದೆ ಮತ್ತು ನಮ್ಮನ್ನು ಆ ಟಾಯ್ಲೆಟ್ ಪೇಪರ್‌ನ್ನಂತೆ ತಮ್ಮ ಉದ್ದೇಶಗಳಿಗಾಗಿ ಬಳಸಿಕೊಂಡು ನಂತರ ಪಕ್ಕಕ್ಕೆ ಎಸೆದಿದ್ದಾರೆ ಎಂದು ಆರೋಪಿಸಿದ್ದಾರೆ.

**ಪಾಕಿಸ್ತಾನದಲ್ಲಿನ ಕಷ್ಟಗಳಿಗೆ ಅಮೆರಿಕಾ ಹೊಣೆ?:** 1980ರ ದಶಕದಲ್ಲಿ ಅಫ್ಘಾನಿಸ್ತಾನದಲ್ಲಿ ನಡೆದ ಸೋವಿಯತ್ ವಿರೋಧಿ ಯುದ್ಧವು ಯಾವುದೇ

- **ಪಾಕಿಸ್ತಾನದ ಬಗ್ಗೆ ಅಮೆರಿಕಾ ಹೊಂದಿರುವ ನಿಲುವಿನ ಬಗ್ಗೆ ಅಚ್ಚರಿಯ ಹೇಳಿಕೆ ಕೊಟ್ಟ ಪಾಕ್ ರಕ್ಷಣ ಸಚಿವ.**
- **ಅಮೆರಿಕಾ ಪಾಕಿಸ್ತಾನವನು ಟಾಯ್ಲೆಟ್ ಪೇಪರ್ ಗಿಂತ ಹೀನಾಯವಾಗಿ ನಡೆಸಿಕೊಂಡಿದೆಯಂತೆ.**
- **ಅಮೆರಿಕಾದೊಂದಿಗೆ ಸಂಬಂಧ ಪುನರ್ ಸ್ಥಾಪಿಸಿಕೊಂಡಿದ್ದು ಪಾಕಿಸ್ತಾನ ಮಾಡಿದ ಅತಿದೊಡ್ಡ ತಪ್ಪು ಎಂದು ವಾಗ್ದಾಳಿ.**

ನಿಜವಾದ ಧಾರ್ಮಿಕ ಕಡ್ಡಾಯಕ್ಕಿಂತ ಹೆಚ್ಚಾಗಿ ಅಮೆರಿಕಾದ ಭೌಗೋಳಿಕ ರಾಜಕೀಯ ಹಿತಾಸಕ್ತಿಗಳಿಂದ ನಿರ್ದೇಶಿಸಲ್ಪಟ್ಟಿದೆ ಎಂದಿದ್ದಾರೆ. ಅಲ್ಲದೆ, 2001ರ ಬಳಿಕ ಪಾಕಿಸ್ತಾನ ಅಮೆರಿಕಾದೊಂದಿಗೆ ಮರುಹೊಂದಾಣಿಕೆ ಮಾಡಿಕೊಂಡಿದ್ದರ ಫಲವಾಗಿಯೇ ಎಂದು ನಾವು ಹಿಂಸಾಚಾರ, ಮೂಲ ಭೂತೀಕರಣ ಮತ್ತು ಆರ್ಥಿಕ ಒತ್ತಡವನ್ನು ಅನುಭವಿಸುತ್ತಿದ್ದೇವೆ. ನಾವು ಅನುಭವಿಸಿದ ನಷ್ಟಗಳನ್ನು ಅವರು ಎಂದಿಗೂ ಸರಿದೂಗಿಸಲು ಸಾಧ್ಯವಿಲ್ಲ ಎಂದು ಅಮೆರಿಕಾದ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

**ಅಮೆರಿಕಾದ ವಿರುದ್ದ ಆರೋಪ**

**ಅಮೆರಿಕಾದೊಂದಿಗೆ ಪಾಕಿಸ್ತಾನದ ಇತ್ತೀಚಿನ ಸಂಬಂಧ ಬಹಳ ಆತ್ಮೀಯವಾಗಿದೆ ಎಂದೆಲ್ಲಾ ಪಾಕ್ ನಾಯಕರು ಜಗತ್ತಿನ ಮುಂದೆ ಬಿಂಬಿಸಿಕೊಳ್ಳಲು ಪ್ರಯತ್ನ ಮಾಡುತ್ತಿದ್ದರು. ಆದರೆ ಅಸಲಿ ಸತ್ಯ ಒಂದಲ್ಲ ಒಂದು ದಿನ ಬಯಲಿಗೆ ಬಂದೇ ಬರುತ್ತದೆ ಅಲ್ಲವೇ. ಅಂತೆಯೇ ಈಗ ಪಾಕ್ ರಕ್ಷಣ ಸಚಿವರೆ ಸತ್ಯ ಬಾಯ್ಬಿಟ್ಟಿದ್ದು ಅಮೆರಿಕಾ ಪಾಕಿಸ್ತಾನವನು ಟಾಯ್ಲೆಟ್ ಪೇಪರ್‌ಗಿಂತ ಹೀನಾಯವಾಗಿ ನಡೆಸಿಕೊಂಡಿದೆ ಎಂದು ಹೇಳಿದ್ದಾರೆ. ಅಷ್ಟೇ ಅಲ್ಲದೆ, ಅಮೆರಿಕಾದೊಂದಿಗೆ ಪಾಕಿಸ್ತಾನ ಮತ್ತೆ ತನ್ನ ಸಂಬಂಧವನ್ನು ಪುರ್ನಸ್ಥಾಪಿಸಿಕೊಂಡಿರುವುದು ಅತಿದೊಡ್ಡ ತಪ್ಪು ನಿರ್ಧಾರ ಎಂದು ಅಮೆರಿಕಾದ ವಿರುದ್ದ ಹಲವು ಆರೋಪಗಳನ್ನು ಮಾಡಿದ್ದಾರೆ.**

ಹೀಗೆ ಸಂಸತ್ತಿನಲ್ಲಿ ಪಾಕಿಸ್ತಾನದ ರಕ್ಷಣಾ ಸಚಿವರು ಆಡಿದ ಮಾತುಗಳು ಸದ್ಯ ಭಾರಿ ಚರ್ಚೆಯಲ್ಲಿದ್ದೂ, ಕೊನೆಗೂ ಅಮೆರಿಕಾ, ಪಾಕಿಸ್ತಾನದ ನಡುವಿನ ಸಂಬಂಧ ಆಹಾ ಅಮೋಘ..ಎಂದು ಪಾಕ್ ನಾಯಕರು ಬಿಂಬಿಸಿದ್ದ ಆಡಂಬರದ ಗಾಜಿನ ಕೋಟೆ ಜಗತ್ತಿನ ಮುಂದೆ ಹೊಡೆದುಹೋಗಿದ್ದು, ಅದರಲ್ಲಿ ಇರುವುದೆಲ್ಲಾ ಬರೀ ಖಾಲಿ ಗಾಳಿಯೇ ಹೊರತು. ಯಾವುದೇ ಸತ್ವವಿಲ್ಲ ಎಂದು ಸ್ವತಃ ಪಾಕ್ ನಾಯಕರೇ ಹೇಳುವಂತಹ ಸ್ಥಿತಿಗೆ ತಲುಪಿದ್ದಾರೆ.

## ಭಾರತ-ಅಮೆರಿಕ ಒಪ್ಪಂದ ಘೋರ ವೈಫಲ್ಯ; ಕಾಂಗ್ರೆಸ್

**ನವದೆಹಲಿ:** ಭಾರತ-ಅಮೆರಿಕ ಮಧ್ಯಂತರ ವ್ಯಾಪಾರ ಒಪ್ಪಂದದ ಕುರಿತು ಕಾಂಗ್ರೆಸ್ ಪ್ರಧಾನಿ ನರೇಂದ್ರ ಮೋದಿ ಅವರನ್ನು ಟೀಕಿಸಿದ್ದು, ಈ ಒಪ್ಪಂದವು ವಾಷಿಂಗ್ಟನ್‌ನಲ್ಲಿರುವ ಪ್ರಧಾನಿಯವರ ಉತ್ತಮ ಸ್ನೇಹಿತನಿಂದ ಮಾಡಲ್ಪಟ್ಟಿದೆ ಮತ್ತು ಇದು ನಮ್ಮ ರಾಜಕೀಯ ದಬ್ಬಾಳಿಕೆ ಮತ್ತು ಆರ್ಥಿಕ ರಾಜತಾಂತ್ರಿಕತೆಯ ಘೋರ ವೈಫಲ್ಯವನ್ನು ಪ್ರತಿಬಿಂಬಿಸುತ್ತದೆ ಎಂದು ಹೇಳಿದೆ. ಪ್ರಧಾನಿ ಮತ್ತು ಅವರ ಸುಳ್ಳುಗಾರರ ತಂಡ ಯಾವುದೇ ಸ್ಪಿನ್ ನೀಡಿದ್ದರೂ, ಅಮೆರಿಕವು ಭಾರತದಿಂದ ಒಪ್ಪಿಕೊಂಡಿದ್ದಕ್ಕಿಂತ ಹೆಚ್ಚಿನದನ್ನು ಪಡೆದುಕೊಂಡಿದೆ ಎಂಬುದು ಕಠೋರ ವಾಸ್ತವ ಎಂದು ಕಾಂಗ್ರೆಸ್ ಸಂವಹನ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಹೇಳಿದರು.

ಮೋದಿ ಸ್ನೇಹಪರರಲ್ಲದ ಹಲವಾರು ಸ್ವತಂತ್ರ ವಿಶ್ಲೇಷಕರು, ವ್ಯಾಖ್ಯಾನಕಾರರು ಭಾರತ-ಅಮೆರಿಕ ವ್ಯಾಪಾರ ಒಪ್ಪಂದವನ್ನು ಶರಣಾಗತಿ, ಅಸಮಪಾರ್ಶ್ವದ ಬದ್ಧತೆಗಳ ಸೆಟ್, ಮಾರಾಟ, ಅವಮಾನಕರ ಶರಣಾಗತಿ ಎಂದು ಟೀಕಿಸಿದ್ದಾರೆ ಎಂದು ರಮೇಶ್ ಹೇಳಿದರು. ಮೋದಿ ಅವರು ಅಧ್ಯಕ್ಷ ಟ್ರಂಪ್ ಅವರನ್ನು ಆಕ್ರಮಣಕಾರಿಯಾಗಿ ಓಲೈಸುವುದರ ಹೊರತಾಗಿಯೂ, ಸೆಪ್ಟೆಂಬರ್ 2019ರಲ್ಲಿ ಅವರ ಪರವಾಗಿ ಪ್ರಚಾರ ಮಾಡುವುದರ ಹೊರತಾಗಿಯೂ ಇದು ಸಂಭವಿಸಿದೆ ಎಂದು ಕಾಂಗ್ರೆಸ್ ನಾಯಕ ಹೇಳಿದರು.

## ತಮಿಳುನಾಡು ಚುನಾವಣೆ: ಸ್ಥಾನ ಹಂಚಿಕೆ ಬಗ್ಗೆ ಶೀಘ್ರ ಸಮಿತಿ ರಚನೆ

**ಚೆನ್ನೈ:** ತಮಿಳುನಾಡಿನಲ್ಲಿ ಮುಂಬರುವ ವಿಧಾನಸಭೆ ಚುನಾವಣೆಗೆ ಸಂಬಂಧಿಸಿದಂತೆ ಸ್ಥಾನ ಹಂಚಿಕೆ ಬಗ್ಗೆ ಚರ್ಚೆ ಆರಂಭಿಸುವಲ್ಲಿ ವಿಳಂಬ ಆಗುತ್ತಿದೆ ಎಂದು ಕಾಂಗ್ರೆಸ್ ಆತಂಕ ವ್ಯಕ್ತಪಡಿಸಿದ ಬೆನ್ನಲ್ಲೇ, ಆಡಳಿತಾರೂಢ ಡಿಎಂಕೆ ಮೈತ್ರಿ ಪಕ್ಷಗಳೊಂದಿಗೆ ಮಾತುಕತೆ ನಡೆಸಲು ಸಮಿತಿ ರಚಿಸಲಾಗುವುದು ಎಂದು ತಿಳಿಸಿದೆ. ಡಿಎಂಕೆ ಪಕ್ಷದ ವರಿಷ್ಠ ಹಾಗೂ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಶೀಘ್ರದಲ್ಲೇ ಈ ಸಮಿತಿಯನ್ನು ರಚಿಸಲಿದ್ದಾರೆ ಎಂದು ಡಿಎಂಕೆ ಬುಧವಾರ ಪ್ರಕಟಣೆಯಲ್ಲಿ ತಿಳಿಸಿದೆ.

## ಶಾಲೆ ಮೇಲೆ ಗುಂಡಿನ ದಾಳಿ 10 ವಿದ್ಯಾರ್ಥಿಗಳ ದುರ್ಮರಣ

**ಒಟ್ಟಾವಾ:** ಕೆನಡಾದ ಬ್ರಿಟಿಷ್ ಕೊಲಂಬಿಯಾದ ಟಂಬ್ಲರ್ ರಿಡ್ಜ್ ಪಟ್ಟಣದಲ್ಲಿರುವ ಶಾಲೆಯಲ್ಲಿ ಅಪರಿಚಿತ ಮಹಿಳಾ ದುಷ್ಕರ್ಮಿಗಳು ನಡೆಸಿದ ಸಾಮೂಹಿಕ ಗುಂಡಿನ ದಾಳಿಗೆ 10 ವಿದ್ಯಾರ್ಥಿಗಳು ಪ್ರಾಣ ಕಳೆದುಕೊಂಡಿದ್ದಾರೆ. ಘಟನೆಯಲ್ಲಿ 20ಕ್ಕೂ ಅಧಿಕ ಮಂದಿ ಗಾಯಗೊಂಡಿದ್ದಾರೆ. ನಾವು ನಡೆಸಿದ ಪ್ರತಿ ದಾಳಿಗೆ ಒಬ್ಬ ಶಂಕಿತ ಸಾವನ್ನಪ್ಪಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ. ಮೃತರ, ಉದ್ದೇಶ ಹಾಗೂ ಸಂದರ್ಭಗಳ ಕುರಿತು ಅಧಿಕಾರಿಗಳು ಮಾಹಿತಿಯನ್ನು ಇನ್ನೂ ನೀಡಿಲ್ಲ, ಸುಮಾರು 24 ಜನರು ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಟಂಬ್ಲರ್ ರಿಡ್ಜ್ ಮತ್ತು ಸುತ್ತಮುತ್ತಲಿನ ಮೊಬೈಲ್ ಫೋನ್‌ಗಳಿಗೆ ಕಳುಹಿಸಲಾದ ತುರ್ತು ಎಚ್ಚರಿಕೆಯಲ್ಲಿ ಶಂಕಿತರನ್ನು ಮಹಿಳೆ ಎಂದು ವಿವರಿಸಲಾಗಿದೆ. ನಿವಾಸಿಗಳು ಮನೆಯೊಳಗೆ ಉಳಿಯುವಂತೆ, ಆ ಪ್ರದೇಶಕ್ಕೆ ಹೋಗದಂತೆ ಮನವಿ ಮಾಡಲಾಗಿದೆ. ಟಂಬ್ಲರ್‌ರಿಡ್ಜ್ ಪ್ರದೇಶದಲ್ಲಿರುವವರು ಒಳಗೆ ಇರುವಂತೆ, ನಿಮ್ಮ ಮನೆಯ ಬಾಗಿಲುಗಳನ್ನು ಸರಿಯಾಗಿ ಲಾಕ್ ಮಾಡಿಕೊಳ್ಳುವಂತೆ ಮತ್ತು ಈ ಸಮಯದಲ್ಲಿ ವ್ಯವಹಾರಕ್ಕೆಂದು ಮನೆಯ ಹೊರಗೆ ಹೋಗದಂತೆ ಕೇಳಿಕೊಳ್ಳಲಾಗಿದೆ. ಇತರರೆಲ್ಲರೂ ಆ ಪ್ರದೇಶಕ್ಕೆ ಬರುವುದನ್ನು ತಪ್ಪಿಸಬೇಕು ಮತ್ತು ಪೊಲೀಸರ ನಿರ್ದೇಶನಗಳು ಮತ್ತು ನಿರ್ಬಂಧಗಳನ್ನು ಪಾಲಿಸಬೇಕು ಎಂದು ಹೇಳಲಾಗಿದೆ. ಗಂಭೀರವಾಗಿ ಗಾಯಗೊಂಡ ಇಬ್ಬರನ್ನು ಹೆಲಿಕಾಪ್ಟರ್ ಮೂಲಕ ಆಸ್ಪತ್ರೆಗೆ ಸಾಗಿಸಲಾಯಿತು, ಮೂರನೇ ವ್ಯಕ್ತಿ ಚಿಕಿತ್ಸೆಗಾಗಿ ಸಾಗಿಸುವಾಗ ಸಾವನ್ನಪ್ಪಿದ್ದಾರೆ.

## ಶರದ್ ಪವಾರ್ ಆರೋಗ್ಯದಲ್ಲಿ ಚೇತರಿಕೆ ಇನ್ನೆರಡು ದಿನಗಳಲ್ಲಿ ಬಿಡುಗಡೆ

**ಪುಣೆ:** ಎನ್‌ಸಿಪಿ ಅಧ್ಯಕ್ಷ ಶರದ್ ಪವಾರ್ (85) ಆರೋಗ್ಯದಲ್ಲಿ ಚೇತರಿಕೆ ಕಂಡುಬರುತ್ತಿದ್ದು ಇನ್ನೆರಡು ದಿನಗಳಲ್ಲಿ ಆಸ್ಪತ್ರೆಯಿಂದ ಬಿಡುಗಡೆ ಮಾಡುವ ಸಾಧ್ಯತೆ ಇದೆ ಎಂದು ವೈದ್ಯರು ಬುಧವಾರ ತಿಳಿಸಿದ್ದಾರೆ. ಎದೆ ಭಾಗದಲ್ಲಿ ಸೋಂಕು ಕಾಣಿಸಿಕೊಂಡಿರುವ ಕಾರಣ ಅವರನ್ನು ಸೋಮವಾರ ಪುಣೆಯ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು ಉಸಿರಾಟದ ಸಮಸ್ಯೆ, ನಿರಂತರ ಕೆಮ್ಮಿನಿಂದ ಬಳಲುತ್ತಿದ್ದ ಪವಾರ್ ಅವರನ್ನು ಬಾರಾಮತಿ ಪಟ್ಟಣದಲ್ಲಿನ ಅವರ ನಿವಾಸದಿಂದ ಪುಣೆ ಆಸ್ಪತ್ರೆಗೆ ಕರೆತರಲಾಗಿತ್ತು ಎಂದು ಅವರ ಕುಟುಂಬದವರು ತಿಳಿಸಿದ್ದಾರೆ. ಆಸ್ಪತ್ರೆಯಲ್ಲಿ ವಿವಿಧ ವೈದ್ಯಕೀಯ ಪರೀಕ್ಷೆಗಳನ್ನು ಮಾಡಲಾಗಿದೆ. ಪವಾರ್ ಎದೆ ಭಾಗದಲ್ಲಿ ಸೋಂಕು ಇರುವುದು ಸಿ.ಟಿ ಸ್ಕ್ಯಾನ್‌ನಲ್ಲಿ ಪತ್ತೆಯಾಗಿದೆ. ಅವರ ಹೃದಯ ಬಡಿತ, ಆಮ್ಲಜನಕದ ಮಟ್ಟಗಳು ಸ್ಥಿರವಾಗಿವೆ ಎಂದು ವೈದ್ಯರು ಮಾಹಿತಿ ನೀಡಿದ್ದಾರೆ. ಇತ್ತೀಚಿನ ಪ್ರವಾಸ ಮತ್ತು ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ನಿರಂತರವಾಗಿ ಭಾಗವಹಿಸಿದ್ದರಿಂದ ಉಂಟಾದ ದೈಹಿಕ ಒತ್ತಡ ಹಾಗೂ ದಣಿವು ಈ ಸ್ಥಿತಿಗೆ ಕಾರಣವಾಗಿರಬಹುದು ಎಂದು ವೈದ್ಯರು ಹೇಳಿದ್ದಾರೆ. ಪ್ರಸ್ತುತ ಸ್ಥಿತಿಯನ್ನು ಗಮನಿಸಿ ಮುಂದಿನ ಎರಡು ದಿನಗಳಲ್ಲಿ ಅವರನ್ನು ಬಿಡುಗಡೆ ಮಾಡುವ ಯೋಜನೆ ಇದೆ, ಇದು ಅವರ ಚೇತರಿಕೆಯನ್ನು ಅವಲಂಬಿಸಿದೆ ಎಂದು ಅವರನ್ನು ನೋಡಿಕೊಳ್ಳುತ್ತಿರುವ ವೈದ್ಯರು ಹೇಳಿದ್ದಾರೆ.


# ಭಾರತ, ಅಮೆರಿಕಾದ ವ್ಯಾಪಾರ ಒಪ್ಪಂದ ಸಂಪೂರ್ಣ ಶರಣಾಗತಿ

**ಹೊಸ ದಿಲ್ಲಿ:** ಭಾರತ- ಅಮೆರಿಕಾ ವ್ಯಾಪಾರ ಒಪ್ಪಂದದ ಮೂಲಕ 'ಭಾರತ ಮಾತೆಯನ್ನು ಮಾರಾಟ ಮಾಡಲಾಗಿದೆ' ಎಂದು ಲೋಕಸಭಾ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ವಾಗ್ದಾಳಿ ನಡೆಸಿದ್ದಾರೆ. ಲೋಕಸಭೆಯಲ್ಲಿ ಕೇಂದ್ರ ಬಜೆಟ್ ಮೇಲಿನ ಚರ್ಚೆಯಲ್ಲಿ ಭಾಗಿಯಾಗಿ ಮಾತನಾಡಿದ ಅವರು, ಅಮೆರಿಕಾದ ಜೊತೆಗಿನ ವ್ಯಾಪಾರ ಒಪ್ಪಂದವನ್ನು 'ಸಂಪೂರ್ಣ ಶರಣಾಗತಿ' ಎಂದು ವ್ಯಾಖ್ಯಾನಿಸಿದರು.

ಭಾರತ, ಅಮೆರಿಕಾದ ಒಪ್ಪಂದದ ಬಗ್ಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ ಅವರು, ಈ ಒಪ್ಪಂದ ರೈತರಿಗೆ ಮಾರಕವಾಗಿದೆ ಹಾಗೂ ನಮ್ಮ ದೇಶದ ಇಂಧನ ಭದ್ರತೆಯನ್ನು ಅಮೆರಿಕಾದ ಕೈಗೆ ಒಪ್ಪಿಸಲಾಗಿದೆ ಎಂದು ಗಂಭೀರವಾಗಿ ಆರೋಪ ಮಾಡಿದರು. ಒಂದು ವೇಳೆ 'ಇಂಡಿಯಾ ಒಕ್ಕೂಟ' ದ ಸರ್ಕಾರವು ಅಮೆರಿಕಾದ ಜೊತೆಗೆ ವ್ಯಾಪಾರ ಒಪ್ಪಂದ ಮಾಡಿಕೊಂಡಿದ್ದರೆ ಈ ರೀತಿ ಆಗುತ್ತಿರಲಿಲ್ಲ. ಬದಲಾಗಿ, ಭಾರತವನ್ನು ಸಮಾನ ಪಾಲುದಾರರನ್ನಾಗಿ ಪರಿಗಣಿಸಬೇಕು ಎಂದು ಸ್ಪಷ್ಟವಾಗಿ ತಿಳಿಸುತ್ತಿತ್ತು ಎಂದು ತಿರುಗೇಟು ನೀಡಿದರು.

**ನಿಮಗೆ ನಾಚಿಕೆ ಆಗುವುದಿಲ್ಲವೇ?:** ಇದೇ ಸಂದರ್ಭದಲ್ಲಿ ಕೇಂದ್ರ ಸರ್ಕಾರ ಮತ್ತು ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಕಿಡಿಕಾರಿದ ಅವರು, ನೀವು ಭಾರತವನ್ನು ಮಾರಾಟ ಮಾಡಿದ್ದೀರಿ. ನಮ್ಮ ದೇಶವನ್ನು ಮಾರಾಟ ಮಾಡಲು ನಿಮಗೆ ನಾಚಿಕೆ ಆಗುವುದಿಲ್ಲವೇ? ಎಂದು ಪ್ರಶ್ನಿಸಿದ್ದಾರೆ. ಅಮೆರಿಕಾದ ಜೊತೆಗಿನ ಈ ವ್ಯಾಪಾರ ಒಪ್ಪಂದದಿಂದಾಗಿ ನಾವು ಯಾರಿಂದ ತೈಲವನ್ನು ಖರೀದಿಸಬೇಕು ಎಂಬುವುದನ್ನು ಅಮೆರಿಕಾ ನಿರ್ಧಾರ ಮಾಡುವಂತಾಗಿದೆ ಎಂದು ಆರೋಪ ಮಾಡಿದರು.

ಮುಂದಿನ ದಿನಗಳಲ್ಲಿ ಅಮೆರಿಕಾದ ಕೃಷಿ ಉತ್ಪನ್ನಗಳು ನಮ್ಮ ದೇಶದ ಮಾರುಕಟ್ಟೆಗೆ ಲಗ್ಗೆ ಇಡುತ್ತಿರುವುದಿಂದ ನಮ್ಮ ರೈತರು ಸಂಕಷ್ಟಕ್ಕೆ ಒಳಗಾಗುವಂತಾಗಿದೆ. ಇದರಿಂದ ರೈತರ ಹಿತಾಸಕ್ತಿಗೂ ಧಕ್ಕೆ ಆಗುತ್ತದೆ. ಹಾಗಾಗಿ ಈ ಒಪ್ಪಂದವನ್ನು ಒಪ್ಪಲು ಸಾಧ್ಯವಿಲ್ಲ ಎಂದು ಕೇಂದ್ರ ಸರ್ಕಾರದ ವಿರುದ್ಧ ರಾಹುಲ್ ಗಾಂಧಿ ಆಕ್ರೋಶ ಹೊರಹಾಕಿದರು.



**ಭಾರತ ಮಾತೆಯನ್ನು ಮಾರಾಟ ಮಾಡಲಾಗಿದೆ**

**ಭಾರತ ಮತ್ತು ಅಮೆರಿಕಾ ವ್ಯಾಪಾರ ಒಪ್ಪಂದವನ್ನು ಮುಂದಿಟ್ಟುಕೊಂಡು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಕೇಂದ್ರ ಸರ್ಕಾರ ಮತ್ತು ಪ್ರಧಾನಿ ನರೇಂದ್ರ ಮೋದಿ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ. ಲೋಕಸಭೆಯಲ್ಲಿ ಬಜೆಟ್ ಮೇಲಿನ ಚರ್ಚೆಯಲ್ಲಿ ಭಾಗಿಯಾಗಿ ಮಾತನಾಡಿದ ಅವರು, ಅಮೆರಿಕಾದ ಜೊತೆಗಿನ ಭಾರತದ ವ್ಯಾಪಾರ ಒಪ್ಪಂದ ಸಂಪೂರ್ಣ ಶರಣಾಗತಿ ಎಂದು ಆರೋಪ ಮಾಡಿದ್ದಾರೆ. ಅಲ್ಲದೆ ಭಾರತ ಮಾತೆಯನ್ನು ಮಾರಾಟ ಮಾಡಲಾಗಿದೆ ಎಂಬ ಗಂಭೀರ ಆರೋಪವನ್ನ ಮಾಡಿದ್ದಾರೆ.**

**ಬಿಜೆಪಿ ಟೀಕೆ:** ಭಾರತ ಮತ್ತು ಅಮೆರಿಕಾದ ಜೊತೆಗಿನ ವ್ಯಾಪಾರ ಒಪ್ಪಂದದ ಬಗ್ಗೆ ರಾಹುಲ್ ಗಾಂಧಿ ಟೀಕೆಗೆ ಬಿಜೆಪಿ ತೀಕ್ಷ್ಣವಾಗಿ ಪ್ರತ್ಯುತ್ತರ ನೀಡಿದೆ. ರಾಹುಲ್ ಗಾಂಧಿಯನ್ನು ಜಾಣ ಮೂರ್ಖ ಎಂದು ಲೇವಡಿ ಮಾಡಿರುವ ಬಿಜೆಪಿ ರಾಹುಲ್ ಗಾಂಧಿ ಆರೋಪದಲ್ಲಿ ಸತ್ಯಾಂಶ ಇಲ್ಲ ಎಂದಿದೆ. ರಾಹುಲ್ ಗಾಂಧಿ ಭಾಷಣದ ಬೆನ್ನಲ್ಲೇ ಪತ್ರಿಕಾಗೋಷ್ಠಿಯನ್ನು ಕರೆದ ಬಿಜೆಪಿ ರಾಷ್ಟ್ರೀಯ ವಕ್ತಾರ ಸುಧಾಂಶು ತ್ರಿವೇದಿ, ರಾಹುಲ್ ಗಾಂಧಿ ಮತ್ತು ಕಾಂಗ್ರೆಸ್ ಪಕ್ಷದ ವಿರುದ್ಧ ಆಕ್ರೋಶ ಹೊರಹಾಕಿದರು.

ಸದನದಲ್ಲಿ ವಿರೋಧ ಪಕ್ಷದ ನಾಯಕರಾಗಿ ರಾಹುಲ್ ಗಾಂಧಿ ಸಂಸದೀಯ ಘನತೆಯನ್ನು ಕುಗ್ಗಿಸಿದ್ದಾರೆ ಎಂದು ಆರೋಪ ಮಾಡಿದರು. ಅಲ್ಲದೆ ರಾಹುಲ್ ಆರೋಪ ಅಸಂಬದ್ಧ ಮತ್ತು ಸುಳ್ಳುಗಳಿಂದ ಕೂಡಿದೆ ಎಂದಿದ್ದಾರೆ.

# ಭಾರತದೊಂದಿಗಿನ ವ್ಯಾಪಾರ ಒಪ್ಪಂದ ದ್ವಿದಳ ಧಾನ್ಯ ಕೈಬಿಟ್ಟ ಅಮೆರಿಕ

**ವಾಷಿಂಗ್ಟನ್:** ಭಾರತ-ಅಮೆರಿಕ ನಡುವಿನ ದ್ವಿಪಕ್ಷೀಯ ವ್ಯಾಪಾರ ಒಪ್ಪಂದಕ್ಕೆ (ಬಿಟಿಎ) ಸಂಬಂಧಿಸಿದಂತೆ ಟ್ರಂಪ್ ಆಡಳಿತವು ಒಪ್ಪಂದದ ರೂಪುರೇಷೆ ನಿಬಂಧನೆಗಳನ್ನು ಒಳಗೊಂಡ ಪರಿಷ್ಕೃತ ಫ್ಯಾಕ್ಟ್‌ಶೀಟ್ ಪ್ರಕಟಿಸಿದೆ. ಸುಂಕ ಕಡಿತಗೊಳಿಸಿ, ಸುಂಕ ರಹಿತವಾಗಿ ಭಾರತವು ಆಮದು ಮಾಡಿಕೊಳ್ಳಲಿದೆ ಎಂದು ಅಮೆರಿಕ ಹೇಳಿದ್ದ ಕೃಷಿ ಉತ್ಪನ್ನಗಳ ಪಟ್ಟಿಯಲ್ಲಿ 'ದ್ವಿದಳ ಧಾನ್ಯ'ವನ್ನು ಕೈಬಿಡಲಾಗಿದೆ. ಫೆಬ್ರುವರಿ 9ರಂದು ಶ್ವೇತಭವನ ಪ್ರಕಟಿಸಿದ್ದ ಫ್ಯಾಕ್ಟ್ ಶೀಟ್‌ನಲ್ಲಿ, ಅಮೆರಿಕದಿಂದ ಸುಂಕ ಕಡಿತವಾಗಿ ಅಥವಾ ಸುಂಕ ರಹಿತವಾಗಿ ಭಾರತದ ಮಾರುಕಟ್ಟೆ ಪ್ರವೇಶಿಸಲಿರುವ ಕೃಷಿ ಉತ್ಪನ್ನಗಳಲ್ಲಿ ಮುಖ್ಯವಾಗಿ 'ದ್ವಿದಳ ಧಾನ್ಯ'ವನ್ನು ಉಲ್ಲೇಖಿಸಲಾಗಿತ್ತು.

ಪರಿಷ್ಕೃತ ಫ್ಯಾಕ್ಟ್‌ಶೀಟ್‌ನಲ್ಲಿ ಡಿಸ್ಟಿಲರ್ಸ್ ಧಾನ್ಯಗಳು, ಕೆಂಪು ಜೋಳ, ಡ್ರೈಫ್ರೂಟ್‌ಗಳು, ತಾಜಾ ಮತ್ತು ಸಂಸ್ಕರಿಸಿದ ಹಣ್ಣು, ಸೋಯಾಬೀನ್ ಎಣ್ಣೆ, ವೈನ್ ಮತ್ತು ಮದ್ಯವನ್ನು ಹಾಗೆಯೇ ಉಳಿಸಿಕೊಂಡು, ದ್ವಿದಳ ಧಾನ್ಯ ಮತ್ತು ಇತರ ಕೃಷಿ ಉತ್ಪನ್ನಗಳನ್ನು ತೆಗೆದುಹಾಕಲಾಗಿದೆ. ಜತೆಗೆ, ಈ ಉತ್ಪನ್ನಗಳನ್ನು ಖರೀದಿಸಲು ಭಾರತ ಬದ್ಧವಾಗಿದೆ ಎಂಬ ಪದವನ್ನು ಕೈಬಿಟ್ಟು, ಖರೀದಿಸಲು ಬಯಸಿದೆಎಂದು ಬದಲಿಸಲಾಗಿದೆ. ಭಾರತ ಮತ್ತು ಅಮೆರಿಕ ನಡುವಿನ ವ್ಯಾಪಾರ ಒಪ್ಪಂದದ ಮಧ್ಯಂತರ ಚೌಕಟ್ಟು ರೂಪುಗೊಂಡ ಬೆನ್ನಲ್ಲೇ ಫ್ಯಾಕ್ಟ್ ಶೀಟ್ ಅನ್ನು ಶ್ವೇತಭವನ ಪ್ರಕಟಿಸಿತ್ತು. ಭಾರತವು ಅಮೆರಿಕದಿಂದ ಮುಂದಿನ 5 ವರ್ಷಗಳ ಅವಧಿಗೆ, ಇಂಧನ, ವಿಮಾನ ಮತ್ತು ವಿಮಾನದ ಬಿಡಿಭಾಗಗಳು, ಅಮೂಲ್ಯ ಲೋಹಗಳು, ಸಾಫ್ಟ್‌ವೇರ್, ಹಾರ್ಡ್‌ವೇರ್, ಡಿಜಿಟಲ್ ಉಪಕರಣಗಳು, ಕಲ್ಲಿದ್ದಲನ್ನು ಖರೀದಿಸಲು ಒಪ್ಪಂದ ಮಾಡಿಕೊಂಡಿದೆ ಎಂದು ಉಭಯ ದೇಶಗಳ ಜಂಟಿ ಪ್ರಕಟಣೆ ತಿಳಿಸಿತ್ತು.

**ಸೀಮಿತಗೊಳಿಸುತ್ತೇವೆ:** ಅಮೆರಿಕದ ಕೃಷಿ ಉತ್ಪನ್ನಗಳ ಭಾರತ ಮಾರುಕಟ್ಟೆ ಪ್ರವೇಶವನ್ನು ಸೀಮಿತಗೊಳಿಸುತ್ತೇವೆ. ಅದಕ್ಕಾಗಿ ಸುಂಕ ನಿರ್ಧರಿಸುವಾಗ ನಮ್ಮದೇ ಕಾರ್ಯವಿಧಾನ ಬಳಸುತ್ತೇವೆ. ಹಾಗಾಗಿ ಇದು ನಮ್ಮ ಕೃಷಿಕರ ಮೇಲೆ ಪರಿಣಾಮ ಬೀರುವುದಿಲ್ಲ ಎಂದು ವಾಣಿಜ್ಯ ಕಾರ್ಯದರ್ಶಿ



**ನಕ್ಷೆ ಅಳಿಸಿ ಹಾಕಿದ ಯುಎಸ್‌ಟಿಆರ್**

**ಪಾಕ್ ಆಕ್ರಮಿತ ಕಾಶ್ಮೀರ ಸೇರಿದಂತೆ ಜಮ್ಮು ಕಾಶ್ಮೀರದ ಸಂಪೂರ್ಣ ಪ್ರದೇಶ ಹಾಗೂ ಅಕ್ಸಾಯ್ ಚಿನ್ ಅನ್ನು ಭಾರತದ ಭಾಗವಾಗಿ ತೋರಿಸಿದ ನಕ್ಷೆಯನ್ನು ಅಮೆರಿಕದ ವ್ಯಾಪಾರ ಪ್ರತಿನಿಧಿ ಕಚೇರಿ 'ಎಕ್ಸ್' ಪೋಸ್ಟ್ ನಿಂದ ತೆಗೆದುಹಾಕಿದೆ. ಭಾರತ ಮತ್ತು ಅಮೆರಿಕ ನಡುವಿನ ವ್ಯಾಪಾರ ಒಪ್ಪಂದದ ಮಧ್ಯಂತರ ಚೌಕಟ್ಟು ರೂಪುಗೊಂಡ ಬೆನ್ನಲ್ಲೇ ಯುಎಸ್ ಟಿಆರ್ ಈ ನಕ್ಷೆಯೊಂದಿಗೆ ಸಾಮಾಜಿಕ ಜಾಲತಾಣದಲ್ಲಿ ಒಪ್ಪಂದ ಮಾಹಿತಿ ಹಂಚಿಕೊಂಡಿತ್ತು. ಇದೀಗ ನಕ್ಷೆಯನ್ನು ಯುಎಸ್ ಟಿಆರ್‌ನ 'ಎಕ್ಸ್' ಹ್ಯಾಂಡಲ್‌ನಿಂದ ಅಳಿಸಿ ಹಾಕಲಾಗಿದೆ. ಈ ಹಿಂದೆಯೆಲ್ಲಾ ಪಿಒಕೆ ಮತ್ತು ಅಕ್ಸಾಯ್ ಚಿನ್ ಪ್ರದೇಶವನ್ನು ಪ್ರತ್ಯೇಕವಾಗಿ ತೋರಿಸುವ ರೇಖೆಯೊಂದಿಗೆ ಭಾರತದ ನಕ್ಷೆಯನ್ನು ಪ್ರಕಟಿಸಿತ್ತು.**

ರಾಜೇಶ್ ಅಗರ್‌ವಾಲ್ ಹೇಳಿದ್ದಾರೆ. ಭಾರತ-ಅಮೆರಿಕ ನಡುವಿನ ಅಂತಿಮ ವ್ಯಾಪಾರ ಒಪ್ಪಂದಕ್ಕೆ ಮಾರ್ಚ್ ಅಂತ್ಯದ ವೇಳೆಗೆ ಸಹಿ ಹಾಕುವ ಸಾಧ್ಯತೆ ಇದೆ ಎಂದಿದ್ದಾರೆ.

# ಕಾರ್ಮಿಕ ಸಂಘಟನೆಗಳಿಂದ ಇಂದು ಭಾರತದಾದ್ಯಂತ ಮುಷ್ಕರ

## ಸಾರ್ವಜನಿಕ ಬ್ಯಾಂಕಿಂಗ್, ಸಾರಿಗೆ ಮೇಲೆ ಪರಿಣಾಮ ಬೀರುವ ಸಾಧ್ಯತೆ, ಮುಷ್ಕರದಲ್ಲಿ ಕನಿಷ್ಠ 30 ಕೋಟಿ ಕಾರ್ಮಿಕರು ಭಾಗವಹಿಸಲಿದ್ದಾರೆ

**ಹೊಸದಿಲ್ಲಿ:** ಕೇಂದ್ರ ಸರ್ಕಾರದ ಕಾರ್ಮಿಕ, ಕೃಷಿ ಮತ್ತು ಆರ್ಥಿಕ ನೀತಿಗಳನ್ನು ವಿರೋಧಿಸಿ ಭಾರತದಾದ್ಯಂತ 10 ಕ್ಕೂ ಹೆಚ್ಚು ಕಾರ್ಮಿಕ ಸಂಘಗಳು ಗುರುವಾರ ರಾಷ್ಟ್ರವ್ಯಾಪಿ ಸಾರ್ವತ್ರಿಕ ಮುಷ್ಕರಕ್ಕೆ ಕರೆ ನೀಡಿವೆ. ಈ ಮುಷ್ಕರವು ಸಾರ್ವಜನಿಕ ಬ್ಯಾಂಕಿಂಗ್, ಸಾರಿಗೆ ಮೇಲೆ ಪರಿಣಾಮ ಬೀರುವ ಸಾಧ್ಯತೆಯಿದೆ. ಫೆಬ್ರವರಿ 12 ರಂದು ಕರೆ ನೀಡಲಾಗಿರುವ ಮುಷ್ಕರದಲ್ಲಿ ಕನಿಷ್ಠ 30 ಕೋಟಿ ಕಾರ್ಮಿಕರು ಭಾಗವಹಿಸಲಿದ್ದಾರೆ ಎಂದು ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಅಮರ್‌ಜೀತ್ ಕೌರ್ ಹೇಳಿದ್ದಾರೆ. ಬಂದ್ 600 ಜಿಲ್ಲೆಗಳ ಮೇಲೆ ಪರಿಣಾಮ ಬೀರುವ ಸಾಧ್ಯತೆಯಿದೆ ಎಂದು ಹೇಳಿದ್ದಾರೆ.

**600 ಜಿಲ್ಲೆಗಳ ಮೇಲೆ ಪರಿಣಾಮ**

**10 ಕೇಂದ್ರ ಕಾರ್ಮಿಕ ಸಂಘಟನೆಗಳು ಭಾಗಿ:** 10 ಕೇಂದ್ರ ಕಾರ್ಮಿಕ ಸಂಘಟನೆಗಳು, ರಾಷ್ಟ್ರೀಯ ಕಾರ್ಮಿಕ ಒಕ್ಕೂಟಗಳು ಮುಷ್ಕರಕ್ಕೆ ಬೆಂಬಲ ಘೋಷಿಸಿವೆ. ಯುನೈಟೆಡ್ ಫಾರ್ಮರ್ಸ್ ಫ್ರಂಟ್, ಕೃಷಿ ಕಾರ್ಮಿಕ ಸಂಘಟನೆಗಳು, ಸಿಪಿಐ (ಎಂ), ಸಿಪಿಐ ಸೇರಿದಂತೆ ವಿವಿಧ ರಾಜಕೀಯ ಪಕ್ಷಗಳು ಮುಷ್ಕರಕ್ಕೆ ತಮ್ಮ ಬೆಂಬಲವನ್ನು ಘೋಷಿಸಿವೆ.

ರಾಜ್ಯ ಸರಕಾರಿ ನೌಕರರು, ಶಿಕ್ಷಕರ ಸಂಘಟನೆಗಳು, ಬ್ಯಾಂಕ್‌ಗಳ ನೌಕರರು, ವಿಮಾ, ರಕ್ಷಣಾ, ರೈಲ್ವೆ, ಬಂದರು, ವಿಮಾನಯಾನ ಮತ್ತು ಸಂಬಂಧಿತ ಗುತ್ತಿಗೆ ಕಾರ್ಮಿಕರು ರಾಷ್ಟ್ರೀಯ ಮುಷ್ಕರಕ್ಕೆ



ಬೆಂಬಲ ನೀಡಲಿದ್ದಾರೆ. ಮಹಿಳೆಯರು, ವಿದ್ಯಾರ್ಥಿ ಮತ್ತು ಯುವ ಸಂಘಟನೆಗಳು ಸಹ ಮುಷ್ಕರದ ದಿನದಂದು ಬೀದಿಗಿಳಿದು ಪ್ರತಿಭಟನೆ ನಡೆಸಲಿವೆ. ನವೆಂಬರ್ 2025 ರಲ್ಲಿ ಸೂಚಿಸಲಾದ ನಾಲ್ಕು ಹೊಸ ಕಾರ್ಮಿಕ ಸಂಹಿತೆಗಳು ಮತ್ತು ನಿಯಮಗಳನ್ನು ರದ್ದುಗೊಳಿಸುವುದು, ವಿದ್ಯುತ್ ತಿದ್ದುಪಡಿ ಮಸೂದೆ, ಪರಮಾಣು ಶಕ್ತಿಯ ಸುಸ್ಥಿರ ಬಳಕೆ ಮತ್ತು ಪ್ರಗತಿ ತಕ್ಷಣದ ಬೇಡಿಕೆಗಳಾಗಿವೆ. ಬಿಜೆಪಿ ಆಡಳಿತವಿರುವ ರಾಜ್ಯಗಳಲ್ಲಿ ಪ್ರಸ್ತಾವಿತ ಮುಷ್ಕರದ ಪರಿಣಾಮದ ಬಗ್ಗೆ, ಒಡಿಶಾ ಮತ್ತು ಅಸ್ಸಾಂ ಸಂಪೂರ್ಣವಾಗಿ ಸ್ಥಗಿತಗೊಳ್ಳಲಿವೆ ಮತ್ತು ಇತರ

**ಯಾವುದಕ್ಕೆಲ್ಲ ವಿನಾಯಿತಿ**

**ಹಾಲು, ಪತ್ರಿಕೆಗಳು, ಆಸ್ಪತ್ರೆಗಳು, ಮೆಡಿಕಲ್, ಅಗ್ನಿ ಶಾಮಕ, ಆಂಬ್ಯುಲೆನ್ಸ್‌ಗಳಂತಹ ಅಗತ್ಯ ಸೇವೆಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ವಲಯಗಳ ಕಾರ್ಮಿಕರು ಈ ಮುಷ್ಕರದಲ್ಲಿ ಭಾಗಿಯಾಗಲಿದ್ದಾರೆ.**

ರಾಜ್ಯಗಳ ಮೇಲೂ ಮುಷ್ಕರ ದೊಡ್ಡ ಪರಿಣಾಮ ಬೀರಲಿದೆ ಎಂದು ಅಮರ್‌ಜೀತ್ ಕೌರ್ ಹೇಳಿದ್ದಾರೆ.

**ಶಾಲೆಗಳು, ಕಾಲೇಜುಗಳಿಗೆ ರಜೆ?:** ದೇಶಾದ್ಯಂತ ಶಾಲೆಗಳು, ಕಾಲೇಜುಗಳು ಮತ್ತು ಇತರ ಶಿಕ್ಷಣ ಸಂಸ್ಥೆಗಳನ್ನು ಮುಚ್ಚುವ ಬಗ್ಗೆ ಯಾವುದೇ ಅಧಿಕೃತ ಘೋಷಣೆ ಬಂದಿಲ್ಲ. ಆದಾಗ್ಯೂ, ಕೇರಳದಂತಹ ಕೆಲವು ರಾಜ್ಯಗಳಲ್ಲಿ, ಶಿಕ್ಷಕರು ಮತ್ತು ವಿದ್ಯಾರ್ಥಿ ಸಂಘಟನೆಗಳು ಬೆಂಬಲ ಘೋಷಿಸಿರುವುದರಿಂದ ಶಾಲೆಗಳು ಮತ್ತು ಕಾಲೇಜುಗಳು ಮುಚ್ಚುವ ಸಾಧ್ಯತೆ ಇದೆ. ಕರ್ನಾಟಕದಲ್ಲಿ ಬಂದ್ ಪ್ರಭಾವ ಕಡಿಮೆಯಿರಲಿದ್ದು, ಶಾಲಾ ಕಾಲೇಜುಗಳಿಗೆ ರಜೆ ಕೊಡುವ ಸಾಧ್ಯತೆ ಕಡಿಮೆಯಿದೆ. ಪ್ರತಿಭಟನೆಗಳು ಮತ್ತು ಸಂಭವನೀಯ ರಸ್ತೆ ತಡೆಗಳಿಂದಾಗಿ ಕೆಲವು ಪ್ರದೇಶಗಳಲ್ಲಿ ಸಾರ್ವಜನಿಕ ಸಾರಿಗೆ ಸೇವೆಗಳು ಸಹ ವ್ಯತ್ಯಯಗೊಳ್ಳುವ ಸಾಧ್ಯತೆ ಇದೆ. ವಿಮಾನ ನಿಲ್ದಾಣಗಳು ಸಾಮಾನ್ಯವಾಗಿ ಕಾರ್ಯನಿರ್ವಹಿಸುವ ಸಾಧ್ಯತೆಯಿದೆ.

**ಉದ್ಯೋಗದಾತರಿಗೆ ಮುಷ್ಕರದ ಸೂಚನೆ**

**ನಾನಾ ಬೇಡಿಕೆಗಳನ್ನು ಮುಂದಿಟ್ಟುಕೊಂಡು ಫೆ.12 ರಂದು ಕಾರ್ಮಿಕ ಸಂಘಟನೆಗಳಿಂದ ಅಖಿಲ ಭಾರತ ಮುಷ್ಕರ ನಡೆಯಲಿದೆ. ಎಲ್ಲಾ ಉದ್ಯೋಗದಾತರಿಗೆ ಮುಷ್ಕರದ ಸೂಚನೆ ನೀಡಲಾಗಿದೆ. ಕೈಗಾರಿಕಾ, ಕೃಷಿ, ವಾಣಿಜ್ಯ ಮತ್ತು ವ್ಯಾಪಾರ ವಲಯಗಳು 24 ಗಂಟೆ ಸ್ಥಗಿತಗೊಳ್ಳಲಿವೆ. ಅಂಗಡಿಗಳು, ಮಾರುಕಟ್ಟೆಗಳು ಮುಚ್ಚಲಿದೆ.**

